# ಅಂತರಂಗ

1 ANNA

T.K. Ramachandra
Acharya.
6th Class
Date 8/...



# ಪ್ರಸಾದ SRI PRASADA

ಭಾರತದಲ್ಲಿ ಅನೇಕ ವರ್ಷಗಳಿಂದ ಸಂಚರಿಸುತ್ತಲಿರುವ
ವಿದ್ಯೆಯಲ್ಲಿ ಪಾರಂಗತರಾದ ತನ್ನ ಮಂತ್ರಶಕ್ತಿಯಿಂದ
ಅನೇಕ ಜನರಿಗೆ ಪ್ರಯೋಜನವನ್ನುಂಟುಮಾಡಿದ
ಯೋಗಿ ಮಹಾಶಯರೊಬ್ಬರ

# ಮಹಾಮಂತ್ರಶಕ್ತಿಯ ಪ್ರಸಾದ

ಈ ಪ್ರಸಾದಗಳ ಸೇವನೆಯಿಂದಲೂ, ಧಾರಣೆಯಿಂದಲೂ, ಪ್ರಯೋಗದಿಂದಲೂ ಅನೇಕರು ಅನೇಕ ವಿಧಗಳಿಂದ ಪ್ರಯೋಜನವನ್ನು ಹೊಂದಿರುವರು.

*Personal interviews are prohibited*

## ಈ ಪ್ರಸಾದದಿಂದ

ಮುಖತಃ ಭೇಟಿಯನ್ನು ಇಟ್ಟುಕೊಳ್ಳಲಾಗುವುದಿಲ್ಲ.

ಪರೀಕ್ಷೆಯಲ್ಲಿ ಪಾಸಾಗುವದು, ಶತ್ರುಗಳನ್ನು ಸ್ವಾಧೀನಪಡಿಸುವದು, ವ್ಯಾಪಾರದಲ್ಲಿ ಅಭಿವೃದ್ಧಿ ಹೊಂದುವದು, ಮುಂತಾದ ಯಾವತ್ತು ಅಭೀಷ್ಟಗಳನ್ನು ಸಾಧಿಸಬಹುದು.

**ಒಂದು ತಿಂಗಳು ಉಪಯೋಗಿಸುವ ಪ್ರಸಾದಕ್ಕೆ ರೂಪಾಯಿ ಒಂದು.**

**ವಿಶೇಷತರದ ಪ್ರಸಾದಕ್ಕೆ ರೂಪಾಯಿ ಐದು.**

**ಪ್ರಸಾದ ಬೇಕಾದವರು**—ತಮ್ಮ ನಕ್ಷತ್ರ, ಯಾ ಜನನ ಸಮಯವನ್ನೂ ತಾರೀಕನ್ನೂ ತಿಳಿಸಬೇಕು. ಅದು ಗೊತ್ತಿಲ್ಲದಿದ್ದರೆ ಕಾಗದಬರೆಯುವ ಸ್ಥಳ, ಸಮಯಗಳನ್ನೂ ನಿರ್ದೇಶಿಸಬೇಕು.

**ವಿ. ಪಿ. ಕ್ರಮವಿಲ್ಲ**—ಹಣವನ್ನು ಮುಂಗಡವಾಗಿಯೇ ಕಳುಹಿಸಬೇಕು. ಹಣವನ್ನು ಕಳುಹಿಸದೆ ಬರುವ ಕಾಗದಗಳಿಗೆ ನಿಗಾ ಕೊಡಲಾರದು.

**ಪತ್ರವ್ಯವಹಾರ:**—ಇಂಗ್ಲಿಷ್, ಸಂಸ್ಕೃತ, ಯಾ ಕನ್ನಡ ಭಾಷೆಯಲ್ಲಿ ಮಾಡಬಹುದು.
**ಎಲ್ಲ ಪತ್ರಗಳು ಗುಪ್ತವಾಗಿರಿಸಲಾಗುತ್ತವೆ.**

**C. C. No. 4.**

***C/o.* ANTARANGA, UDIPI.**

This page is available for advertisement. Rate Rs. 15. (per insertion.)

# ANTARANGA

ಸಂಪುಟ ೧.

೯ ಒಕ್ಟೋಬರ್ '೩೮
ಆದಿತ್ಯವಾರ.

ಸಂಚಿಕೆ ೧೩.

**ಚಂದಾ ವಿವರ:— ವಾರ್ಷಿಕ ಚಂದಾ ಮೂರು ರೂಪಾಯಿ.**

ವಿ. ಪಿ. ಕ್ರಮವಿಲ್ಲ. ಹಣವನ್ನು ಮುಂಗಡವಾಗಿ ಕಳುಹಬೇಕು.

**ಬಿಡಿ ಸಂಚಿಕೆ: ಒಂದಾಣೆ.** ನಿಮ್ಮ ಊರಿನ ಏಜಂಟರಿಂದ ಪಡಕೊಳ್ಳಿರಿ.

**ಎಸ್. ಯು. ಪಣಿಯಾಡಿ.**
(*Editor in Chief.*)

**ಕೆ. ಹೈದರ್.**
(*Managing Editor.*)

**ಜಾಹಿರಾತಿನ ದರ:** ಒಂದು ಸರ್ತಿಗೆ

| | | |
|---|---|---|
| ಇಡೀ ಪುಟ | ರೂ. | ೧೦—೦—೦ |
| ಅರ್ಧ | ,, | ೫—೦—೦ |
| ಕಾಲು | ,, | ೩—೦—೦ |
| ಅರೆಕಾಲು | ,, | ೨—೦—೦ |
| ಕೆಲವು ಇಂಚಿಗೆ | | ೧—೦—೦ |

ಜಾಹಿರಾತಿನ ಬಾಬ್ತು ಹಣವನ್ನು ಮುಂಗಡವಾಗಿಯೇ ಕೊಡಬೇಕು.

**ಜಾಹಿರಾತು ಕೊಡುವವರಿಗೆ ಸಲಹೆ:**

೧. ಜಾಹಿರಾತಿನ ವಿಷಯಗಳು ಅಯೋಗ್ಯವಾಗಿ ಕಂಡುಬಂದಲ್ಲಿ ಮುದ್ರಿಸಲಾಗುವುದಿಲ್ಲ. ೨. ಒಂದೇ ಬದಿಯಲ್ಲಿ ವಿವರವಾಗಿ ಬರೆಯಬೇಕು. ೩. ಬದಲಾವಣೆಯಲ್ಲಿ ಒಂದು ವಾರ ಮುಂಚಿತವಾಗಿ ತಿಳಿಸಬೇಕು. ೪. ಬ್ಲೋಕುಗಳು ವಾಪಾಸು ಬೇಕಾದರೆ ಅವರವರ ಖರ್ಚಿನಿಂದಲೇ ವಾಪಾಸು ಪಡೆಯಬೇಕು.

ASSOCIATE EDITORS:
ಎಸ್. ಎಸ್. ಕಾರಂತ.
ಪಿ. ವಿ. ಆಚಾರ್ಯ.
ಪಿ. ಎಲ್. ಅಡಿಗ ಮತ್ತು ಎಂ. ವಿ. ಹೆಗ್ಡೆ

Members of the Advisory Board
ಶ್ರೀ. ಬಿ. ವಾಸುದೇವರಾವ್, ಬಿ. ಎ., ಬಿ. ಎಲ್.
,, ಕೊರಡ್ಕಲ್ ಶ್ರೀನಿವಾಸರಾವ್, ಗ್ರಂಥಕರ್ತ.
,, ಆರ್. ಆರ್. ಕುಂಜೂರು.
,, ಪಿ. ವಿ. ಉಪಾಧ್ಯಾಯ, ಬಿ. ಎ., ಎಲ್‌ಎಲ್. ಬಿ.
,, ಆರ್. ಎಸ್. ಶೆಣೈ, ಸಂಪಾದಕ, ವರ್ತಕಧುರೀಣ.
,, ಕೆ. ಎಚ್. ಶೆಟ್ಟಿ, ಮೆನೇಜರ್, ನವಯುಗ.
ಶ್ರೀಮತಿ. ಪಿ. ಭಾರತೀ ಬಾಯಿ.
ಶ್ರೀ. ಯು. ವೆಂಕಟರಮಣಾಚಾರ್ಯ, ಮೆನೇಜರ್, ಶ್ರೀಕೃಷ್ಣಸಂದೇಶ.
,, ಉಪೇಂದ್ರ ಅನಂತ ಪೈ, ಮಾಲಕ, ಚಿತ್ರಕಲಾ.

**ಮಾಲಕರು ಮುದ್ರಕರು ವ ಪ್ರಕಾಶಕರು:**

ಸಪ್ಲೈ ಏಜೆನ್ಸಿ ಲಿಮಿಟೆಡ್ ಉಡುಪಿ.

ಮುದ್ರಣ ವ ಪ್ರಕಟನಾ ಸ್ಥಳ:

**ಮಣಿಪಾಲ ಪವರ್ ಪ್ರೆಸ್, ಮಣಿಪಾಲ, ಉಡುಪಿ.**

# ನಮ್ಮಲ್ಲಿ

## - ಕನ್ನಡ ಪುಸ್ತಕಗಳು -

| | | | |
|---|---|---|---|
| ಶಾಂತಿ ಪುರಾಣ . . | 3 | 0 | 0 |
| ಚಂದ್ರಗುಪ್ತ ಚಕ್ರವರ್ತಿ . | 1 | 0 | 0 |
| ಸರಸ್ವತೀ . . . | 0 | 8 | 0 |
| (ಸಾಮಾಜಿಕ ನಾಟಕ) | | | |
| ಒಂದೇ ತಿಂಗಳಲ್ಲಿ ಇಂಗ್ಲಿಷ್ . | 0 | 8 | 0 |
| (ಇಂಗ್ಲಿಷ್ ಸ್ವಯಂಬೋಧಿನಿ) | | | |
| ಸಾಮುದ್ರಿಕ ಶಾಸ್ತ್ರ . . | 0 | 8 | 0 |
| ಹೊಂದೊವಲ ಹಂಬಲು. . | 0 | 6 | 0 |
| ವೀರಭೂಮಿ (ಕತೆ) . . | 0 | 1 | 6 |
| ಗೀತೆಯ ಕೈಗನ್ನಡಿ . . | 0 | 4 | 0 |
| ಗೀತೆಯ ಮೂಲ . . | 0 | 1 | 0 |
| (ಈಶಾವಾಸ್ಯೋಪನಿಷತ್ತಿನ ಭಾಷಾಂತರ) | | | |
| ಸ್ತ್ರೀಪದ್ಯರತ್ನಾಕರ ಭಾಗ I | 0 | 1 | 0 |
| ಡಿ II | 0 | 1 | 0 |
| ಡಿ III | 0 | 1 | 0 |
| ಡಿ IV | 0 | 1 | 0 |
| ಪುರಂದರ ದಾಸರ ಪದ ಭಾಗ I | 0 | 4 | 0 |
| ಡಿ II | 0 | 4 | 0 |
| ಡಿ III | 0 | 4 | 0 |
| ಮಧುವನ . . . | 1 | 8 | 0 |
| ಧರ್ಮಸಂಕಟ (ಸಾಮಾಜಿಕ ನಾಟಕ) | 0 | 4 | 0 |
| (Gouthama the Buddha) | 0 | 8 | 0 |
| ಭಗವದ್ಗೀತೆ . . . | 0 | 2 | 0 |
| ಕುಕ್ಕುಟ ಪಂಚಾಂಗ . . | 0 | 1 | 0 |
| ಮಗ್ಗಿ . . . . | 0 | 1 | 6 |
| ತುಳುನಾಡ್ ತಿಲಕ ಪಂಚಾಂಗ . | 0 | 1 | 0 |
| ವೈಜಯಂತೀ ಪಂಚಾಂಗ . | 0 | 2 | 6 |
| ಜಯಪಾಂಡ್ಯ ವಿಜಯ . . | 0 | 2 | 0 |

## - ತುಳು ಪುಸ್ತಕಲು -

| | | | |
|---|---|---|---|
| ಕೃಷ್ಣಸಂಧಾನ (ಪ್ರಸಂಗ) . | 0 | 8 | 0 |
| (ಕನ್ನಡ ಕೃಷ್ಣಸಂಧಾನವನ್ನೊಳಗೊಂಡಿದೆ.) | | | |
| ಬಲೀಂದ್ರ (ಕತೆ) . . | 0 | 2 | 0 |
| (ವಿಮರ್ಶಾತ್ಮಕ ಲೇಖನ) | | | |
| ಅಳಿಯ ಸಂತಾನ ಕಟ್ಟ್‌ದ ಗುಟ್ಟು | 0 | 4 | 0 |
| ಕಾನಿಗೆ (ಪದ್ಯ) . . | 0 | 4 | 0 |
| ತುಳುವ್ಯಾಕರಣ . . | 0 | 8 | 0 |
| ಜನಮರ್ಲ್ (ನಾಟಕ) . . | 0 | 6 | 0 |
| ಮದ್‌ಮಾಳತ್ತ್ ಮದ್‌ಮಾಯೆ. | 0 | 2 | 0 |
| (ಕತೆ) | | | |
| ಬಂಗಾರ್‌ದಂಗಿದ ಕತೆ . . | 0 | 1 | 0 |
| ಪದ್ಯಮಾಲಿಕೆ . . | 0 | 1 | 0 |
| ಮಿತ್ಯನಾರಾಯಣ ಕತೆ. . | 0 | 8 | 0 |
| ಸತೀ ಕಮಲೆ (ನಾವೆಲ್) . . | 0 | 6 | 0 |
| ಕನ್ಯೋಪದೇಶ . . . | 0 | 2 | 0 |
| ಕನ್ನಡಕೊ . . . | 0 | 0 | 6 |
| ವಾಲಿಸುಗ್ರೀವರ ಕಾಳಗ. . | 0 | 3 | 0 |
| ಬೊಬ್ಬರ್ಯ (ಪಾಡ್ದನ) . . | 0 | 2 | 0 |
| ತೊಡಕಿನಾರ್ ,, . . | 0 | 2 | 0 |
| ಮುಂಡತ್ತಾಯ ,, . . | 0 | 2 | 0 |
| ವಿಶ್ವರೂಪ ದರ್ಶನ . . | 0 | 1 | 0 |
| (ಗೀತೆಯ II ನೇ ಅಧ್ಯಾಯದ ಪದ್ಯಾತ್ಮಕ ಭಾಷಾಂತರ) | | | |
| ಭಗವದ್ಗೀತೆ . . | 0 | 5 | 6 |

**ತುಳುನಾಡ್ ಪ್ರೆಸ್,**

**ಉಡುಪಿ, ದ. ಕ.**

# ಅಂತರಂಗ

ಲೋಕ ಯುದ್ಧವನ್ನು ತಪ್ಪಿಸಿದ ಬ್ರಿಟಿಷ್ ಪ್ರಧಾನರ ಯತ್ನಕ್ಕೆ ಹೋಲಿಕೆಯೇ ಇಲ್ಲವೆನ್ನುತ್ತಿದೆ ಒಂದು ಸಂಪಾದಕೀಯ ಬರೆಹ.

ಬ್ರಿಟಿಷ್ ಪ್ರಧಾನರ ಯತ್ನಕ್ಕೆ ಅನೇಕ ಹೋಲಿಕೆಗಳಿಲ್ಲದಿದ್ದರೂ ಒಂದು ಹೋಲಿಕೆಯಿದೆ. ಮೊದಲೊಬ್ಬ ನೆರೆಯನ್ನು ತಡೆಯುವುದಕ್ಕಾಗಿ ನೆರೆಹೊರೆಯವರ ಬಟ್ಟೆಗಳನ್ನು ಸಂಗ್ರಹಿಸಿ ದೊಡ್ಡದೊಂದು ಬಟ್ಟೆ "ಗೋಡೆ" ಮಾಡಿ ನಾಡನ್ನುಳಿಸಿದನೆಂದು ಸಂತೋಷದಿಂದ ಉಬ್ಬಿದನಂತೆ. ಅವನಿಗೂ ಬ್ರಿಟಿಷ್ ಪ್ರಧಾನರಿಗೂ ಹೋಲಿಸಿದರೆ ಸರಿಯಾಗದೆ?

△

ಸರಕಾರೀ ವಕೀಲಿತನವನ್ನು ಕೊಡುವುದಿದ್ದರೆ ಮುಸ್ಲಿಮ್ ಲೀಗನ್ನು ಬಿಟ್ಟು ಬಿಡುತ್ತೇವೆಂದು ಮುಂಬಯಿ ಪ್ರಾಂತ್ಯದ ಹಲವು ಮುಸ್ಲಿಮ್ ವಕೀಲರು ಸರಕಾರಕ್ಕೆ ಕಾಗದ ಬರೆದಿರುವರಂತೆ.

ಇಂಥ ಸದಸ್ಯರಿದ್ದರಲ್ಲವೆ ಒಂದು ಸಂಸ್ಥೆಯು ಉದ್ಧಾರವಾಗುವುದು? ಪ್ರಾಯಶಃ ಇದೇ ಆಶೆಯಿಂದ ಅವರು ಮುಸ್ಲಿಮ್ ಲೀಗಿಗೆ ಸೇರಿರಲೂ ಬಹುದು.

△

## ಸಿಹಿ-ಕಹಿ

ಕಳೆದ ಹತ್ತು ವರುಷಗಳಿಂದ ಜರ್ಮನಿಯಲ್ಲಿ ಮುಷ್ಕರವೆಂಬುದೇ ಇಲ್ಲ. ಭಾರತಕ್ಕೆ ಜರ್ಮನಿಯು ಅನುಕರಣೀಯವಾಗಿದೆಯೆಂದು ಮದ್ರಾಸಿನ ಪ್ರಧಾನರು ಸರಕಾರೀ ಪ್ರೆಸ್ ಕೆಲಸಗಾರರಿಗೆ ಮದ್ರಾಸಿನಲ್ಲಿ ಹೇಳಿದರು.

ಪ್ರಾಯಶಃ ಹಿಟ್ಲರನ ಇತ್ತೀಚೆಗಿನ ವಿಜಯವನ್ನು ಕಂಡು ರಾಜಾಜಿಯವರಿಗೆ ಈ ಸ್ಫೂರ್ತಿ ಬಂದಿರಬಹುದು. ಜರ್ಮನಿಯ ಯೆಹೂದಿಯರ ಪ್ರಶ್ನೆ. ಡಾಚ್ಚೋ. ಸೆರೆಮನೆ, ಇವೆಲ್ಲವೂ ಅನುಕರಣೀಯವೆ?

△

ಕಾಂಗ್ರೆಸಿನಲ್ಲಿ ಅಧಿಕಾರವನ್ನು ವಹಿಸುವವರು ಪ್ರತಿ ವರುಷ ೫೦೦೦ ಗಜ ನೂಲು ತೆಗೆಯಬೇಕೆಂಬ ಸೂಚನೆಯನ್ನು ಮಹಾತ್ಮಾಜಿಯವರು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಮುಂದೆ ತರುವರೆಂದು ಸುದ್ದಿ ಹಬ್ಬಿತ್ತು. ನೂಲುವುದರಲ್ಲಿ ಜನತೆಯ ವಿಶ್ವಾಸವು ಬಹುವಾಗಿ ಹೆಚ್ಚುತ್ತಿರುವುದರಿಂದ ಈ ಸೂಚನೆಯು ಹಿಂದುಳಿದಿರಬಹುದು!



ಯುರೋಪಿನಲ್ಲಿ ಆರೋಗ್ಯ ಲಾಭಕ್ಕಾಗಿ
ಸಂಚರಿಸುತ್ತಿರುವ
ಸಂಯುಕ್ತ ಪ್ರಾಂತದ ಮಂತ್ರಿ
**ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು**

# ಕಲಿಯುಗದ ಕವಿ ಬರೆದ ಕವನ ಸಾಮ್ರಾಜ್ಯವಿದು!

ಏನ ಹೇಳುತಲಿಪ್ಪೆ? ಮರೆತೆಸಯ್ಯಾ!- ಸರಿ-

ಮತ್ತೆ ನಾವದನೊಮ್ಮೆ, ಇದನೊಮ್ಮೆ, ಹೇಳಿವೆವು ಮತ್ತೊಮ್ಮೆ, ಕೆರೆಯಲಿತ್ತೊಂದೆಮ್ಮೆ, ಮಳ್ಪೆಯಲಿ ನೆಲಕೆ ತಾಗಿದ ಹಡಗವಂತೆ; ಗುಡುಗಿದುವು ಬಿಗಿಲುಗಳು, ನಡುಗಿದುವು ದೇಹಗಳು, ರಬ್ಬರಿನ ಚಕ್ರಗಳ ಪಿಡಿದರ್ಕೈ ನಡೆದರ್ಕೈ, ದಡಸೇರಿ ಹೊಡೆದರ್ಕೈ-

ಏನನ್ನು?

ಬೊಬ್ಬೆಯನು! ಸಾಕೆಂದು ಹೇಳಿದರು! ಬೇಕೆಂದು ಪೇಳಿದರು: ಕಬ್ಬಿಣದ ಮೀನಿನೊಳು ಸಾಮಾನು ಬಿಟ್ಟಿಹೆವು, ಮುಟ್ಟಿಹೆವು ದಡವ,

ಆದರೆ?

ಏನಾಯ್ತು? ನೆರೆಯಾಯ್ತು, ಮನೆ ಮಠಗಳುರ ಹೋಯ್ತು, ವೆಂಕಟನು ಬಂದು, ಕೃಶ ದೇಹವನು ತಂದು, ನೋಡಿಂದೆನ್ನ ಮನೆಯರ್ಧ ವರುಣನಿಗೆ ಕೊಟ್ಟಿಹೆನು! ಅಷ್ಟ ದಿಕ್ಪಾಲರ್ಗೆ ಕಷ್ಟದರಿವೇನಯ್ಯ? ನಷ್ಟವಾದುದು ಎನಗೆ!

ಎನಲು-

ಜೋಸೆಫನು ಕೂಗಿದನು, ತಾಗಿದನು ಬೆದರಿ ಬಳಿಯಲಿ ನಿಂತ ಖಾದರಗೆ, ಏನೆಂದು ಕೇಳಿದೆವು, ಹೇಳೆಂದು ಪೇಳಿದೆವು!

ಆದರೇಂ?

ಉದಯ ಶಂಕರನಂತೆ ಬೆದರಿ ನಲಿದನು ತರುಣ! ಕಿವಿಯೊಡೆದ ಬವಣೆಯಲಿ ಸಿಲುಕಿದೆವು, ಸೂಕರನ ಕುತ್ತಿಗೆಗೆ ಕತ್ತಿಯಿತ್ತಾ ತೆರದಿ ಕೂಗಿದನು, ರೇಗಿದನು, ಸಾಗಿದನು!

ಬದುಕಿದೆವು-

ಎಂದೆನಲು ಬಂದನ್ಕೈ, ತಂದನ್ಕೈ ಮರಳ ರಾಶಿಯನೊಂದು, ಅಂದವನ ನೋಡಲಿಕೆ ಭಯವಾಯ್ತು. ಜಯವಾಯ್ತೆದಾರು ಜಸ ಪಿಡಿಯೆ, ಮರುಳ ಮರುಗಿದನ , ತಿರುಗಿದನು, ಸುರಿಸಿದನು ಕಣ್ಣೀರ, ತುರಿಸಿದನು ಕಿವಿಗಳನು, ಏನೆನಲು ಪೇಳಿದನು-

ನೋಡದೋ-

ನೋಡಲ್ಲಿ- ಗೋಡೆಯಲಿ, ಇಲಿಯೊಂದು ಸಂದಿನಿಂ ಬಂದೆನ್ನ ನೋಡುತಿಹುದೆಂದವನು!

ಹುಚ್ಚನೆನೆ-

ಯಾರಯ್ಯ, ಹುಚ್ಚುತನ ಬಿಟ್ಟರುವರಾರಯ್ಯ? ಖರೆಯುವರು ಖರ ಖರೆಯ ನುಡಿಗಳನು ನುಡಿಯುತ್ತ ಹೊಸತೊಂದು ಪಕ್ಷವನು ತಕ್ಷಣದಿ ಮಾಡುವರು, ಆಂಧ್ರಜನರೊಂದಾಗಿ ಐಂದ್ರ ಜಾಲವ ಮಾಡೆ, ಕನ್ನಡಿಗರೆಲ್ಲರೂ ಕಣ್ಣೀರ ಸುರಿಸುತ್ತ, ಪ್ರಾಂತ ಬೇಕೆಮಗೊಂದು ಪ್ರಾಂತ ಬೇಕೆಂದೆನಲು, ಜರ್ಮನಿಯ ಹುಲಿರಾಯ ಝುಕ ಕುರಿಯ ಮರಿಯೊಂದ, ಮೆಲ್ಲಮೆಲ್ಲನೆ ತನ್ನ ಹಲ್ಲಿನಿಂ ಕಚ್ಚುತಿರೆ, ತಕ್ಕಡಿಯ ಕೆಳಗಿಹುದ ಹೆಕ್ಕಿ ತಿನ್ನುವ ಜನರ, ವರಮಂತ್ರಿ ಜಂಬೂಕ ಯಾನೆ ಚಂಬರಲೇನ, ಮಾಡಿಕೊಂಡನು ಊನ ಶರಧಿ ಕಳ್ಳರ ಫಣಕೆ. ವನದೊಳಿಹ ಮುಸುವಿನಂತಿಟಲಿಯೊಳು ಮುಸಲೋನಿ, ಕುಣಿಯುವೆನು ಮಣಿಯುವೆನು ಶಿರವ ಜರ್ಮನಿ ಹುಲಿಗೆ, ಎನುತಿರಲು ವರುಷವೊಂದರಲಿ ಐದು ಸಾಸಿರ ಮೂರು ನೂರಲದಿಹರಾರು ಭಾರತ ರಾಷ್ಟ್ರ ಸಭೆಯು ಬಾಗಿಲ ಸೇರಬಾರದೆನುವರು ಗಾಂಧಿಜೀಯವರು-

ಎಂದು ಹೇಳೆ-

ಭಳಿ ಭಳಿರೆ, ತತ್ವ ಮೀಮಾಂಸ ತಿಂದಿಹ ಶ್ವಾನರಾಯು ಜೀಯಾ! ಭಳಿಭಳಿರೆ ಎಂದೆನಲು ತೆರಳಿದರು ವಾನರರು ಮರದ ತುದಿಗಳಿಗೆ.

---

## ನನಗರಿಯದು, ನಿಮಗೆ-



ಚಾಮುರವು ಫಲಬಿಡುತ್ತದೆಯೋ?

# ಬಸ್ಸಿನಲ್ಲಿ 'ಘುಸ್ಸ'

ನನ್ನ ಬಸ್ಸು ವಾಯುವೇಗದಿಂದ (ಬಸ್ಸು ಮತ್ತು ವಾಯು--ವೇಗದಿಂದ) ಓಡುತ್ತಿತ್ತು. ಆತ್ರಾಡಿಯ ಸಮೀಪದಲ್ಲಿ ಪುರಾಣಿಕರೊಬ್ಬರು ರಸ್ತೆಯ ಬದಿಯಲ್ಲಿ ನಿಂತು ಕೈಯೆತ್ತಿದರು. ಅವರ ಇದಿರಿನಲ್ಲಿ ಬೇರೆ ಯಾರೂ ಇಲ್ಲದ್ದರಿಂದ ಕೈಯೆತ್ತಿದುದು ಬಸ್ಸಿಗೆಂದು ಅರ್ಥವಾಗಿ ಡ್ರೈವರು ಬಸ್ಸನ್ನು ನಿಲ್ಲಿಸಿದ. ಪುರಾಣಿಕರು ಕೈಯೆತ್ತಿಬಿಟ್ಟರಲ್ಲಾ-ಬಸ್ಸೂ ಬುಸುಗುಟ್ಟುತ್ತಾ ನಿಂತಿತು. (ಪ್ಸೈ ಕೈಯಾಗಲಿಲ್ಲ) ದೊಡ್ಡ ಗಂಟನ್ನು ಎಳೆದುಕೊಂಡು, ದೊಡ್ಡ ಹೊಟ್ಟೆಯನ್ನು ದೂಡಿಕೊಂಡು ಬಂದು—ಪುರಾಣಿಕರು ಮೂರನೇ ಸೀಟಿನ ಪಕ್ಕದಲ್ಲಿ ಕುಳಿತಿದ್ದ ನನ್ನ ಬಳಿಯಲ್ಲಿ ನಿಂತು 'ಸ್ವಲ್ಪ ಆಚೆ ಹೋಗೋಣಾಗಲಿ' ಎಂದರು. ನಾನು ಕುಳಿತಲ್ಲಿಯೇ ಎರಡು ಕಾಲನ್ನೂ ಮಡಚಿ, ಹಾದಿ ಮಾಡಿಕೊಟ್ಟು 'ತಾವೇ ಆಚೆ ಹೋಗೋಣಾಗಲಿ' ಎಂದೆ. "ಇಲ್ಲ, ನಾನು ಇಲ್ಲಿಯೇ ಬೈಲೂರಿನಲ್ಲಿ ಇಳಿಯುವವ"

"ಸರಿ, ನಾನು ಇಲ್ಲಿಂದಿಲ್ಲಿಯೇ ಹಿರಿಯಡ್ಕದಲ್ಲಿ ಇಳಿಯುವವ"

"ಮಾರಾಯಾ, ನನಗೆ ವೀಳ್ಯ ಉಗುಳಬೇಕಾಗುತ್ತದೆ. ಸ್ವಲ್ಪ ಆಚೆಗೆ ಹೋಗು"

"ನನ್ನದು ವೀಳ್ಯ ಉಗುಳುವ ಸೀಟಲ್ಲ; ರಸ್ತೆಗೆ ಎಲ್ಲಿ ಬೇಕಾದರಲ್ಲಿ ಉಗುಳಬಹುದು, ನನ್ನ ಆಕ್ಷೇಪವಿಲ್ಲ"

"ಏನು ಮಾಡುತ್ತಿದ್ದೀರಿ ಭಟ್ರೆ? ಇದಿರಿನ ಸೀಟಿನಲ್ಲಿ ಕೂತುಕೊಳ್ಳಕೂಡದೆ?" ಡ್ರೈವರ್ ಕೂಗಿದ. ಹೆಂಗಸರ ಸೀಟಿನಲ್ಲಿ ಇದ್ದುದು ಒಬ್ಬಳು ಮುದುಕಿ ಮಾತ್ರ. ಪುರಾಣಿಕರು 'ನಾರಾಯಣ! ಅಯ್ಯೊ' ಎಂದು ಗಂಟನ್ನೆತ್ತಿ ಸೀಟಿನಲ್ಲಿಟ್ಟು ಸರಳನ್ನು ಹಿಡಿದು ಬಸ್ಸಾರೋಹಣ ಮಾಡಿದರು. ನವಮಾಸ ತುಂಬಿದ ಗರ್ಭಿಣಿಯರನ್ನು ಕೆಲವೊಮ್ಮೆ ಹೊತ್ತ ಅನುಭವ ಆ ಸೀಟಿಗಿರಬಹುದು—ಆದರೆ ಪುರಾಣಿಕರ ಹೊಟ್ಟೆಯ ಭಾರವು ಅದಕ್ಕೊಂದು ಹೊಸ ಅನುಭವವೇ ಆಗಿರಬೇಕು.

X X X

ಹತ್ತುಮಾರು ಹೋಗಿರಬಹುದು. ಬಸ್ಸು ಪೂರ್ವ ದಿಕ್ಕಿಗೆ ಹೋಗುತಿತ್ತು; ಗಾಳಿಯು ಪಶ್ಚಿಮಕ್ಕೆ ಬರುತಿತ್ತು. 'ಹ್ಹಾ ಫ್ರೂಸ್' ಪುರಾಣಿಕರು ಉಗುಳಿಬಿಟ್ಟರು. ಉಗುಳಿದುದು ರಸ್ತೆಗೆ. ರಸ್ತೆಯೂ ಅಗಲವಿತ್ತು— ಬಸ್ಸು ಹೋಗುವದಕ್ಕೂ ಬಸ್ಸಿನಲ್ಲಿದ್ದವರಿಗೆ ಉಗುಳುವದಕ್ಕೂ ಸಾಕಾಗುವಷ್ಟು ಅಗಲವಿತ್ತು. ಹಾಗೆಯೇ ಗಾಳಿಯೂ ಜೋರಾಗಿ ಬೀಸುತಿತ್ತು; ಯಾಕೆಂದು ಯಾರಿಗೂ ಗೊತ್ತಿಲ್ಲ! ಪುರಾಣಿಕರ ಶ್ವಾಸೋಚ್ಛ್ವಾಸಕ್ಕೆ ಅಷ್ಟು ಗಾಳಿ ಬೇಕಾಗಿರಲಿಲ್ಲ— ಆದರೆ ಅವರ ವೀಳ್ಯದೆಂಜಲನ್ನು ತಂದು ನನ್ನ ಮುಖಕ್ಕೆ ಬಡಿಯಬೇಕಾದರೆ ಅಷ್ಟು ಗಾಳಿ ಬೇಕೇ ಬೇಕು!

X X X

ನನ್ನ ಮುಖವಿಡೀ ಕೆಂಪಾಯಿತು. (ಪುರಾಣಿಕರ ಕೆಂಪು ಎಂಜಲಿನಿಂದ ಮತ್ತು ನನ್ನ ಸ್ವಂತ ಸಿಟ್ಟಿನಿಂದ) "ಏನು ಕಣ್ಣು ಕಾಣುವುದಿಲ್ಲವೆ? ದೊಡ್ಡ ಮಹಾರಾಜನಂತೆ ಹೊಟ್ಟೆ ಮಾಡಿಕೊಂಡು ಸಿಕ್ಕಿದಲ್ಲಿ ಉಗುಳುವದು!" ಪುರಾಣಿಕನನ್ನು ಕೆಂಗಣ್ಣಿನಿಂದ ಧುರುದುರನೇ ನೋಡಿದೆ. ಅದು ನಾಟಲಿಲ್ಲ. ಬಾಯಿಯ ಕೆಂಪು ಹೋಗಿ ನಾಟದಂತೆ ಕಣ್ಣಿನ ಕೆಂಪು ನಾಟುವುದಿಲ್ಲವೆಂದಾಯಿತು! "ನನ್ನ ಹೊಟ್ಟೆ ನಿನ್ನನ್ನೇನು ಮಾಡಿತು ಮಾರಾಯಾ? ಉಗುಳಿದಾಗ ಗಾಳಿಗೆ ಬಂದು ಬಿತ್ತೋ ಏನೊ, ನಾನೇನು ಮಾಡಲಿ?" ಪುರಾಣಿಕರು ಅಸಡ್ಡೆಯಿಂದ ಉತ್ತರವಿತ್ತರು.

ಅಪರಾಧಿಯು ಕ್ಷಮೆ ಕೇಳುವನೆಂದು ನನ್ನ ನಿರೀಕ್ಷೆಯಿತ್ತು. ಅದು ಸುಳ್ಳಾದೊಡನೆ ಅತಿರೇಕ ಸಿಟ್ಟು ಬಂತು.

"ನಿನ್ನ ಆ ಗುಡಾಣ ಹೊಟ್ಟೆಯಲ್ಲಿಯೇ ತುಂಬಿಸಿಕೊಳ್ಳಬೇಕಿತ್ತು ಎಂಜಲನ್ನು! ಬಸ್ಸಿನಲ್ಲಿ ಕುಳಿತುಕೊಂಡು ಉಗುಳುವದೆಲ್ಲಿ?"

ಇದನ್ನು ಕೇಳಿ ಬಸ್ಸಿನಲ್ಲಿದ್ದವರೆಲ್ಲಾ ನಕ್ಕರು. ನನಗೆ ತೃಪ್ತಿಯಾಯಿತು. ಇಲ್ಲವಾದರೆ ಹಿರಿಯಡ್ಕದಲ್ಲಿ ಒಂದು ಬೀಡ ತೆಗೆದುಕೊಂಡು ಪುರಾಣಿಕರಿಗೆ ತೀವ್ರ ಪ್ರತೀಕಾರ ಮಾಡುವುದರಲ್ಲಿದ್ದೆ. ಆ ಮೇಲೆ ನಾವು ಕಾರ್ಕಳವನ್ನು ಮುಟ್ಟುವವರೆಗಾಗುತ್ತಿದ್ದುದು ಬಸ್ಸಿನ ಶಬ್ದ ಮಾತ್ರ.

ವಿ. ಹೆ.

# ಕೂ ... ಕೆಲವ ... ತಾರೆಗಳ ... ಗಿ ... ಕೂದಲಿನ ಗ...



ಹಾಯಾಗಿ
ಗುಂಗುರಾಗಿರುವ ರೇಶ್ಮೆ
ಯಂತಹ ಕೂದಲುಳ್ಳ
**ಡಚೆಸ್ ಆಫ್ ಕೆಂಟ್**

ಸೌಂದರ್ಯವು ಸದಾ ಸಂತೋಷವನ್ನೀಯುತ್ತದೆಂಬುದು ಒಂದು ಜಾಣ್ನುಡಿಯಾದರೂ ಸೌಂದರ್ಯವನ್ನೀವ ವಸ್ತುವೊಂದು ಮೇರೆಮೀರಿ ಹಬ್ಬಿಬಿಟ್ಟರೆ ಪರಿಣಾಮವು ಕಠಿನವಾಗುತ್ತದೆ.

**ಬೇಕು-ಬೇಡ.**

ಅಂತಹ ವಸ್ತುಗಳಲ್ಲಿ ಕೂದಲೊಂದಾಗಿದೆ. ಆದುದರಿಂದಲೇ ಇದು ಕೆಲವರಿಗೆ ಬೇಕಾಗಿದೆ, ಇನ್ನು ಕೆಲವರಿಗೆ ಬೇಡವಾಗಿದೆ. ಯಾರಿಗೂ ಬೇಡವಾದ ಗಡ್ಡವು ಬೆಳೆಯುತ್ತಿದ್ದರೂ ತೊಂದರೆ. ತಲೆಯಲ್ಲಿ ಏಕಮಾತ್ರ ಕೂದಲಿಲ್ಲದಿದ್ದರೂ ಉಪದ್ರವ. ಹೀಗೆ ಎರಡು ವಿಚಾರದಲ್ಲಿಯೂ ಪ್ರಾಮುಖ್ಯವಾಗಿದೆ ಕೂದಲು. ಒಬ್ಬನು ಅಧಿಕ ಕೂದಲು ತನ್ನ ದೇಹದೊಂದು ಭಾಗದಲ್ಲಿರುವುದಕ್ಕಾಗಿ ಮರುಗುವುದಿದ್ದರೆ ಇನ್ನೊಬ್ಬನು ಕೂದಲು ಬೆಳೆಯದಂಥ ಸ್ಥಳದಲ್ಲಿ ಬೆಳೆಯಬೇಕೆಂದು ಹಂಬಲಿಸುತ್ತಾನೆ. ವೈಜ್ಞಾನಿಕರು ಉತ್ತರ ಧ್ರುವದ ನೃತ್ಯ ಮತ್ತು ಹಾಡುಗಳನ್ನು ಕಂಡು ಕೇಳುವ ಏರ್ಪಾಡು ಮಾಡಿರುವುದಿದ್ದರೂ, ಕೂದಲು ಬೇಕಾದಷ್ಟು ಬೆಳೆಯುವ ಅಥವಾ ಪೂರ್ಣ ಅಳಿದುಹೋಗುವ ಉಪಾಯವನ್ನು ಯಾರೂ ಕಂಡು ಹಿಡಿಯಲಿಲ್ಲ.

**ಅಮೇರಿಕದಲ್ಲಿ—**

ಅಮೇರಿಕದ ಪುರುಷರು ಪ್ರತಿ ದಿನ ೫೦,೦೦೦ ಟನ್ ಕೂದಲನ್ನು ಕ್ಷೌರಮಾಡಿಸುವಾಗ ಸ್ತ್ರೀಯರು ಕೂಡಾ ಹಲವಾರು ಟನ್ ಭಾರದ ಬೇಡವಾದ ಕೂದಲನ್ನು ಕ್ಷೌರ ಮಾಡಿಸುತ್ತಾರೆಂದು ಒಬ್ಬ ತಜ್ಞರು ಹೇಳುತ್ತಾರೆ. ಅವರು ಹೇಳಿರುವಂತೆ ಸಾವಿರಾರು ಮಂದಿ ಕೂದಲು ಬೆಳೆಸುವ ಹಾಗೂ ಅಳಿಸುವ ಕೆಲಸವನ್ನು ಮಾಡುತ್ತಿದ್ದಾರೆ. ಇದೇ ರೀತಿಯಲ್ಲಿ ಸಮಗ್ರ ವಿಶ್ವದ ಪರಿಸ್ಥಿತಿಯ ಕುರಿತು ಯೋಚಿಸಿದರೆ ಅದೆಷ್ಟು ವಿನೋದಮಯವಾಗಿದೆಯೆಂಬುದನ್ನು ಯೋಚಿಸಿರಿ.

**ದಿನಕ್ಕೊಂದು ತಾಸು!**

ಪ್ರತಿಯೋರ್ವ ಸ್ತ್ರೀಯು ಸರಾಸರಿ ದಿನಕ್ಕೊಂದು ತಾಸನ್ನಾದರೂ ತನ್ನ ಕೂದಲಿನ ಶೃಂಗಾರಕ್ಕಾಗಿ ವ್ಯಯಿಸುತ್ತಾಳೆ. ಅವಳ ಜೀವನದಲ್ಲಿ ಆಕೆಯು ಸುಮಾರು ೫೫,೦೦೦

# ...ಂದು ಕಡೆಗಣಿಸಬೇಡಿ!

# ...ಕಾದರೆ ಹಲವರಿಗೆ ಬೇಡ!

## ...ದಲುಗಳನ್ನು ಗಣಿಸಲಾಗುವುದಿಲ್ಲವೆನ್ನುವಿರೆ?-- ತಪ್ಪಿದಿರಿ!

## ...ರದಲ್ಲಿ ಸುಮಾರು ೩೫೦,೦೦೦ ಕೂದಲುಗಳಿವೆ

## ...ಣಿಸುವುದಕ್ಕಾಗಿ ಯುರೋಪಿನಲ್ಲಿ ಸಂಘಗಳಿವೆ!

...ಸಾಸುಗಳನ್ನು ಕೂದಲಿನ ಸಿಂಗಾರಕ್ಕಾಗಿಯೇ ಉಪಯೋಗಿಸಿದಂತಾಗುತ್ತದೆ.

**ಕೂದಲಗಣನೆ.**

ಮನುಷ್ಯನ ದೇಹದಲ್ಲಿರುವ ಕೂದಲನ್ನು ಲೆಕ್ಕ ಮಾಡಬೇಕಾದರೆ ತುಂಬಾ ಸಮಯ ಬೇಕಾಗುತ್ತದೆಂಬ ಅಭಿಪ್ರಾಯವು ಹಲವರಲ್ಲಿದೆ. ಆದರೆ ಅನೇಕ ಮಂದಿ ಈ ಕೆಲಸವನ್ನು ಯಶಸ್ವಿಯಾಗಿ ಮಾಡಿದ್ದಾರೆ. ಮನುಷ್ಯ ಶರೀರದಲ್ಲಿ ಸುಮಾರು ೩೫೨,೦೦೦ ಕೂದಲುಗಳಿವೆಯೆಂದು ಲೆಕ್ಕಮಾಡಿದವರು ಹೇಳುತ್ತಾರೆ. ಇದರ ಪೈಕಿ ತಲೆಯಲ್ಲಿಯೇ ಸುಮಾರು ೧೧೦,೦೦೦ ಕೂದಲುಗಳಿವೆ. ಸ್ತ್ರೀಯರ ತಲೆಗಳಲ್ಲಿ ಪುರುಷರಿಗಿಂತ ಹೆಚ್ಚು ಕೂದಲುಗಳಿವೆ. ಕೆಂಚು ಕೂದಲಿದ್ದವರ ತಲೆಯಲ್ಲಿ ಕೂದಲುಗಳ ಸಂಖ್ಯೆ ಬಹಳ ಕಡಿಮೆಯೆಂದು ಕೇಶವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ. ಒಂದು ಚಚ್ಚೌಕ ಇಂಚಿನಷ್ಟು ಸ್ಥಳದಲ್ಲಿ ಸುಮಾರು ೧,೦೦೦ ಕೂದಲುಗಳಿವೆಯೆಂದು ತಿಳಿಯಲಾಗಿದೆ

**ಕೂದಲಿನ ರಚನೆ.**

ಕೂದಲಿನ ರಚನೆಯು ಸಾಮಾನ್ಯವಾಗಿ ಈರುಳ್ಳಿಯಂತಿದೆ. ಈರುಳ್ಳಿಯ ಗಡ್ಡೆಯಂತೆಯೇ ಕೂದಲಿನ ಬುಡವಿದೆ. ಕೂದಲಿನ ಬಣ್ಣವು ಸಾಮಾನ್ಯವಾಗಿ ಅದರ ಬೇರಿನಲ್ಲಿರುವ ರಸಾಯನಿಕ ಪದಾರ್ಥದ ಮೇಲೆ ಹೊಂದಿಕೊಂಡಿರುತ್ತದೆ. ಈ ಪದಾರ್ಥವು ಮುಗಿದೊಡನೆಯೇ ಕೂದಲು ಬೆಳ್ಳಗಾಗಲಾರಂಭಿಸುತ್ತದೆ.

**ಕೂದಲುಗಳಿಗೆ ಜೀವ ...ಲ್ಲ!**

...ಎಲ್ಲಾ ಕೂದಲುಗಳು ನಿರ್ಜೀವವಾಗಿವೆ. ಆದರೆ ಅವುಗಳ ಬೇರುಗಳು ಮಾತ್ರ ಸಜೀವವಾಗಿರುತ್ತವೆ.

ದೀರ್ಘಕೇಶದ
ನಟಿ
ಜಹನಾರಾ
ಬೇಗಮ್
ಕಜ್ಜಾನ್



ಕೆಲವು ಪ್ರಾಣಿಗಳ ಮೀಸೆಗಳ ಕೂದಲಿಗೂ, ಪುರುಷರ ಮೀಸೆಯ ಕೂದಲಿಗೂ ಹೆಚ್ಚಿನ ವ್ಯತ್ಯಾಸವಿಲ್ಲ. ನೀರುಕುದುರೆಯ ದಾಡೆ, ಆನೆಯ ಉಗುರು ಮೊದಲಾದುವು ಕೂದಲಿನ ಜಾತಿಗೆ ಸೇರಿದವುಗಳೆಂದು ಪ್ರಾಣಿಶಾಸ್ತ್ರಜ್ಞರು ಪ್ರತ್ಯೇಕಿಸಿರುವುದು ವಿಚಿತ್ರವೆನಿಸುತ್ತದೆ.

**ಕೂದಲಿನ ಪ್ರಾಮುಖ್ಯತೆ.**

ಜನಾಂಗದ ವೈವಿಧ್ಯತೆಯನ್ನು ನಿರ್ಣಯಿಸುವುದರಲ್ಲಿ ಕೂದಲು ಕೂಡ ಒಂದು ಪ್ರಾಮುಖ್ಯ ವಿಚಾರ

ವಾಗಿದೆ. ಗುಂಗುರು ಗುಂಗುರಾಗಿದ್ದು ಗಿಡ್ಡವಾಗಿರುವ ಕೂದಲು ಭಾರತ, ಮತ್ತು ಆಸ್ಟ್ರೇಲಿಯದ ಮೂಲನಿವಾಸಿಗಳದ್ದೆಂದು ನಿಷ್ಕರ್ಷಿಸಲಾಗಿದೆ.

ನೆಟ್ಟಗೆ, ಉದ್ದ ಹಾಗೂ ದೊರಗಾಗಿರುವ ಕೂದಲು ಚೀನೀ, ಮಂಗೋಲಿಯ ಮತ್ತು ಟಸ್ಮೇನಿಯಾ ದ್ವೀಪದಲ್ಲಿರುವವರಷ್ಟು ದಪ್ಪ ಕೂದಲಿನವರು ಇನ್ನಾರೂ ಇಲ್ಲವೆಂದು ವೈಜ್ಞಾನಿಕರು ಕಂಡು ಹಿಡಿದಿದ್ದಾರೆ. ಭಾಗತದ ತೋಡರು, ಜಪಾನಿನ ಆನು ಪಂಗಡದವರು, ರಷ್ಯದ ರೈತರು– ಇವರ ಕೂದಲು



ಎಂ. ಜಿ. ಎಂ. ಕಂಪೆನಿಯ ನಟ ಕಾರನ್ ಮೋರ್ಲೆಯ ಸುಂದರ ಕೇಶರಾಣಿ.

ಲ್ ಹಾಗೂ ಅಮೇರಿಕದ ಇಂಡಿಯಾನರ ಕೂದಲೆಂದು ಭಾವಿಸಲಾಗಿದೆ.

ಹಾಯಾಗಿ, ಗುಂಗುರಾಗಿರುವ ರೇಶ್ಮೆಯಂತಹ ಕೂದಲು ವಿವಿಧ ವರ್ಣಗಳಲ್ಲಿದ್ದರೂ ಅವು ಯುರೋಪಿಯನರದೆಂದುಕ್ತೆ ತಿಳಿಯಲಾಗಿದೆ.

**ದಟ್ಟ ಕೂದಲಿನವರು.**

ಸಮಗ್ರ ಜಗತ್ತಿನಲ್ಲಿ ಆಸ್ಟ್ರೇಲಿಯದ ದಟ್ಟವಾಗಿರುತ್ತದೆ.

**ಕಡಿಮೆ ಕೂದಲಿನವರು.**

ಅತ್ಯಂತ ಕಡಿಮೆ ಕೂದಲಿರುವವರೆಂದರೆ ಪೀತಜನಾಂಗದವರು. ಪೀತಜನಾಂಗದ ಪುರುಷರಿಗೆ ನಾಲ್ಕೈದು ಕೂದಲುಗಳಿಗಿಂತ ಹೆಚ್ಚು ಗಡ್ಡವಿರುವುದಿಲ್ಲ.

**ಕವಿಗಳ ವರ್ಣನಾಸಾಧನ.**

ಕೂದಲನ್ನು ಕವಿಗಳು, ಕಾದಂಬರಿಗಾರರು ತುಂಬಾ ಪ್ರಶಂಸಿಸಿ ವರ್ಣಿಸಿದ್ದಾರೆ. ಚೀನದ ಮಹಾಗೋಡೆಯಾದ ಬಳಿಕ ಚೀನೀಯನೊಬ್ಬನು ಕೂದಲಿನ ಬ್ರಶ್ಶನ್ನು ಕಂಡುಹಿಡಿದನು. ಅಂದಿನಿಂದ ಕೂದಲಿನ ಸೌಂದರ್ಯವನ್ನೂ ಬೆಳವಣಿಗೆಯನ್ನೂ ಹೆಚ್ಚಿಸುವ ಯತ್ನಗಳು ಪ್ರತಿದಿನವೆಂಬಂತೆ ನಡೆಯುತ್ತಿವೆ. ಪಾಶ್ಚಾತ್ಯ ಸ್ತ್ರೀಯರು ಇತ್ತೀಚೆಗೆ ತಮ್ಮ ಕೇಶ ಸೌಂದರ್ಯವನ್ನು ಹೆಚ್ಚಿಸುವುದಕ್ಕಾಗಿ ಸಾವಿರಾರು ಯತ್ನಗಳನ್ನು ಮಾಡುತ್ತಿದ್ದಾರೆ. ಒಂದೊಂದು ಜನಾಂಗದಲ್ಲಿ ಒಂದೊಂದು ವಿಧ ನಗಳು ಆರಿಸಲ್ಪಟ್ಟಿವೆ. ಭಾರತದಲ್ಲಿ ಎಷ್ಟು ಉದ್ದ ಬೆಳೆಯುತ್ತೋ ಅಷ್ಟೂ ಲಕ್ಷಣ. ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಅದನ್ನು ಕತ್ತರಿಸಿ ಗುಂಗುರು ಗುಂಗುರಾಗಿ ಮಾಡುತ್ತಾರೆ. ಭಾರತೀಯ ಮಹಿಳೆಯರ ಕೂದಲು ಒಮ್ಮೊಮ್ಮೆ ಮೊಣಕಾಲಿನಷ್ಟು ಉದ್ದವಾಗುವುದುಂಟು. ಈ ಕೂದಲನ್ನು ಸೂಡಿ ಕಟ್ಟುವುದು, ಜಡೆ ಹೆಣೆಯುವುದೇ ಮೊದಲಾದುವುಗಳು ರೂಢಿಯಲ್ಲಿರುವ ಕಲೆಯಾಗಿ ಪರಿಣಮಿಸಿವೆ. ಪುಷ್ಪಗಳನ್ನು ಮುಡಿಯುವುದರಿಂದ ಕೇಶರಾಶಿಯು ಸ್ತ್ರೀಯ ಸೌಂದರ್ಯದ ಕಿರೀಟದಂತಿದೆ. ಪೇರಿಸಿನ ಏಂಟನ್ಯನ್ ಎಂಬವನು ಸ್ತ್ರೀಯರ ತಲೆಯ ಕೂದಲನ್ನು ಕಲಾಪೂರ್ಣವಾಗಿ ಕತ್ತರಿಸಿ ತಲೆಯ ಸೌಂದರ್ಯವನ್ನು ಹೆಚ್ಚಿಸಿದ್ದಾನೆ.

**ಒಂದು ವಿಚಿತ್ರ ಸಂಘ.**

ಪೇರಿಸಿನಲ್ಲಿ ಒಂದು ವಿಚಿತ್ರ ಸ್ತ್ರೀಸಂಘವಿದೆ. ಈ ಸಭೆಯ ಸದಸ್ಯರು ಕೆಂಪು ಕೂದಲಿನ ಪುರುಷರನ್ನೇ ಮದುವೆಯಾಗಬೇಕೆಂಬ

ನಿಯಮವಿದೆ ಈ ಸಭೆಯನ್ನು ಸ್ಥಾಪಿಸಿದವಳು ಮಿಸ್ ಮಿಲ್ಡ್ರೆಡ್ ಕಾಂಟ್‌ಬುಲ್. ಈ ಕೆಯು ಈಗಲೂ ಅದರ ಅಧ್ಯಕ್ಷೆಯಾಗಿದ್ದಾಳೆ. ಈಗ ಸಭೆಯಲ್ಲಿ ಕೇವಲ ೧೩ ಸದಸ್ಯರಿರುವುದಿದ್ದರೂ ಸಂಘಕ್ಕೆ ಸೇರಲು ಸಿದ್ಧರಾಗಿರುವ ಉತ್ಸಾಹಿಗಳು ಹಲವಾರು ಮಂದಿಯಿದ್ದಾರೆ. ಪ್ರತಿ ವರುಷ ಸಭೆಯವರು ಒಂದು ಭೋಜನವನ್ನೇರ್ಪಡಿಸುತ್ತಾರೆ. ಭೋಜನಕ್ಕೆ ಬರುವಾಗ ಸದಸ್ಯರು ಕೆಂಪು ಕೂದಲಿನ ಪುರುಷರನ್ನು ಕರೆದುಕೊಂಡು ಬರಬೇಕೆಂಬ ನಿಯಮವಿದೆ.

**ವಿಧೇಯ ಗಂಡಂದಿರು!**

ಗಂಡಂದಿರ ಕೂದಲು ಕೆಂಪಿದ್ದರೆ ಪತ್ನಿಯರು ಹೇಳಿದಂತೆ ವಿಧೇಯರಾಗಿ ನಡೆಯುತ್ತಾರೆಂಬ ವಿಶ್ವಾಸವು ಅವರಲ್ಲಿ ಬೇರೂರಿಬಿಟ್ಟಿದೆ. ಈ ಸಂಘದ ಸದಸ್ಯರು ಕೆಂಪು ಕೂದಲಿಲ್ಲದವರನ್ನು ಪ್ರೀತಿಸುವುದು ಕೂಡಾ ಸಭೆಯವರಿಂದ ನಿಷೇಧಿಸಲ್ಪಟ್ಟಿದೆ. ಬೇರೆ ಬಣ್ಣದ ಕೂದಲಿರುವ ಗಂಡಂದಿರನ್ನು ಮದುವೆಯಾದರೆ ಕೂಡಲೆ ಅಂಥವರ ಸದಸ್ಯತನವು ಮನ್ನಾ ಮಾಡಲ್ಪಡುತ್ತದೆ.

**ಬೇಡವಾದ ಕೂದಲನ್ನು ಹೋಗಲಾಡಿಸುವುದು**

ಕೂದಲನ್ನು ಬೆಳೆಸುವಷ್ಟೇ ಅದನ್ನು ಹೋಗಲಾಡಿಸುವುದು ಕಷ್ಟವಾಗಿದೆ. ರೋಮ ನಾಶಗೊಳಿಸಲು ಜಾರಿಯಲ್ಲಿರುವ ಕ್ರಮಗಳು ಅಸಂಖ್ಯಾತವಾಗಿವೆ. ಇತ್ತೀಚೆಗೆ ಒಂದು ಮಯಣವು ಕಂಡು ಹಿಡಿಯಲ್ಪಟ್ಟಿದೆ. ಬೇಡವಾದ ಕೂದಲುಗಳನ್ನು ತೆಗೆಯ ಬೇಕೆಂದಿದ್ದರೆ ಈ ಮಯಣವನ್ನು ಅಂಥ ಭಾಗದ ಮೇಲೆ ಸವರಿದೊಡನೆಯೇ ಕೂದಲು ಕತ್ತರಿಸಲ್ಪಡುತ್ತದೆ. ಮೊದಲು ಈ ಮಯಣವನ್ನು ಬಿಸಿಮಾಡಿ ಚರ್ಮದ ಮೇಲೆ ಹರಡಬೇಕು ತಣ್ಣಗಾದ ನಂತರ ಕೂದಲುಗಳನ್ನು ಸಿಪ್ಪೆಯಂತೆ ಎಬ್ಬಿಸಲು ಸುಲಭವಾಗುತ್ತದೆ.

**ಕೇಶವರ್ಣ**

ಕೂದಲುಗಳಿಗೆ ಬಣ್ಣ ಹಾಕುವುದು ಸರ್ವಸಾಮಾನ್ಯವಾದೊಂದು ಕ್ರಮವಾಗಿದೆ. ಕೂದಲು ರಂಗುಗಳಿಂದ ಯಾವ ಬಣ್ಣವನ್ನೂ ಕೊಡಲಾಗುತ್ತದೆ. ಹೊಲಿವುಡ್ಡಿನಲ್ಲಿ ಸಾಯಂಕಾಲಗಳಲ್ಲಿ ಸ್ತ್ರೀಯರು ಸ್ವರ್ಣವರ್ಣವನ್ನು ಹಚ್ಚಿಸಿಕೊಳ್ಳುವರೆಂದು ಸೌಂದರ್ಯಕ್ಕೆ ಸಂಬಂಧಿಸಿದ ಒಂದು ಪತ್ರಿಕೆಯು ಹೇಳುತ್ತಿದೆ. ಈ ಪದ್ಧತಿಯನ್ನು ಮೊದಲು ಜಾರಿಗೆ ತಂದವಳು 'ಏನ್ ಡಾಕ್ವಾ'ರ ಎಂಬ ಚಲನ ಚಿತ್ರ ನಟಿ. ಹೀಗೆ ಕೇಶ ಸೌಂದರ್ಯವನ್ನು ಹೆಚ್ಚಿಸುವುದು ಆಧುನಿಕ ಸ್ತ್ರೀಯರ ಮಹತ್ವದ ಕಲಾಪೂರ್ಣ ಕಾರ್ಯವಾಗಿ ಪರಿಣಮಿಸಿದೆ.

---



ಹೊಲಿವುಡ್ಡಿನ ನಟಿಯರಲ್ಲಿ ಅತ್ಯಂತ ನುಣುಪು ಕೂದಲಿರುವ ಸಿಡ್ನೆ ಫಾಕ್ಸ್.

**ವಿದ್ಯುಚ್ಛಕ್ತಿ ವಿಧಾನ**

ಇತ್ತೀಚೆಗೆ ಇಲೆಕ್ಟ್ರೋಲಿಸಿಸ್ ಎಂಬೊಂದು ವಿಧಾನವು ಶೋಧಿಸಲ್ಪಟ್ಟಿದೆ. ಇಲೆಕ್ಟ್ರಿಕ್ ವಯರ್‌ಗಳಿಗೆ ಸೂಕ್ಷ್ಮ ಸೂಜಿಗಳನ್ನು ಜೊತೆಗೊಳಿಸಿ ಅವುಗಳನ್ನು ರೋಮಕೂಪಗಳೊಳಗಿಟ್ಟು ಸ್ವಲ್ಪ ವಿದ್ಯುಚ್ಛಕ್ತಿಯನ್ನು ಬಿಡುವುದರಿಂದ ರೋಮಕೂಪಗಳು ಸಾಯುತ್ತವೆ.

# ಮಾಲತಿಯ ಮದುವೆ

ಕತೆಗಾರರು: ಶ್ರೀ. ಪಿ. ವಿ. **ಉಪಾಧ್ಯಾಯ,** ಬಿ. ಎ. ಎಲ್. ಎಲ್. ಬಿ. ವಕೀಲ್, ಕಾರ್ಕಳ.

ಮಾಲತಿಗೆ ಹೇಗೂ ಮದುವೆಯಾಯಿತೆಂದಾಯಿತು. ಯಾವ ಕೆಟ್ಟ ಗಳಿಗೆಯಲ್ಲಿ ಹುಟ್ಟಿದಳೋ ಹುಡುಗಿ. ಹೇಗಾದರೂ ಅವಳನ್ನು ಹೊರಗೆ ಹಾಕಬೇಕಾದರೆ ಪ್ರಾಣಕ್ಕೆ ಬಂತು. ಅವಳ ಅಕ್ಕನಿಗೆ ಹನ್ನೆರಡು ವರ್ಷದಲ್ಲಿಯೇ ಚಿನ್ನದಂತಾ ಗಂಡ ಬಂದಿದ್ದ. ಅಂದರೆ ಅವಳ ಜಾತಕ ಅಷ್ಟು ಒಳ್ಳೆಯದಿತ್ತು. ಆದುದರಿಂದ ಸುಲಭದಲ್ಲಿಯೇ ಮದುವೆಯಾಯಿತು. ಮಾಲತಿಯ ಜಾತಕ ಸಾಧು ಜಾತಕವಂತೆ. ದೋಷ ಸಾಲದಂತೆ. ಎಲ್ಲಿ ಕೊಂಡು ಹೊಂದರೂ ಗೋವೆಯ ಪಾವಾಣೆಯಂತೆ ಆಗುವುದಿಲ್ಲವೆಂದು ಮನೆಗೆ ಬರುತ್ತಿತ್ತು. ಜಾತಕದಲ್ಲಿ ದೋಷಗಳು ಯಥೇಷ್ಟ ಇರುತ್ತಿದ್ದರೆ ಹುಡುಗಿಯ ಯೋಗ್ಯತೆಗೇನೆನ್ನಬೇಕು. ಬಹಳ ಸುಲಕ್ಷಣವಾದ ಹುಡುಗಿ. ಕ್ಲಾಸಿನಲ್ಲಿ ಎಲ್ಲರನ್ನೂ ಹಿಂದೆ ಹಾಕಿ ಮುಂದೆ ಬಂದಿದ್ದಾಳೆ. ನಡೆನುಡಿಯೆಂದರೆ ಇತರ ಹುಡುಗಿಯರು ಅಸೂಯೆ ಪಡಬೇಕು. ಅಂಥಾ ಮುದ್ದು ಹುಡುಗಿ ನಮ್ಮ ಮಾಲತಿ. ನೋಡಿದವರೆಲ್ಲರೂ ಹೇಳುತ್ತಿದ್ದರು—ಹುಡುಗಿಗೆ ಯೋಗ್ಯ ವರ ಸಿಕ್ಕುವನೆಂದು. ಜಾತಕದಲ್ಲಿ ದೋಷ ಕಡಿಮೆಯೆಂದು ಪಾಪ ಅವರಿಗೇನು ಗೊತ್ತು!

ಡಾಕ್ಟರ ಶಾಮರಾಯರ ಮಗ ಸುಧಾಕರನಿಗೆ ಜಾತಕ ಕೊಂಡು ಹೋಯಿತೆಂದು ಕೇಳಿ ನಮಗೆಷ್ಟು ಆನಂದವಾಯಿತು. ಶಾಮರಾಯರ ನೆಂಟಸ್ತಿಕೆಯೆಂದರೆ ತಪಸ್ಸು ಮಾಡಿದರೂ ನಮ್ಮಂಥವರಿಗೆ ಸಿಕ್ಕುವದಲ್ಲ. ಹುಡುಗಿ ಕಡೆಯುವರು ಬಡವರಾದರೆ ನಮಗೇನು? ಹುಡುಗಿ ಚಲೋದಿದ್ದರೆ ಸರಿ-ಎಂದು ಶಾಮರಾಯರು ಹೇಳಿದ್ದರಂತೆ- 'ಸುರುವಿನವನಿಗೆ ದೊಡ್ಡವರ ಮನೆಯಿಂದ ಹುಡುಗಿ ತಂದು ಸಾಕು ಸಾಕಾಯಿತು. ನಮ್ಮ ಸುಧಾಕರನಿಗಾದರೂ ಬಡವರಲ್ಲಿಂದ ಹುಡುಗಿ ತರಬೇಕೆಂದು ಶಾಮರಾಯರ ಹೆಂಡತಿ ಸತ್ಯಮ್ಮನು ನಮ್ಮ ನೆರೆಯ ಗೋಪಮ್ಮನ ಹತ್ತಿರ ಹೇಳಿದ್ದರಂತೆ – 'ನಿನಗೆ ಮಾಲತಿ ಹೆಂಡತಿಯಾದರೆ ಆದೀತೇ' ಎಂದು ಸುಧಾಕರನ ಸ್ನೇಹಿತರು ಆತನೊಡನೆ ಕೇಳಿದ್ದಕ್ಕೆ ಸುಧಾಕರನು ಯಾವುದಕ್ಕೂ ಜಾತಕ ಘಟನೆಯಾಗುವುದೆಂದು ಜೋಯಿಸರು ಹೇಳಬೇಕಷ್ಟೆ-ಎಂದು ಉತ್ತರ ಕೊಟ್ಟಿದ್ದನಂತೆ ಸುಧಾಕರನಿಗೆ ಜಾತಕ ಕೊಂಡುಹೋಗಿದೆ ಎಂದು ನಾವು ಮಾಲತಿಯ ಕೂಡೆ ಹೇಳಿದ್ದಕ್ಕೆ- ಯಾವುದಕ್ಕೂ ಪುಣ್ಯ ಬೇಕೆಂದು ಹುಡುಗಿ ಕಣ್ಣೀರು ಬಿಟ್ಟಳು. ಆದರೆ ಮಾಡುವದೇನು? ಜಾತಕ ಘಟನೆಯಾಗುವುದಿಲ್ಲವೆಂದು ಜೋಯಿಸರು ಅಂದುಬಿಟ್ಟರು. ಸುಧಾಕರನದು ಕಠಿನ ಜಾತಕವಂತೆ. ಹುಡುಗಿಯ ಜಾತಕದಲ್ಲಿರುವ ದೋಷ ಸಾಲದಂತೆ.

ಹೇಗೂ ಸುಧಾಕರನಿಗೆ ಮದುವೆಯಾಗಿ ಹೋಯಿತು. ಡಾಕ್ಟರ ಗೋಪಾಲರಾಯರ ಮಗಳು ಸುಂದರಿಯನ್ನು. ಹುಡುಗಿಯನ್ನು ನೋಡಿದರೆ ಸುಧಾಕರನಿಗೆ ಆಗುವುದಿಲ್ಲವಂತೆ. ಜಾತಕ ಸರಿಯಾಗಿ ಘಟನೆಯಾಗುತ್ತದೆಂದು ಶಾಮರಾಯರು ಹೇಳಿದ್ದಕ್ಕೆ-'ಹಾಗಾದರೆ ಆ ಜಾತಕಗಳಿಗನೇ ವಿವಾಹವಾಗಲಿ. ನಾನು ಬರುವುದಿಲ್ಲ'ವೆಂದು ಸುಧಾಕರನು ಅಂದನಂತೆ. ಡಾಕ್ಟರ್ ಗೋಪಾಲರಾಯರೆಂದರೆ ಅರ್ಧ ಲಕ್ಷ ಸಂಪಾದನೆ ಮಾಡಿದವರು. ಸುಂದರಿಯೊಬ್ಬಳೇ ಮಗಳು ಅವರಿಗೆ. 'ಹುಡುಗಿ ಹೇಗಿದ್ದರೇನು. ನಾವು ಅವಳನ್ನು ಡಾನ್ಸಿಗೆ ಕರೆದುಕೊಂಡು ಹೋಗಬೇಕೇ?' ಎಂದು ಸತ್ಯಮ್ಮನು ಮಗನಿಗೆ ಬಹಳವಾಗಿ ಸಂತೈಸಿ ಮದುವೆ ಮಾಡಿಸಿದ್ದಂತೆ. ಹುಡುಗನು ಮದುವೆಯಾದ ನಂತರ ಈವರೆಗೂ ಅತ್ತೆಯ ಮನೆಗೆ ಹೋಗಲಿಲ್ಲವಂತೆ. ಒಮ್ಮೆ ಸತ್ಯಮ್ಮನು ತನ್ನ ಮಗನ ಕೂಡ - ನಿನಗೆ ಆ ಹುಡುಗಿಯ ಮೇಲೆ ಅಷ್ಟು ದ್ವೇಷವೇನೆಂದು ಕೇಳಿದ್ದಕ್ಕೆ ಅವನು- ಅಮ್ಮಾ ಗ್ರಹ ಮಿತ್ರತ್ವ ಇದೆಯೆಂದು ಜೋಯಿಸರು ಹೇಳಿರುವರಲ್ಲವೇ? ನಿಮಗಷ್ಟು ಭಯವೇನು?' ಎಂದು ಸುಧಾಕರನು ಉತ್ತರ ಕೊಟ್ಟನಂತೆ. 'ನಮ್ಮ ಜೋಯಿಸರಲ್ಲದಿದ್ದರೆ ಮಾಲತಿಯು ಈಗ ನನ್ನವಳಾಗುತ್ತಿದ್ದಳು' — ಎಂದು ಸುಧಾಕರನು ತನ್ನ ಗೆಳೆಯರೊಡನೆ ಆಗಾಗ್ಗೆ ಹೇಳುತ್ತಿದ್ದನಂತೆ.

ಹೇಗೂ ಸುಧಾಕರನು ತಪ್ಪಿ ಹೋದನು. ರಾಮಾಚಾರ್ಯರ ಮಗ ಶ್ರೀನಿವಾಸನಿಗಾದರೂ ಮಾಲತಿಯನ್ನು ಕೊಡಬೇಕೆಂದು ನಮಗೆ ಆಶೆ


ರವಿತ್ತು. ಹುಡುಗನು ಅಷ್ಟು ಐಶ್ವರ್ಯವಂತನಲ್ಲವಿದ್ದರೂ ವಿದ್ಯಾವಂತ. ಸುಖವಾಗಿ ಅವರ ದಿನ ಹೋಗುತ್ತಿತ್ತು. ಆದರೆ ನಮಗೂ ಅವರಿಗೂ ಸಗೋತ್ರವೆಂದು ಬಿಟ್ಟುಬಿಡಬೇಕಾಯಿತು. ಹುಡುಗಿಯನ್ನು ಇನ್ನು ಮನೆಯಲ್ಲಿಟ್ಟುಕೊಳ್ಳುವುದೇ ಕಷ್ಟವಾಯಿತು. – 'ಇವರ ಧೈರ್ಯವೇನು?' ಹುಡುಗಿಗೆ ಹದಿಮೂರು ಮುಗಿಯಿತು. ಇನ್ನೂ ಮನೆಯಲ್ಲಿಟ್ಟುಕೊಂಡಿದ್ದಾರೆ'ಎಂದು ನೆರೆಹೊರೆಯ ಹೆಂಗಸರೆಲ್ಲರೂ ಮಾತಾಡ ಹತ್ತಿದರು. ಹುಡುಗಿಗೆ ಅಹೋರಾತ್ರಿ ಕಣ್ಣೀರು ಸುರಿಸುವದೇ ಗತಿಯಾಯಿತು. ಹೊರಗಿನವರ ಮಾತಿರಲಿ, ನಮ್ಮ ಪರಿಸ್ಪಂದದ ಹೆಂಗಸರಿಗೂ-'ಹುಡುಗಿಗೆ ಇನ್ನೂ ಮದುವೆಯಾಗಲಿಲ್ಲ'ವೆಂಬ ಮಾತು ವಿನಾ ಬೇರೆ ವಿಚಾರವೇ ಇಲ್ಲವೆಂತಾಯಿತು. ನ್ಯಾಯವಾಯಿತೆಂದು ಯಾರ ಕುತ್ತಿಗೆಗಾದರೂ ಕಟ್ಟಲಿಕ್ಕೆ ಸಾಧ್ಯವಿದೆಯೇ ಎಂದು ನಾವು ಸಮಾಧಾನ ಮಾಡಿಕೊಂಡು ಇದ್ದೆವಾದರೂ ಹೆಂಗಸರು ಬಿಡುವರೇ? ಸಹಜವಾಗಿ ಯೋಚಿಸಿದರೆ ಸ್ತ್ರೀ ಸಮಾಜಕ್ಕೆ ಸ್ತ್ರೀಯರೇ ಶತ್ರುಗಳೆಂದು ನನಗೆನಿಸುತ್ತದೆ. ಏಕೆಂದರೆ ಮಾಲತಿಯ ಮದುವೆಯ ವಿಷಯದಲ್ಲಿ ನಮ್ಮಷ್ಟೇ ತಾಳ್ಮೆಯು ನಮ್ಮ ಹೆಂಗಸರಿಗಿರುತ್ತಿದ್ದರೆ ಅವಳಿಗೆ ಈಗ ಇಷ್ಟು ದುಃಖವಿರುತ್ತಿರಲಿಲ್ಲ.

ಹುಡುಗಿಯನ್ನು ಸೋದರ ಮಾವನ ಮಗ ಗೋಪುನಿಗೆ ಕೊಡಬೇಕೆಂದು ಸೋದರ ಮಾವನ ಹೆಂಡತಿ ರಾಧಮ್ಮನ ಆಶೆ. 'ವಿದ್ಯೆ ಕಲಿತ ಹುಡುಗಿಯನ್ನು ನಮ್ಮ ಗೋಪುವಿಗೆ ಅವರು ಕೊಡುವರೇ?' ಎಂದು ಅವಳು ಅನೇಕ ವೇಳೆ ಕೆಣಕಿಸುತ್ತಿದ್ದಳು. 'ಗೋಪುವನ್ನು ಮದುವೆ ಮಾಡಿಕೊಳ್ಳುವುದಕ್ಕಿಂತ ಬಾವಿಗೆ ಹಾರಿ ಪ್ರಾಣ ತೆಗೆದುಕೊಳ್ಳಬಹುದೆ'ಂದು ಮಾಲತಿಯೂ ಒಮ್ಮೆ ತಾಯಿಯ ಹತ್ತಿರ ಹೇಳಿದ್ದಳಂತೆ. 'ಮೂರನೇ ಕ್ಲಾಸಿನಲ್ಲಿ ಮೂರು ವರುಷ ಕುಳಿತು ಶಾಲೆಯಿಂದ ಬಂದ ಗೋಪುವಿಗೆ ನಮ್ಮ ಮಾಲತಿಯ ಸಿಗುವಳೇ' ಎಂದು ಮಾಲತಿಯ ಅಣ್ಣನೂ ಹೇಳಿದ್ದನಂತೆ. ಈ ಸಮಾಚಾರವೆಲ್ಲಾ ರಾಧಮ್ಮನಿಗೆ ಗೊತ್ತಿದ್ದು ಅವರು ಮಾಲತಿಯ ಜಾತಕವನ್ನು ಈ ವರೆಗೆ ಕೇಳಲಿಲ್ಲ. ಎಲ್ಲೆಲ್ಲಿಯೂ ಮಾಲತಿಯ ಜಾತಕಕ್ಕೆ ತಿರಸ್ಕಾರವೆಂದು ತಿಳಿದ ನಂತರ ರಾಧಮ್ಮನು ಗೋಪುವಿನ ಜಾತಕವನ್ನು ನಮ್ಮಲ್ಲಿಗೆ ಕಳುಹಿಸಿದಳು- ಇಷ್ಟವಿದ್ದರೆ ಹುಡುಗಿಯನ್ನು ಕೊಡಲಿ ಇಲ್ಲದಿದ್ದರೆ ನಮಗಿಂತ ದೊಡ್ಡವರಿಗೆ ಕೊಡಲಿ. ಜಾತಕವಂತೂ ಉತ್ತಮ ತರಗತಿಯಲ್ಲಿ ಘಟನೆಯಾಗುತ್ತದೆ' ಎಂದು ರಾಧಮ್ಮನು ಪ್ರತ್ಯೇಕ ಹೇಳಿ ಕಳುಹಿಸಿದ್ದಳು. ನಮ್ಮ ಜೋಯಿಸರಂತೂ-'ನೀವು ಎಷ್ಟು ಬೇಕಾದರೂ ಪ್ರಯತ್ನಿಸಿರಿ, ಮಾಲತಿಯು ಗೋಪುವಿನ ಕೈಯನ್ನು ಹಿಡಿಯುವಳು' ಎಂದೊಮ್ಮೆ ಹೇಳಿ ನಗುತ್ತಿದ್ದರು. ಆ ಮಾತು ಸತ್ಯವಾಗುವದೆಂದು ನಮಗೆ ತೋರಿತು.

ಗೋಪುವಿನ ಜಾತಕ ಮನೆಗೆ ಬಂದ ನಂತರವಂತೂ ನಮ್ಮ ಮಾಲತಿಯು ಬಾಡಿದ ಹೂವಿನಂತಾದಳು. ಅರುವತ್ತು ವರುಷದ ಮುದುಕಿಯಂತೆ–'ಯಾವುದಕ್ಕೂ ಪುಣ್ಯ ಬೇಕು' ಎಷ್ಟೆಷ್ಟು ಪಡಕೊಂಡು ಬಂದಿದ್ದೆವೋ ಅಷ್ಟಷ್ಟೇ ಸಿಕ್ಕೀತು''–ಎಂದೆಲ್ಲಾ ಮಾತಾಡುತ್ತಿದ್ದಳು. ಹುಡುಗಿಯು ಶಾಲೆಯಲ್ಲಿ ಕಲಿಯುತ್ತಿರುವಾಗ-ಚೆನ್ನಾಗಿ ಕಲಿತು ಜಾಣೆಯಾದರೆ ವಿದ್ಯಾವಂತನಾದ ಗಂಡ ದೊರೆಯುವನು. ಪಾಠ ಕಲಿಯದೆ ಹೆಡ್ಡಿಯಾದರೆ ಗೋಪುವಿನಂತಹ ದಡ್ಡನು ದೊರೆಯುವನೆಂದು ನಾವು ಆಗಾಗ್ಯೆ ಹೇಳುತ್ತಿದ್ದೆವು-'ಎಷ್ಟು ಕಲಿತರೂ ನನ್ನ ಗತಿ ಹೀಗಾಗಬೇಕೇ?' ಎಂದು ಮಾಲತಿಯೂ ಹಗಲಿರುಳು ಮರುಗುತ್ತಿದ್ದಳು.

ಆದರೂ ಮಾಲತಿಯು ಗೋಪುವಿನ ಕೈ ಹಿಡಿದೇ ಬಿಟ್ಟಳು. ನಾವೇನು ಮಾಡಲಾದೀತು? ಒಳ್ಳೇ ವರನನ್ನು ಹುಡುಕಿ ವಿವಾಹ ಮಾಡಬೇಕೆಂದು ಬಹಳ ಪ್ರಯತ್ನಿಸಿದೆವು. ಸಂದರ್ಭವೂ ಬೇಕಾದಷ್ಟಿತ್ತು ಜೋಯಿಸರು ಬಿಡಲಿಲ್ಲ ಬ್ರಹ್ಮಸಂಕಲ್ಪವೆಂದು ಈಗ ನಮ್ಮನ್ನು ಸಮಾಧಾನ ಪಡಿಸುತ್ತಿದ್ದಾರೆ. ಗೋಪುವಿನ ಜಾತಕ ಬಹಳ ಉತ್ತಮ ಜಾತಕವಂತೆ. ಆದರಲ್ಲಿ ಗಜಕೇಸರಿ ಯೋಗ ಉಂಟಂತೆ. ಬಹಳ ಕೀರ್ತಿ ಯಶಸ್ಸನ್ನು ಪಡೆದು ಸುಖಿಯಾಗಿ ಜೀವಿಸುವನಂತೆ. ಏನೋ, ಅದು ಹೇಗೆಂದು ನಮಗೆ ತಿಳಿಯದು. ಇನ್ನೊಬ್ಬರು ಹೇಳಿದ್ದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಲಾರದಷ್ಟು ಮಂದ ಬುದ್ಧಿಯ ಹುಡುಗ. ಅವನಿಗೆ ಕೀರ್ತಿ ಯಶಸ್ಸು ಎಲ್ಲಿಂದ ಬರಬೇಕೋ ಆ ಜೋಯಿಸರಿಗೇನೇ ಗೊತ್ತು.

ಆಹಾ, ಇದೆಲ್ಲಾ ಬ್ರಹ್ಮ ಸಂಕಲ್ಪವೇ? ಬ್ರಹ್ಮನು ಅಷ್ಟು ಕಠಿನ ಹೃದಯನೇ? ಯಾರು ಯಾರನ್ನು ವಿವಾಹವಾಗಬೇಕೆಂದು ಅತ್ಯಂತ ಆತುರ ಪಡುತ್ತಿರುವರೋ ಅವರೊಳಗೆ ವಿವಾಹವಾಗ ಬಿಡದೆ ಎಲ್ಲ ಸ್ವಾಭಾವಿಕವಾದ ಪ್ರೇಮವಿರಲು ಸಾಧ್ಯವಿಲ್ಲವೋ ಅಲ್ಲಿ ವಿವಾಹವನ್ನು ಒತ್ತಾಯದಿಂದ ಬೆಳೆಯಿಸುವ ಅವನ ಉದ್ದೇಶವಾದರೂ ಏನಿರಬೇಕು. ಬ್ರಹ್ಮನು ಇಷ್ಟು ಅವಿವೇಕಿಯೇ? ಇದೇನೆಂದು ಯೋಚಿಸುವವರು ನಮ್ಮಲ್ಲಿರುವರೇ?




ಸನ್ಯಾಸಿಗಳಲ್ಲಿ ಸುಧಾರಣೆಯಾಗುತ್ತಿದೆ; ಸನ್ಯಾಸಿಗಳ ಮಂತ್ರಗಳೂ ಬೇರೆಯಾಗುತ್ತಿವೆ.

೦ ೦ ೦

ಬರ್ಮದ ಬುದ್ಧ ಸನ್ಯಾಸಿಗಳು ಹಿಂದೀಯರ ಅಂಗಡಿಯೆದುರು ತಪಸ್ಸಿಗೆ ನಿಂತಿದ್ದಾರೆ; "ಹಿಂದೀ ಸಾಮಾನುಗಳನ್ನು ಪಡಕೊಳ್ಳ ಬೇಡಿ" ಮಂತ್ರವನ್ನು ಜಪಿಸುತ್ತಿದ್ದಾರೆ.

೦ ೦ ೦

ಇದೇ ಸೆಪ್ಟೆಂಬರ ೩೦ರಲ್ಲಿ ಮದ್ರಾಸು ಹೈಕೋರ್ಟಿನ ಮುಂದೆ ಒಂದು ಕೇಸು ಬಂದಿತ್ತು. ಆರೋಪಿ 'ಜೈ ಸೀತಾರಾಂ' ಎನ್ನುವ ಒಬ್ಬ ಸನ್ಯಾಸಿ!

೦ ೦ ೦

ಈ ಮಹಾಮುನಿಗಳಾಧೀನ ಒಂದು ಕಟ್ಟು ಗಡ್ಡ, ಮತ್ತು ಒಂದು ಕಟ್ಟು ಗಾಂಜಾ ಇತ್ತು.

೦ ೦ ೦

ಗಡ್ಡ ಇರಲಿ, ಗಾಂಜಾ ಇದ್ದುದು ಪಾನ ನಿಷೇಧ ಕಾನೂನಿಗೆ ವಿರುದ್ಧ.

೦ ೦ ೦

ಸನ್ಯಾಸಿಯನ್ನು ಯಮದೂತರು ಮುಟ್ಟುವುದಿಲ್ಲ—ಹಾಗೆಯೆ ಪೋಲಿಸರೂ ಮುಟ್ಟಬಾರದಿತ್ತು. ಆದರೆ ಪೋಲಿಸರು ಹಿಡಿದರು!

೦ ೦ ೦

ಕೇಸಿನ ಮೇಲೆ ಅಪೀಲಾಗಿ ಹೈಕೋರ್ಟಿಗೆ ಬಂದಾಗ, 'ನಾನು ಸನ್ಯಾಸಿ, ನನಗೆ ಕಾನೂನಿನ ಸಂಗತಿ ಗೊತ್ತಿಲ್ಲ' ಎಂದಾಯಿತು ಸನ್ಯಾಸಿಯ ಹೇಳಿಕೆ. 'ನಿನಗೆ ಐದೇ ರೂಪಾಯಿ ಜುಲ್ಮಾನೆ' ಎಂದು ಕೋರ್ಟಿನ ತೀರ್ಪಾಯಿತು.

೦ ೦ ೦

ಸನ್ಯಾಸಿಗಳು ಅಂಗಡಿಯೆದಿರು, ಕೋರ್ಟಿನ ಮುಂದೆ ಬಂದು ನಿಲ್ಲ ಹತ್ತಿದ್ದಾರೆ. ಹಿಂದೆ ಕಾಡುಗಳಿದ್ದಲ್ಲಿ ಈಗ ಊರುಗಳಾಗಿವೆ-ಲೌಕಿಕದ ವ್ಯತ್ಯಾಸ ತಿಳಿಯದ ಸನ್ಯಾಸಿಗಳು ತಮ್ಮ ತಪಸ್ಸಿಗೆ ಸ್ಥಳ ಬದಲಾಯಿಸಲು ತಿಳಿಯದೆ ತಪ್ಪಿ ಬಿದ್ದಿರುವರೇ ಎಂಬ ಸಂದೇಹ!

೦ ೦ ೦

ಮದ್ರಾಸಿನ ಸರಕಾರೀ ಪ್ರೆಸ್ ಕೆಲಸಗಾರರು ಮುಷ್ಕರ ಹಿಡಿದರು—ಮಾನ್ಯ ರಾಜಗೋಪಾಲಾಚಾರ್ಯರದನ್ನು ಬಿಡಿಸಿದರು.

೦ ೦ ೦

ಆ ಕೆಲಸಗಾರರಿಗೆ ಬುದ್ಧಿವಾದ ಹೇಳುತ್ತಾ ಮಾನ್ಯ ಆಚಾರ್ಯರು 'ನೀವೆಲ್ಲಾ ಜರ್ಮನರಂತಹ ಶಿಸ್ತು ಮತ್ತು ಒಗ್ಗಟ್ಟನ್ನು ತೋರಿಸಬೇಕು' ಅಂದರು.

೦ ೦ ೦

'ನೀವು ಹಿಟ್ಲರರಂತಾಗಬಾರದು' ಎಂದು ಮಾನ್ಯ ಸಿ. ಆರ್‌ರವರನ್ನು ಹಲವರು ಎಚ್ಚರಿಸುತ್ತಿದ್ದಾರೆ. 'ನೀವು ಜರ್ಮನರಂತಾಗಬೇಕೆಂದು ಆಚಾರ್ಯರು ಹೇಳುತ್ತಿದ್ದಾರೆ. ಎಳೆದಾಟವಾಯ್ತಲ್ಲ!

೦ ೦ ೦

ಹಿಂದುಸ್ಥಾನಕ್ಕೆ ನಾಜೀ ಪಂಥ ಬಂದರಾಗದೆ? ಈ ವಿಷಯವನ್ನು ಕುರಿತು ಬೊಂಬಾಯಿ ಫ್ಯಾಕ್ಟರಿಯೊಂದರ ಮೆನೇಜರ ಒಬ್ಬ ನಾಜಿಯು ಪತ್ರಿಕೆಗಳಿಗೆ ಲೇಖನ ಬರೆದಿದ್ದ ಪ್ರಾರಂಭದ ಪೀಠಿಕೆಯಿದು.

೦ ೦ ೦

ಸತ್ಯಮೂರ್ತಿಯವರು ಫೆಸಿಸ್ಟ್ ಪ್ರಚಾರವನ್ನು ಹಾಗೆಯೇ ಬಿಟ್ಟಾರೆ! ಕೇಂದ್ರ ಎಸೆಂಬ್ಲಿಯಲ್ಲಿ ಆ ಕುರಿತು ಪ್ರಶ್ನೆಗಳ ಮೇಲೆ ಪ್ರಶ್ನೆ ಕೇಳಿಯೇ ಬಿಟ್ಟರು!

೦ ೦ ೦

ಈ ರೀತಿ ಜರ್ಮನ್ ಲೇಖಕನ ಕೈಯಿಂದ ಹೊರಟ ನಾಜೀ ತತ್ವವು ಸತ್ಯಮೂರ್ತಿಯವರ ಬಾಯಿಯ ವರೆಗೆ ಬಂದಂತಾಯಿತು. ಹಿಂದುಸ್ಥಾನದಲ್ಲಿ ಕೂಡಾ ಇಷ್ಟಾಗಿ ಹೋಯಿತು!

೦ ೦ ೦

ನಾವು ಜರ್ಮನರಂತಾಗಬೇಕೆಂಬ ಅಪೇಕ್ಷೆ ಮದ್ರಾಸಿನ ಮತ್ತೊಬ್ಬ ಮುಖಂಡರಾದ ಸತ್ಯಮೂರ್ತಿಯವರಿಗಿಲ್ಲ!


೦ ೦ ೦

'ಹಿಂದೀಯರು ಫೆಸಿಸ್ಟರ ಕುರಿತೇ ಚರ್ಚಿಸುತ್ತಿದ್ದಾರೆ—ನಮ್ಮ ಸುದ್ದಿಯಲ್ಲಿಲ್ಲ' ಎಂದು ಬೋಲ್ಶೆವಿಸ್ಟರು ಬೇಸರ ಪಡದಿರಲಿ. ಬೊಂಬಾಯಿ ಎಸೆಂಬ್ಲಿಯಲ್ಲಿ ಅವರ ಪ್ರಸ್ತಾಪವೂ ಬಂದಿದೆ.

೦ ೦ ೦

ಲೇಬರ್ ಬಿಲ್ಲಿನ ಚರ್ಚೆ ನಡೆಯುವಾಗ "ಕೂಲಿಗಾರ ಧುರೀಣರು ಸೋವಿಯೆಟರಿಂದ ಹಣ ಪಡೆಯುತ್ತಿದ್ದಾರೆ' ಎಂದು ಅಲಿ ಬಹದೂರು ಖಾನರವರು ಶಬ್ದ ಮಾಡಿಯೇ ಬಿಟ್ಟರು. ನಾಣ್ಯವಿಂತಹದೇ ಎಂದು ಶಬ್ದದಿಂದ ಗೊತ್ತು ಹಚ್ಚಲಾಗುತ್ತದಲ್ಲ!

—ದೂಮ



# ನಿಮಗೆ ಬೇಸರವಾದಾಗ ನನಗೆ ಬರೆಯಿರಿ.

## ಜಿ. ಆರ್. ಬಾರ್ಕೂರ್‌ರು

"ತಮ್ಮ ತಾ. 11-9-38ರ ಸಂಚಿಕೆಯಲ್ಲಿನ 'ಛಾಯಾಲೋಕ' (ಸಿನೇಮಾ ಪುಟ)ದಲ್ಲಿ ಸಂಗ್ರಹಕಾರರು 'ಶ್ರೀ' ಎಂದು ಬರೆದು ಮುಂದೆ ಮನುಷ್ಯನ ಮುಂಡಕ್ಕೆ ಕುದುರೆ ರುಂಡವಿದ್ದ ಒಂದು ಚಿತ್ರ ಬರೆದು ನಂತರ 'ರಾಯರು' ಎಂತ ಬರೆದಿರುತ್ತೀರಿ. ಹೀಗೆ ತಾವು ಮಾಡುವುದರಿಂದ ಆ ಲೇಖಕರಿಗೆ ಅವಮಾನ ಪಡಿಸಿದಂತೆ ಆಗಲಿಲ್ಲವೇ?"

ಶ್ರೀ. ಹಯವದನ ರಾಯರಲ್ಲಿ ನಿಮಗಿರುವ ಸಹಾನುಭೂತಿಯನ್ನು ನೋಡುವಾಗ ಬಹಳ ಸಂತೋಷವೆನಿಸುತ್ತದೆ. "ಹಯವದನ" ಎಂಬುದನ್ನು ಚಿತ್ರರೂಪದಲ್ಲಿ ತೋರಿಸಬಹುದೆಂದು ಶ್ರೀಯುತರೇ ಸೂಚಿಸಿರುವುದರಿಂದ ಅವಮಾನದ ಪ್ರಶ್ನೆಯೇ ತಲೆದೋರುವುದಿಲ್ಲ. "ಹಯವದನ" ಎಂಬುದಕ್ಕೆ "ಕುದುರೆಮುಖ" ವೆಂಬರ್ಥವಿರುವುದರಿಂದ ಈಗಿನ ಚಿತ್ರದ ಬದಲು ನಮ್ಮ ಜಿಲ್ಲೆಯ ಉನ್ನತ ಶಿಖರವಾದ ಕುದುರೆಮುಖದ ಚಿತ್ರವನ್ನು ಬರೆದು ಶ್ರೀ. (ಚಿತ್ರ).... ರಾಯರು ಎಂದು ಬರೆದರೆ ನಿಮಗೆ ಸಮಾಧಾನವಾಗಬಹುದೆಂದು ನಿರೀಕ್ಷಿಸಬಹುದೆ? ಮನುಷ್ಯ ಪ್ರಾಣಿಯಾದ ಶ್ರೀ ಹಯವದನ ರಾಯರಂತೆಯೇ ಕುದುರೆಯೂ ಒಂದು ಪ್ರಾಣಿಯೆಂಬುದನ್ನು ನೀವು ಒಪ್ಪಬಹುದು. ಡಾರ್ವಿನನ ಪ್ರತಿಪಾದನೆಗನುಸಾರವಾಗಿ ಮನುಷ್ಯ ಪ್ರಾಣಿಗೂ, ಪ್ರಾಣಿಗೂ ಸಂಬಂಧವಿರುವುದರಿಂದ ಈ ವಿಚಾರವೂ ಪೂರ್ಣ ಅಸ್ವಾಭಾವಿಕವಲ್ಲವೆಂದು ನಿಮಗೆ ಥಕ್ಕನೆ ಹೊಳೆಯಬಹುದು. ಹಯವದನ ರಾಯರು ಸಚಿತ್ರ ಹೆಸರನ್ನು ಕಂಡು ಕೆಲವರಾದರೂ ಸಂತೋಷದಿಂದ ನಕ್ಕರೆ ಅವರಿಗೆ ಪೂರ್ಣ ಸಮಾಧಾನವಿದೆ. ಹೇಗಿದ್ದರೂ "ಜಿ. ಆರ್. ಬಾರ್ಕೂರ್‌ರು" ಎಂಬ ತಮ್ಮ ಹೆಸರನ್ನು ಸಚಿತ್ರವನ್ನಾಗಿ ಮಾಡುವುದಿದ್ದರೆ ಶ್ರೀ. ಜಿ. ಆರ್ (ಬಾರ್ಕೂರು ಊರಿನ ನಕಾಶೆ) ಎಂದಾಗುತ್ತದೆ. ಹೀಗೆ ಮಾಡಿದರೆ ತಮಗೆ "ಅಪಮಾನ"ವಾಗಬಹುದೆಂಬ ಭಯದಿಂದ ನಿಮ್ಮ ಪ್ರಶ್ನೆಯ ಪ್ರಾರಂಭದಲ್ಲಿ ಕೇವಲ "ಜಿ. ಆರ್. ಬಾರ್ಕೂರ್‌ರು" ಎಂದು ಮಾತ್ರ ಬರೆಯಲಾಗಿದೆ.

* * *

ತಮ್ಮ ಪತ್ರಿಕೆಯಲ್ಲಿ 'ಗೆಳೆಯ' ಎಂಬ ಗುಪ್ತ ನಾಮದವರೊಬ್ಬರು ಬೀಡಿ ಸಿಗರೇಟು, ಪುಡಿ, ಬೀಡಾ ಮುಂತಾದ ವಿಷಯಗಳ ಕುರಿತು ಲೇಖನಗಳನ್ನು ಬರೆಯುತ್ತಾರಷ್ಟೇ? ಆ ಮಹಾತ್ಮರು ವಾಚಕರನ್ನು ಸಂಬೋಧಿಸುವಾಗ 'ಅಂತರಂಗದ ವಾಚಕನೇ' ಮುಂತಾದ ಏಕವಚನದಲ್ಲಿ ಕರೆಯುತ್ತಾರೆ. "ಅಂತರಂಗ"ವನ್ನು ಕಿರಿಯರೂ ಹಿರಿಯರೂ, ಅತೀ ಬಡವರೂ ಅತೀ ದೊಡ್ಡ ಶ್ರೀಮಂತರೂ, ಅಲ್ಪಜ್ಞಾನಿಗಳೂ ಮಹಾ ಜ್ಞಾನಿಗಳೂ ಎಲ್ಲರೂ ಓದುತ್ತಾರೆ. ಹೀಗಿರುವಾಗ ಆ ಗೆಳೆಯ ಮಹಾಶಯರು ಏಕ ವಚನದಲ್ಲಿ "ಅಂತರಂಗ"ದ ವಾಚಕರನ್ನು ಸಂಬೋಧಿಸುವುದು ನ್ಯಾಯವೇ?

"ಜನತಾ ಜನಾರ್ಧನ" ಎಂಬ ಜಾಣ್ನುಡಿಯನ್ನು ನೀವು ಕೇಳಿರಬಹುದು. "ಅಂತರಂಗ"ದ "ಗೆಳೆಯ"ರು ಜನತೆಯನ್ನು ಸಾಕ್ಷಾತ್ ಪರಮಾತ್ಮನೆಂದೇ ಭಾವಿಸುವರು. ನೀವು ಪರಮಾತ್ಮ ಅಥವಾ ಅವನ ಅವತಾರ ಪುರುಷರನ್ನು ಸಂಬೋಧಿಸುವಾಗ ಏಕವಚನವನ್ನೇ ಉಪಯೋಗಿಸುತ್ತೀರೆಂದು ನನ್ನೂಹೆ. "ಶ್ರೀ ಕೃಷ್ಣನು" ಎಂದಲ್ಲದೆ "ಶ್ರೀ ಕೃಷ್ಣರು" ಎಂದು ನೀವು ಹೇಳುವುದಿಲ್ಲ. "ಪರಮಾತ್ಮನು" ಎಂದಲ್ಲದೆ "ಪರಮಾತ್ಮರು" ಎಂದು ಹೇಳುವ ಉಪದ್ರವಕ್ಕೆ ನೀವು ಕೈಹಾಕುವುದಿಲ್ಲ. ಬಹುವಚನದಿಂದ ಕರೆಯುವುದರಿಂದ ಸಿಗುವ "ಶ್ರೀಮಂತಿಕೆ"ಯನ್ನು ನನಗೆ ಪುಕ್ಕಟೆಯಾಗಿ ಕೊಟ್ಟರೂ ಅದು ಬೇಡವೆನಿಸುತ್ತದೆ. ಒಟ್ಟಿನಮೇಲೆ ಹೇಳುವುದಿದ್ದರೆ ನಮ್ಮ "ಗೆಳೆಯ"ನು ಪರಮಾತ್ಮನಿಗೆ ಕೊಡುವಷ್ಟೇ ಮನ್ನಣೆಯನ್ನು ನಮ್ಮ ವಾಚಕರಿಗೂ ಕೊಟ್ಟಿದ್ದಾನೆ. ಇಷ್ಟೊಂದು ಗೌರವವು ಧರ್ಮಕ್ಕೆ ಸಿಗುವಾಗ (ಅಂತರಂಗಕ್ಕೆ ಕೊಡುವ ಒಂದಾಣೆ

ಯಂತಿರಲಿ!) ಅದಕ್ಕೂ ನಿಮ್ಮ ಆಕ್ಷೇಪವೆ?

* * *

"ಅಂತರಂಗ"ವು ಆದಿತ್ಯವಾರ ಹೊರಡುವುದೆಂದಿದ್ದರೂ ಮೂರು ದಿವಸಗಳ ಮುಂಚಿತವಾಗಿ, ಅಂದರೆ ಗುರುವಾರ ಸಂಜೆಯೇ 'ಬಹಿರಂಗ'ವಾಗಲು ಕಾರಣವೇನು?

ಅಂತರಂಗವು ದಕ್ಷಿಣಕನ್ನಡದಲ್ಲಿ ಮಾತ್ರ ಪ್ರಸಾರವಾಗುವ ಪತ್ರಿಕೆಯಲ್ಲ. ಅದು ಕರ್ನಾಟಕದ ಮೂಲೆ ಮೂಲೆಗಳಿಗೆ ಹೋಗಬೇಕಾಗಿದೆಯೆಂಬುದನ್ನು ನೀವು ತಿಳಿಯಬೇಕಾದುದು ಈಗ ಅವಶ್ಯವೆನಿಸುತ್ತದೆ. ಮೂರು ದಿನಗಳ ಮೊದಲು ಅಂತರಂಗವು ಏಕೆ ಹೊರಡುತ್ತಿದೆಯೆಂಬುದಕ್ಕೆ ನಿಮಗೊಂದು ಉದಾಹರಣೆಯನ್ನು ಕೊಡುತ್ತೇನೆ:—

ಅಕ್ಟೋಬರ ೩೦ರಂದು ಮುಂಬಯಿಯಲ್ಲಿ ಜರಗಬಹುದಾದ ಒಂದು ಸಭೆಗೆ ನೀವು ಅದೇದಿನ ಹೊರಡದೆ, ಬಾರ್ಕೂರಿನಿಂದ ಮೂರು ದಿನಗಳ ಮೊದಲೇ ಹೊರಡುವುದೇಕೆ? ಈ ಪ್ರಶ್ನೆಗೆ ನೀವು ಸರಿಯಾದ ಉತ್ತರವನ್ನಿತ್ತರೆ ಅಂತರಂಗವು ಮೂರುದಿನಗಳ ಮೊದಲೇ 'ಬಹಿರಂಗ'ವಾಗುವುದೇಕೆಂದು ನಾನು ವಿವರಿಸಬಲ್ಲೆ.

ಅದಂತಿರಲಿ. ಪರಮಾತ್ಮನು ಜಗತ್ತನ್ನು ಒಂದೇರೀತಿಯಲ್ಲಿ ಸೃಷ್ಟಿಸಲಿಲ್ಲ. ಜಗತ್ತಿನಲ್ಲಿ ದೂರ-ಸಮೀಪವೆಂಬ ವ್ಯತ್ಯಾಸವೇ ಇರಬಾರದಿತ್ತು. (ಅಂಥ ವ್ಯತ್ಯಾಸವಿಲ್ಲದಿದ್ದರೆ ನೀವು ಅಕ್ಟೋಬರ ೩೦ರಂದೇ ಮುಂಬಯಿಗೆ ಹೊರಡಬಹುದಿತ್ತು!) ಉಡುಪಿಯಿಂದ ಟಪ್ಪಾಲನ್ನು ಇನ್ನೂ ಮೋಟಾರುಗಳಲ್ಲಿ ಕೊಂಡು ಹೋಗುತ್ತಿರುವುದಲ್ಲದೆ ವಿಮಾನವನ್ನುಪಯೋಗಿಸಲು ಪ್ರಾರಂಭಿಸಲಿಲ್ಲ. ವಿಮಾನಗಳು ಟಪ್ಪಾಲನ್ನು ಮೈಸೂರು ಬೆಂಗಳೂರು ಧಾರವಾಡ ಮೊದಲಾದೆಡೆಗಳಿಗೆ ಕೊಂಡೊಯ್ಯಲು ಪ್ರಾರಂಭಿಸಿದೊಡನೆಯೇ ಅಂತರಂಗವು ಆದಿತ್ಯವಾರವೇ ಪ್ರಕಟವಾಗುವವೆಂದು ನೀವು ನಿರೀಕ್ಷಿಸಬಹುದು!

* * *

### ವಿಶ್ವ ವೈಚಿತ್ರ್ಯ . . . . ಅಡಿ ಮೇಲಾಗಿ ಈಜುವ ಮೀನು!



ಆಫ್ರಿಕದ ನೀಲ ನದಿಯಲ್ಲಿರುವ ವಿಚಿತ್ರ ಮೀನುಗಳು ಅಡಿಮೇಲಾಗಿ ನೀರಿನಲ್ಲಿ ಈಜುತ್ತವೆ. ಇತರ ಮೀನುಗಳ ಬೆನ್ನು ಕಪ್ಪಾಗಿರುವುದಿದ್ದರೂ ಇದರ ಹೊಟ್ಟೆಯ ಭಾಗವು ಕಪ್ಪಾಗಿದೆ. ಇನ್ನೊಂದು ವಿಚಿತ್ರ ಮೀನೆಂದರೆ ಭಾರತ ಸಾಗರದಲ್ಲಿರುವ ಸೂಜಿ ಮೀನು. ಈ ಮೀನುಗಳ ಗುಂಪೊಂದನ್ನು ಮೇಲಿನ ಚಿತ್ರದಲ್ಲಿ ಕಾಣಬಹುದು. ಈ ವಿಚಿತ್ರ ಮೀನುಗಳು ನಾಲ್ಕೈದು ಒಂದಾಗಿರುವುದಲ್ಲದೆ ಒಂದೊಂದಾಗಿ ಚಲಿಸುವುದಿಲ್ಲ. ಮುಖವನ್ನು ಮೇಲ್ಮೊಗವಾಗಿಟ್ಟು ಈಜುವುದಲ್ಲದೆ ಇತರ ಮೀನುಗಳಂತೆ ಈಜುವುದೂ ಇವುಗಳಿಗೆ ಗೊತ್ತಿದೆ. ಈ ಮೀನುಗಳ ಜಗತ್ತೇ ಅಡಿಮೇಲು!

"ಅಂತರಂಗ"ದಲ್ಲಿ ಕಥೆ, ಕವಿತೆ, ಲೇಖನಗಳಲ್ಲದೇ ಕೆಲವು ಪುಟಗಳಲ್ಲಿ ವಿದೇಶ ವಿಚಾರಗಳು ಮತ್ತು ವಾರದ ಭವಿಷ್ಯಗಳು ಬರೆಯಲ್ಪಡುತ್ತಿವೆ. ನಮಗೆ ಹೆಚ್ಚಿನ ಅಗತ್ಯವಿಲ್ಲದ ಮತ್ತು ಪ್ರಯೋಜನವಿಲ್ಲದ ಅಂತಹ ವಿದೇಶ ವಾರ್ತೆಗಳು ಮತ್ತು ಭವಿಷ್ಯವನ್ನು ಪ್ರಕಟಿಸುವುದಕ್ಕಿಂತ, ಆ ಪುಟಗಳಲ್ಲಿ ಜಿಲ್ಲಾ ವರ್ತಮಾನ, ಕರ್ನಾಟಕ ವರ್ತಮಾನಗಳನ್ನೂ ಮತ್ತು ಮಹಿಳೆಯರಿಗಾಗಿ, ಮಕ್ಕಳಿಗಾಗಿ ಸಂಗೀತಕ್ಕಾಗಿ, ಚಿತ್ರ (ಛಾಯಾ) ಸ್ಪರ್ಧೆಗಾಗಿ, ವಿಜ್ಞಾನ ವಿಷಯಕ್ಕಾಗಿ, ಆರೋಗ್ಯ ವಿಚಾರಕ್ಕಾಗಿ, ತರುಣ (ನವ) ಲೇಖಕರಿಗಾಗಿ ಒಂದೊಂದು ವಿಭಾಗ (ಒಂದೊಂದು ಪುಟ) ಇಡುವುದು ಸೂಕ್ತವಲ್ಲವೇ? ಇದರಿಂದ ಜಿಲ್ಲೆಯ ಹಾಗೂ ಕರ್ನಾಟಕದ ಜನರಿಗೆ ತುಂಬಾ ಉಪಕಾರ ಮಾಡಿದಂತಾಗುವುದೆಂತ ನನ್ನ ಅಭಿಮತ. ಹೀಗೆ ಮಾಡಲು ಪುಟಗಳು ಕಡಿಮೆಯಾದರೆ ಇನ್ನೂ ಸ್ವಲ್ಪ ಪುಟಗಳನ್ನು ಹೆಚ್ಚಿಸಿ ಇಡೀ ಕರ್ನಾಟಕದಲ್ಲೇ ಯಾಕೆ ಇಡೀ ಭಾರತ ವರ್ಷದಲ್ಲೇ ಇಷ್ಟೊಂದು ಅಗ್ಗದ ಹಾಗೂ ಉತ್ತಮ ಪತ್ರಿಕೆಯಿಲ್ಲವೆಂತ ಮಾಡಬಹುದಲ್ಲವೇ?

ಅಂತರಂಗವು ವೃತ್ತಾಂತಗಳನ್ನೊಳಗೊಂಡ ಸಾಪ್ತಾಹಿಕವಲ್ಲವೆಂಬುದನ್ನು ನೀವು ಈ ಮೊದಲೇ ತಿಳಿದಿರಬಹುದೆಂದು ಭಾವಿಸಿದ್ದೆ.

ಆದರೆ ನನ್ನ ಭಾವನೆಯ ಅಡಿಗಲ್ಲನ್ನೇ ನೀವು ಈ ಪ್ರಶ್ನೆಕೇಳಿ ಕೆಡವಿ ಹಾಕಿದ್ದೀರಿ. ಅಂತರಂಗವು ವೃತ್ತಾಂತವಿಲ್ಲದ ಒಂದು ಪತ್ರಿಕೆ. ಅದರಲ್ಲಿ ವಿನೋದಕ್ಕೆ ಪ್ರಾಮುಖ್ಯತೆ ಹೆಚ್ಚು. ಓದಲು ಸುರಸವಾದ ಲೇಖನಗಳೂ ಅದರಲ್ಲಿ ಎಡೆಯಿದೆ.

ಪ್ರಯೋಜನವಿರುವುದಾವುದು, ಇಲ್ಲದಿರುವುದಾವುದು ಎಂಬುದನ್ನು ನೀವು ಸುಲಭವಾಗಿ ನಿಷ್ಕರ್ಷಿಸಿರುವುದಿದ್ದರೂ ಅದು ನೀವು ಭಾವಿಸಿದಷ್ಟು ಸುಲಭವಾಗಿಲ್ಲ. ಯಾವುದಾದರೊಂದು ವಿಚಾರದ ಕುರಿತು ಯೋಚಿಸುವಾಗ ಲೋಕದಲ್ಲಿ ಹಲವು ವಿಧದ ಜನರಿದ್ದಾರೆಂಬುದನ್ನು ನೀವು ಮೊದಲು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಜಗತ್ತಿನಲ್ಲಿ 'ಜಿ. ಆರ್. ಬಾರ್ಕರ್' ರಂಥವರಿರುವುದು ಬಹಳ ಕಡಿಮೆ. ನಿಮಗೆ ವಾರದ ಭವಿಷ್ಯವು ಬೇಡವಾಗಿರಬಹುದು. ಆದರೆ ಅದಕ್ಕಾಗಿಯೇ ೧೯೩೮ರಲ್ಲಿ ಸಿಹಿಸಿಹಿಯಾದ ಒಂದಾಣೆ ಪಾವಲಿಯನ್ನು ಕೊಟ್ಟು ಪತ್ರಿಕೆಯನ್ನು ತೆಗೆದುಕೊಂಡು "ನಮ್ಮ ಭವಿಷ್ಯ ಹೇಗಿದೆ" ಯೆಂಬುದನ್ನು ಬಹಳ ಕುತೂಹಲದಿಂದ ನೋಡುವವರು ಅನೇಕ ಮಂದಿಯಿದ್ದಾರೆ. ವಾರದ ಭವಿಷ್ಯದ ಕುರಿತು ಮಾತಾಡುವಾಗ ನಾನು ಇತ್ತೀಚೆಗೆ ಕಂಡ ಒಂದು ವಿಚಾರವು ನೆನಪಿಗೆ ಬರುತ್ತದೆ. ಮೋಟಾರಿನಲ್ಲಿ ಕುಳಿತುಕೊಂಡಿದ್ದಾಗ ಒಬ್ಬ ಮಹಾಶಯರು ವಾರದ ಭವಿಷ್ಯವಿರುವ ಎಲ್ಲಾ ಪತ್ರಿಕೆಗಳನ್ನು ಕೊಂಡುಕೊಂಡು ತುಲನೆ ಮಾಡಹತ್ತಿದ್ದರು. ಅವರ ರಾಶಿಗೆ ಉತ್ತಮ ಫಲವಿದೆಯೆಂದು ಹೇಳಿರುವ ಪತ್ರಿಕೆಯನ್ನು ಮಾತ್ರ ಹಿಡಿದುಕೊಂಡು ಬಹಳ ಸ್ವಾರಸ್ಯದಿಂದ ಅದನ್ನೋದಿದರು. ಅವರ ಮುಖದಲ್ಲೊಂದು ಸಂತೋಷದ ಕಳೆಯು ಕಂಡುಬರುತ್ತಿತ್ತು. 'ಏನು ಸ್ವಾಮಿ, ವಿಶೇಷವಿದೆಯೇ?, ಎಂದು ವಿನೋದಕ್ಕಾಗಿ ಕೇಳಿದಾಗ ಹೇಳಿದರವರು "ಏನಿಲ್ಲ. ಈ ಪತ್ರಿಕೆಯ ಭವಿಷ್ಯ ಬರೆಯುವ ಜೋತಿಷ್ಯಗಾರರು ಭಾರೀ ಬುದ್ಧಿವಂತರು ಸ್ವಾಮಿ." ಅವರನ್ನು ನೋಡಿದ ಬಳಿಕ ಬದುಕಲಾಶೆಯಿರುವ ಪತ್ರಿಕೆಗಳು ವಾರದ ಭವಿಷ್ಯವೆಂಬ ವಿಭಾಗವನ್ನು ತೆರೆದಿರುವುದೇಕೆಂಬುದರ ಪೂರ್ಣ ಅರ್ಥ ನನಗಾಯಿತು. ಪತ್ರಿಕೆಗಳು ಜನತೆಗೆ ಯೋಗ್ಯ ವಿದ್ಯಾಭ್ಯಾಸವನ್ನೀಯಬೇಕೆಂದು ನೀವು ತತ್ವ ಮಾತಾಡುವುದಿದ್ದರೆ ಆ ತತ್ವವನ್ನು ನಾನು ಮನ್ನಿಸುವುದಿದ್ದರೂ ಈ ಜಗತ್ತಿಗೆ ಅದು ಸರಿಬೀಳುವುದಿಲ್ಲವೆಂದು ನಾನು ಬೇಸರದಿಂದ ಹೇಳಬೇಕಾಗಿದೆ. ಕಾರಣ-ಜನರಿಗೆ ಬೇಡವಾದುದನ್ನು ಕೊಡಹತ್ತಿದರೆ ಅವರು ಅನಪೇಕ್ಷಿತ ಸತ್ಯಾಗ್ರಹ ಹೂಡಿ ಪತ್ರಿಕೆಗಳನ್ನು ತೆಗೆದುಕೊಳ್ಳುವುದೇ ಇಲ್ಲ

ಇನ್ನು ವಿವಿಧ ವಿಭಾಗಗಳನ್ನು ತೆರೆಯುವುದರಿಂದ ಯಾವ ತೊಡಕೂ ಇಲ್ಲ. ಆದರೆ ಒಮ್ಮೆಗೇ ಎಲ್ಲವನ್ನೂ ಪೂರೈಸಲಾಗದಿರುವುದರಿಂದ ಕ್ರಮೇಣ ಒಂದೊಂದೇ ವಿಭಾಗವನ್ನು ನೀವು ಅಂತರಂಗದಲ್ಲಿ ಕಾಣಬಹುದು.

(ಅದಂತಿರಲಿ. ತಾವು ಅಂತರಂಗವನ್ನು ಎಡೆಬಿಬಿಡದೆ "ಕೊಂಡುಕೊಂಡು" ಓದುವಿರೇ?)

* * *

ಮದ್ರಾಸ್ ಸರಕಾರದ ಯಾವುದೊಂದು ತರದ ಬಹುಮಾನ ವಿತರಣೆಯ ಸೋಡ್ತಿಯನ್ನೂ ತೆಗೆಯ ಬಾರದು, ಮತ್ತು ಅಂತಹ ಟಿಕೇಟುಗಳನ್ನು ಮಾರಕೊಡದು ಎಂಬ ಮುಂತಾದ ಒಂದು ಹುಕುಂ ನಮ್ಮ ಜಿಲ್ಲೆಯ ಒಂದೆರಡು ಪತ್ರಿಕೆಗಳಲ್ಲಿ ಪ್ರಕಟವಾದದ್ದು ನಾನು ನೋಡಿರುತ್ತೇನೆ. ಆದರೆ ಇನ್ನೂ ಅಂತಾ ಸೋಡ್ತಿಗಳು ಆಗುತ್ತಾ ಇರುವುದನ್ನೇ ನಾವು ನೋಡಬಹುದು. ಇವರ ಮೇಲೆ ಸರಕಾರವು ಯಾವುದಾದರೂ ಒಂದು ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಯಾಕೆ ಸುಮ್ಮನೆ ಕುಳಿತಿದೆ?

ಅವಸರ ಮಾಡಬೇಡಿ. ಸರಕಾರದ ಕಾಯಿದೆಯ ಕುದುರೆಯು ನಾಗಾಲೋಟದಿಂದ ಬರಲಿದೆ. ನಿರೀಕ್ಷಿಸಿರಿ. ಸಮಾಧಾನವು ಸರ್ವಶ್ರೇಷ್ಠವಾದುದೆಂದು ಮುದುಕರು ಹೇಳುವುದನ್ನು ನೀವು ಕೇಳಲಿಲ್ಲವೆ?

* * *

ತಮ್ಮ ಪತ್ರಿಕೆಯಲ್ಲಿ ವ್ಯಕ್ತಿ ನಿಂದೆಯಿಲ್ಲದ ಚಿಕ್ಕ ಬಾತ್ಮಿಗಳಿಗೆ ಸ್ಥಳ ಉಂಟೇ?

ವಿನೋದಾತ್ಮಕ ಬಾತ್ಮಿಗಳಿಗೆ ಅಂತರಂಗದ ಕದವು ಸದಾ ತೆರೆದೇ ಇರುತ್ತದೆ. ಆದರೆ ನಿಮ್ಮ ಬಾತ್ಮಿಗಳ ಮಾದರಿಯನ್ನು ಒಮ್ಮೆ ನೋಡೋಣ (ಹಿಂದೆ ಬೇಕೆಂದಿದ್ದರೆ ಅಂಚೆ ಚೀಟನ್ನು ಹಚ್ಚಲು ಮರೆಯ ಬೇಡಿರಿ!)

* * *

**ಶ್ರೀ. ಪಿ. ಚಂದ್ರಶೇಖರ, ಒಂಟಿಕೊಪ್ಪಲು, ಮೈಸೂರು**

ನಮ್ಮ ಮೈಸೂರಿನಲ್ಲಿರುವ ರೈಲ್ವೆ ವರ್ಕ್‌ಷಾಪಿನಲ್ಲಿ ಇತ್ತೀಚೆಗೆ ಕೆಲಸಗೋಸ್ಕರ ಹೆಚ್ಚಿಗೆ ಜನಗಳನ್ನು ತೆಗೆದುಕೊಳ್ಳುತ್ತಲೇ ಇದ್ದಾರೆ. ನಾವು ಹೋಗಿ ಕೆಲಸ ಕೊಡಿರಿ ಎಂದು ಕೇಳಿದರೆ, ಖಾಲಿ ಇಲ್ಲ; ವೆನ್ನುತ್ತಾರೆ. ಆದರೆ

ದೊಡ್ಡ ದೊಡ್ಡ ಸರ್ಕಾರಿ ಅಧಿಕಾರಿಗಳ ಮಕ್ಕಳನ್ನೇ ಸೇರಿಸಿಕೊಳ್ಳುತ್ತಾರೆ. ಅಧಿಕಾರಿಗಳ ಮಕ್ಕಳಿಗೇನೇ ಕೆಲಸ ಕೊಡಬೇಕೆಂದು ಏನಾದರೂ ಆಜ್ಞೆ ಇದೆಯೇ? ಹೀಗೆ ಮನುಷ್ಯ ಜಾತಿಗೆ ಸೇರಿದ ಇವರುಗಳು ಏತಕ್ಕೆ ವಂಚನೆ ಮಾಡುತ್ತಾರೆ ಎಂಬುದನ್ನು ದಯವಿಟ್ಟು ನಿಮ್ಮ ಅಂತರಂಗದಲ್ಲಿ ತಿಳಿಸುವಿರಾ.

ನಿಮ್ಮ ಪ್ರಶ್ನೆಯ ಸತ್ಯಾಸತ್ಯತೆಯು ನನಗೆ ತಿಳಿದಿರದಿದ್ದರೂ ವಂಚನೆ ಮಾಡುವುದೇಕೆಂದು ನೀವು ಕೇಳಿರುವುದನ್ನು ನೋಡುವಾಗ ನಗೆ ಬಂದೇ ಬಿಡುತ್ತದೆ. ಶಕ್ತರಾದವರೇ ಬದುಕ ಬಲ್ಲರೆಂಬ ತತ್ವವನ್ನು ಜಗತ್ತು ಆದಿಯಿಂದಲೇ ಕಾರ್ಯರೂಪದಲ್ಲಿ ಆಚರಿಸುತ್ತ ಬಂದಿದೆ. ಇದು ರೈಲ್ವೇ ವರ್ಕ್ ಶಾಪಿನಿಂದ ಮೊದಲ್ಗೊಂಡು ಜನಾಂಗಸಂಘದ ವರೆಗೂ ಸತ್ಯವಾಗಿದೆ. ಬಡವರಿಗೆ ಬದುಕಲು ಅಧಿಕಾರವೇ ಇಲ್ಲ. ಅಬಿಸೀನಿಯಕ್ಕೆ ಬದುಕುವ ಅಧಿಕಾರವಿಲ್ಲದಿದ್ದುದರಿಂದ ಅದು ಶಕ್ತಿಯಿರುವ ಮುಸ್ಸೋಲಿನಿಯ ಕೈಸೇರಿತು. ಬೆದರಿಸುವ ಶಕ್ತಿಯು ಹಿಟ್ಲರನಲ್ಲಿ ಅಧಿಕವಾಗಿರುವುದರಿಂದ ಜೆಕೊಸ್ಲೊವೇಕಿಯದ ಒಂದು ಭಾಗವು ಜರ್ಮನರಿಗಾಯಿತು. (ಪ್ರಾರಂಭದಲ್ಲಿ ಅದೇ ಶಕ್ತಿಯು ಜರ್ಮನಿಯರಿಗಿಲ್ಲದಿದ್ದುದರಿಂದ ಅದೇ ಭೂವಿಭಾಗವು ಅವರಿಂದ ಸೆಳೆದೊಯ್ಯಲ್ಪಟ್ಟಿತು) ದೊಡ್ಡವರ ಶಿಫಾರಸು ಪತ್ರ ಮತ್ತು ಹಣದ ಶಕ್ತಿಗೆ ಅಪಾರ ಶಕ್ತಿಯಿರುವುದರಿಂದ ರೈಲ್ವೆ ವರ್ಕ್ ಶಾಪ್ ಆ ಶಕ್ತಿಯನ್ನು ಮಾನ್ಯ ಮಾಡದಿರುತ್ತದೆಯೆ?


ನೀವು ಕೆಲಸ ಕೇಳಿದರೆ ''ಖಾಲಿ ಇಲ್ಲ''ವೆನ್ನುವ ಬದಲು ''ಖಾಲಿಗಿಲ್ಲ'' ಎಂದರೆ ದುಡ್ಡಿಲ್ಲದವರಿಗಿಲ್ಲ ವೆಂದರೆ ಇನ್ನಷ್ಟು ಸಮಂಜಸವಾದ ಉತ್ತರವು ನಿಮಗೆ ಸಿಕ್ಕಿದಂತಾಗುತ್ತಿತ್ತು.

ದೊಡ್ಡ ಅಧಿಕಾರಿಗಳ ಮಕ್ಕಳಿಗೆನೇ ಕೆಲಸ ಕೊಡಬೇಕೆಂಬ ಆಜ್ಞೆಯಿದೆಯೋ ಇಲ್ಲವೋ ಎಂಬುದು ನನಗರಿಯದಿದ್ದರೂ ಆ ಆಜ್ಞೆಯು ತನ್ನಷ್ಟಕ್ಕೆ ಆಗುತ್ತದೆಂಬುದನ್ನು ನೀವು ತಿಳಿಯಬೇಕು. ನೀವು ''ಭರ್ತಿಯಾಗಿ'' ಹೋದರೆ ಆಗ ನಿಮಗೆ ''ಖಾಲಿ-ಇಲ್ಲ''ವೆನ್ನಲಿಕ್ಕಿಲ್ಲವೆಂದು ನನ್ನ ಭಾವನೆ.

ಅದಂತಿರಲಿ, ಇದು ತಮ್ಮ ವೈಯಕ್ತಿಕ ಅನುಭವವೆ? ಹೌದೆಂದಾದರೆ ನನ್ನ ಹಾರ್ದಿಕ ಸಹಾನುಭೂತಿಯನ್ನು ದಯವಿಟ್ಟು ಸ್ವೀಕರಿಸಿರಿ.

* * *

ಸ್ವಲ್ಪ ದಿವಸಗಳಿಂದ ಪೋಸ್ಟು ಕವರು ಮತ್ತು ಸ್ಟಾಂಪುಗಳಿಗೆ ಅಂಟಿಸಿರುವ ಅಂಟು ಕಡಿಮೆಯಾಗಿರುತ್ತೆ. ಆದಾಗ್ಯೂ ಅದರ ಖರೀದಿ ಮಾತ್ರ ೧ ಆಣೆಗೆ ಏರಿರುತ್ತೆ. ಕಾರಣವೇನು ತಿಳಿಸುವಿರಾ.




ಇದು ಬಹಳ ಚಮತ್ಕಾರದ ವಿಚಾರ. ಅಂಚೆ ಚೀಟಿಗೆ ಅಂಟು ಕಡಿಮೆಯಾಯಿತೋ ಅಥವಾ ನಾಲಿಗೆಯ ಅಂಟು ಹೆಚ್ಚಾಯಿತೋ ಎಂದು ಭಾವಿಸಲಾಗುವುದಿಲ್ಲ. ನಮ್ಮ ಲೋಕದಲ್ಲಿ ''ಅಂಟಿಕೊಳ್ಳುವ'' ಅಭ್ಯಾಸವು ದಿನೇ ದಿನೇ ಹೆಚ್ಚುತ್ತ ಬರುತ್ತಿದೆ. ಈ ವ್ಯಾಧಿಯು ಅಂಚೆ ಚೀಟುಗಳಿಗೂ ತಾಗಿ ಅಂಟು ಕಡಿಮೆಯಾಗಿರಲೂ ಬಹುದು. ''ಖರೀದಿ ಒಂದಾಣೆಗೆ ಏರಿರುತ್ತೆ'' ಎಂದುದನ್ನು ನೋಡುವಾಗ ಮೊದಲು ಅದಕ್ಕೆ ಅರ್ಧಾಣೆ ಕ್ರಯವಿತ್ತೇ ಎಂಬ ಸಂಶಯವುತ್ಪನ್ನವಾಗುತ್ತದೆ. ಹೇಗೂ ಇರಲಿ, ನೀವು ಅಂಟಿಲ್ಲದ ಆ ''ಸ್ಟಾಂಪನ್ನೂ'' ಅದರೊಂದಿಗೆ ಇನ್ನೊಂದು ಸ್ಟಾಂಪನ್ನೂ, ಒಂದು ಕವರಿನಲ್ಲಿ ಹಾಕಿ, ಅದರ ಮೇಲೆ ಅಂಟಿರುವ ಅಂಚೆ ಚೀಟನ್ನು ಹಚ್ಚಿ ನನಗೆ ಕಳುಹಿಸಿರಿ. ಪರೀಕ್ಷಿಸಿದ ಬಳಿಕ ಫಲಿತಾಂಶವು ನಿಮಗೆ ಹಿತಕಾರಿಯಾಗಿ ಕಂಡುಬಂದರೆ ಸದ್ಯದಲ್ಲಿಯೇ ಆ ಕುರಿತು ಮೈಸೂರು ಸರಕಾರಕ್ಕೆ ಒಂದು ಶಿಷ್ಟ ಮಂಡಲಿಯನ್ನು ಕಳುಹಿಸುವ ಯೋಚನೆ ಮಾಡೋಣ. ನಿಮ್ಮ ವಿದುರಾಶ್ವತ್ಥ ವಿಚಾರಣೆಯಂತೆಯೇ ನಾನೂ ಒಂದು ವಿಚಾರಣೆ ಮಾಡಿದ ಬಳಿಕ ನಿಮಗೆ ಕಾರಣವನ್ನು ತಿಳಿಸಿದರೆ ಸಾಲದೆ?

* * *

(ಉತ್ತರಕ್ಕೆ ಹಲವು ಪ್ರಶ್ನೆಗಳು ಕರ್ನಾಟಕದ ವಿವಿಧ ಭಾಗಗಳಲ್ಲಿರುವ ಅಂತರಂಗದ ವಾಚಕರಿಂದ ಕಳುಹಿಸಲ್ಪಟ್ಟಿವೆ. ಸ್ಥಳಾಭಾವದಿಂದಾಗಿ ಉತ್ತರಗಳು ಕ್ರಮಶಃ ಪ್ರಕಟಿಸಲ್ಪಡುವುವು.)

# "ಅಂತರಂಗೀಯ"

**ರಹಸ್ಯಪಾಲನೆ.**

ಒಂದು ಶತಮಾನದ ತನಕ ಬದುಕಿದವರೊಬ್ಬರು ತನ್ನ ದೀರ್ಘಾಯುಷ್ಯಕ್ಕೆ ತಾನು ಪ್ರತಿದಿನ ಒಂದೊಂದು ನೀರುಳ್ಳಿಯನ್ನು ತಿನ್ನುತ್ತಿದ್ದುದೇ ಕಾರಣವೆಂದು ಹೇಳಿದ್ದಾರೆ. ಈ ಮಹತ್ವದ ಗುಟ್ಟನ್ನು ಅವರು ಹೇಗೆ ಉಳಿಸಿಕೊಂಡರೆಂಬುದು ಆಶ್ಚರ್ಯಕರವಾಗಿದೆ.

o oo o

**ಸ್ವಾತಂತ್ರ್ಯ!**

ಜರ್ಮನಿಯ ಪತ್ರಿಕಾಕರ್ತರಿಗೆ ಇಚ್ಛೆ ಬಂದಂತೆ ಬರೆಯುವ ಸ್ವಾತಂತ್ರ್ಯವಿದೆಯೆಂದು ಜರ್ಮನ್ ವಾರ್ತೆಯೊಂದು ಹೇಳುತ್ತಿದೆ. ಪ್ರಾಯಶಃ ಆ ಸ್ವಾತಂತ್ರ್ಯವನ್ನು ಬರೆಯುವ ಕಾಲದಲ್ಲಿ ಮಾತ್ರ ಅವರು ಉಪಯೋಗಿಸಬಹುದೆಂದು ತೋರುತ್ತದೆ.

o oo o

**ಗೊತ್ತಾಗಲಿಲ್ಲ.**

ಕಳೆದ ವರುಷಕ್ಕಿಂತ ಈ ವರುಷ ೧೦೦,೦೦೦ ವಾಹನಗಳು ಹೆಚ್ಚಿವೆಯೆಂದು ಒಂದು ವರದಿಯು ಹೇಳುತ್ತಿದೆ. ಕಳೆದ ವರುಷಕ್ಕಿಂತ ಜನಸಂಖ್ಯೆಯು ಎಷ್ಟು ಕಡಿಮೆಯಾಗಿದೆಯೆಂದು ಎಲ್ಲಿಯೂ ಹೇಳಲ್ಪಡಲಿಲ್ಲ.

o oo o

**ಆಧಾರ!**

ಯುದ್ಧದ ಭಯವು ಆಧಾರರಹಿತವಾದುದೆಂದು ಒಬ್ಬ ರಾಜಕೀಯ ಮುತ್ಸದ್ದಿಗಳು ಬರೆಯುತ್ತಾರೆ. ಹಾಗಾದರೆ ಆಧರಿಸುವಂಥ ಭೂಮಿ ಯಾವುದೆಂದು ನಿರ್ಣಯವಾಗಿರಲಿಕ್ಕಿಲ್ಲವೆಂದು ನಾವು ಭಾವಿಸುತ್ತೇವೆ.

o oo o

**ಸೀನಿಯರ್**

ಇಟಲಿಯ ಸರ್ವಾಧಿಕಾರಿಯನ್ನು ಒಂದು ಪತ್ರಿಕೆಯು 'ಸೀನಿಯರ್ ಮುಸ್ಸೋಲಿನಿ' ಎಂದು ಕರೆಯುತ್ತದೆ. ಸೀನಿಯರೆಂದರೆ ಹಿರಿಯನೆಂದರ್ಥವಾಗುವುದರಿಂದ ಜೂನಿಯರ್ ಮುಸ್ಸೋಲಿನಿಯೊಬ್ಬನಿರಬಹುದೆಂದು ನಮ್ಮೂಹೆ.

o oo o

**ಉತ್ತಮ!**

ಮಲಗುವ ಕಾಲದಲ್ಲಿ—ಟಾನಿಕೇ ಉತ್ತಮವಾದುದೆಂದೂ ನಿದ್ದೆ ಮಾಡಲು ಅದರಿಂದ ಉತ್ತಮವಾದುದು ಬೇರಾವುದಿಲ್ಲವೆಂದೂ ಒಬ್ಬ ಡಾಕ್ಟರು ಹೇಳುತ್ತಾರೆಂದು ಜಾಹೀರಾತೊಂದು ಹೇಳುತ್ತಿದೆ. ಈ ಡಾಕ್ಟರರು ಹಾಸಿಗೆಯ ಸುದ್ದಿ ಹೇಳದಿರುವುದು ವಿನೋದಪ್ರಿಯರಿಗೆ ಶೋಚನೀಯವಾಗಿ ಕಾಣಬಹುದು.

o oo o

**ಸುಳ್ಳು!**

ಶರ್ಲಿ ಟೆಂಪಲ್ ತಿನ್ನದ ಆಹಾರವು ಜಗತ್ತಿನಲ್ಲಿಯೇ ಇಲ್ಲವೆಂದು ಆಹಾರದ ಜಾಹಿರಾತೊಂದು ಹೇಳುತ್ತಿದೆ. ನಮ್ಮ ಆಹಾರವನ್ನು ಆಕೆಯು ತಿನ್ನಲಿಕ್ಕಿಲ್ಲವೆಂಬುದರಿಂದ ಈ ಹೇಳಿಕೆಯು ಸುಳ್ಳಲ್ಲವೆ?

o oo o

**ಬೇಸರದ ಸಂಗತಿ**

ಅಚ್ಚಳಿಯದ ಹೊಸ ಮಾದರಿಯ ಫೌಂಟನ್‌ಪೆನ್‌ಗಳನ್ನು—ಕಂಪೆನಿಯು ತಯಾರಿಸಿದೆಯೆಂದು ಇನ್ನೊಂದು ಜಾಹಿರಾತಿನಲ್ಲಿ ಪ್ರಕಟವಾಗಿದೆ. ಈ ವಾರ್ತೆಯು ಎಲ್ಲಾ ವರ್ತಕರಿಗೆ ಬೇಸರವನ್ನುಂಟುಮಾಡದಿರದೆಂದು ನಮ್ಮ ಭಾವನೆ.

o oo o

**ಕಾರಣ.**

ಮೊದಲೇ ನಿರೀಕ್ಷಿಸಲ್ಪಟ್ಟ ಒಂದು ಬಿರುಗಾಳಿಯು ಬಾರದಿದ್ದುದರಿಂದ ಹವಾಮಾನವನ್ನಳೆಯುವ ಕಛೇರಿಗೆ ತುಂಬಾ ಆಶ್ಚರ್ಯವಾಗಿದೆಯಂತೆ. ಕೊನೆಗೆ ನೋಡಲಾಗಿ ಹವಾಮಾನದ ಬದಲಾವಣೆಯಿಂದ ಅದು ಬರಲಿಲ್ಲವೆಂದು ಭಾವಿಸಲ್ಪಟ್ಟಿತೆಂದು ಒಂದು ಇಂಗ್ಲಿಷ್ ಪತ್ರಿಕೆ ಹೇಳುತ್ತಿದೆ.

o oo o

**ದೊಡ್ಡ ಕೈಗಾರಿಕೆ.**

ಭಾರತದಲ್ಲಿ ಶಿಶು ತಯಾರಿಕೆಯಷ್ಟು ದೊಡ್ಡ ಕೈಗಾರಿಕೆಯು ಮತ್ತೊಂದಿಲ್ಲವೆಂದು ಸರ್. ಯಚ್. ಯಸ್. ಗೌರ್‌ರವರು ಹೇಳಿದ್ದಾರೆ. ಇದು ಬಹು ದೊಡ್ಡ ಮನೆ

**ಖದ್ದರ್ ಬಟ್ಟೆಗಳಿಗೆ ಶ್ರೀ ಭಾರತ ವಸ್ತ್ರಮಂದಿರಕ್ಕೆ ಹೋಗಿರಿ.**

ಕೈಗಾರಿಕೆಯೆಂದು ನಾವು ಮೊದಲೇ ಭಾವಿಸಿದ್ದೆವು.

೦ ೦೦ ೦

**ಉತ್ತರ.**

'ಈ ಕಾಲದಲ್ಲಿ ಬರೆಯಲಿಕ್ಕೆ ಯಾರಿಗೆ ಸಮಯವುಂಟು' ಎಂದೊಬ್ಬ ಬರೆಹಗಾರರು ಕೇಳುತ್ತಾರೆ. ಫೋರ್ಜರಿ ಮಾಡುವವರಿಗೆ ಮಾತ್ರ.

**ಹೆಡ್ಮಾಸ್ತರರ ಪೆಟ್ಟು**

'ನಾನು ಹುಡುಗನಾಗಿದ್ದಾಗ ಹೆಡ್ಮಾಸ್ತರರು ನನಗೆ ಒಂದೇ ಒಂದು ಪೆಟ್ಟನ್ನು ಹೊಡೆದಿದ್ದರು' ಎಂದೊಬ್ಬ ವಿದ್ಯಾಧಿಕಾರಿಗಳು ತಮ್ಮ ಭಾಷಣದಲ್ಲಿ ಹೇಳಿದರು. ಇತರ ಉಪಾಧ್ಯಾಯರು ಅವರಿಗೆ ಅನೇಕ ಪೆಟ್ಟುಗಳನ್ನು ಕೊಟ್ಟಿರಬಹುದೆಂದು ಊಹಿಸಬಹುದೆ?

೦ ೦೦ ೦

'ಕನ್ನಡದ ಪತ್ರಿಕೋದ್ಯಮದಲ್ಲಿ ಮಹಾ ಕ್ರಾಂತಿ' ಎನ್ನುತ್ತಿದೆ ಒಂದು ಪತ್ರಿಕಾ ಜಾಹಿರಾತು. ಇದಕ್ಕೂ ರಷ್ಯದ ಲೆನಿನರಿಗೂ ಸಂಬಂಧವಿರಲಿಕ್ಕಿಲ್ಲವೆಂದು ಊಹಿಸಲಾಗಿದೆ.

---


## AMALAKI HAIR OIL ಆಮಲಕೀ ತೈಲ

ವಿದ್ಯಾರ್ಥಿಗಳಿಗೂ, ಸಕಲ ಸ್ತ್ರೀಪುರುಷರಿಗೂ, ನಿತ್ಯ ಕೇಶಪ್ರಸಾದನಾರ್ಥ ಪುಷ್ಪಗಂಧಾಮೋದಿತ ಉತ್ಕೃಷ್ಟ ಕೇಶವರ್ಧಕ ತೈಲ. ಮೆದುಳಿನ ಸ್ವಾಸ್ಥ್ಯಕ್ಕೂ ನೇತ್ರಾರೋಗ್ಯರಕ್ಷಣೆಗೂ, ಕೇಶಕಲಾಪದ ಬೆಳವಣಿಗೆಗೂ, ಸೌಂದರ್ಯ ವರ್ಧನೆಗೂ ಸಹಾಯಕವಾಗಿದೆ. ಈ ತೈಲವನ್ನು ನಿತ್ಯವೂ ಉಪಯೋಗಿಸುತ್ತಿದ್ದರೆ, ಶಾರೀರಿಕ ಹಾಗೂ ಮಾನಸಿಕ ಶ್ರಮೆಯಿಂದ ಪುರುಷರಿಗೂ, ಪ್ರಸವಾನಂತರದಲ್ಲಿ ಸ್ತ್ರೀಯರಿಗೂ ಸಾಮಾನ್ಯವಾಗಿ ಕೇಶಮೂಲಗಳು ನಿಸ್ಸತ್ವಹೊಂದಿ ಕೂದಲುಗಳ ಉದುರುವಿಕೆ, ಅಕಾಲದಲ್ಲಿ ನರೆಯುಂಟಾಗುವಿಕೆ ಇವೇ ಮೊದಲಾದ ದೋಷಗಳು ದೂರವಾಗಿ ಕೇಶಮೂಲಗಳು ದೃಢವಾಗುವುದರಿಂದ ಅಚ್ಚಕಪ್ಪಾದ ಕೂದಲುಗಳು ನಿಬಿಡವಾಗಿ ಬೆಳೆಯುವುದಲ್ಲದೆ ಮೊದಲೇ ನರೆತ ಕೂದಲುಗಳು ಸಹ ಕಪ್ಪಾಗಿ ಮುಖಶ್ರೀಯು ಲಾವಣ್ಯಪೂರ್ಣವಾಗುವುದು. ತಲೆನೋವು, ಸೂರ್ಯವರ್ತ ಅಥವಾ ಅರೆತಲೆನೋವು, ನೇತ್ರಜ್ವಾಲೆ, ಮೆದುಳಿನ ಉಷ್ಣತ, ತಲೆತಿರುಕು, ದುಃಸ್ವಪ್ನಪೂರ್ಣವಾದ ನಿದ್ರಾಭಂಗ ಮೊದಲಾದ ವಾತ, ಪಿತ್ಥ, ಜನಿತ ಶಿರೋದೋಷಗಳೂ ನಿವೃತ್ತವಾಗಿ ಸುಖವಾದ ನಿದ್ರೆಯು ಹತ್ತುವುದು. ಇಂತಹ ಸುಖನಿದ್ರೆಯಿಂದ ಸ್ಮೃತಿ, ಮೇಧಾ, ಉತ್ಸಾಹ, ವಿಚಾರಶಕ್ತಿ ಮೊದಲಾದ ಮಾನಸಿಕ ಶಕ್ತಿಗಳು ವಿಕಾಸಹೊಂದಿ ಚಿರಾರೋಗ್ಯ ಲಾಭವಾಗುವುದು.

4 ಔನ್ಸಿನ ಸೀಸೆ ಒಂದರ 0—11—0. 2 ಔನ್ಸಿನ ಸೀಸೆ ಒಂದರ 0—6—0

**SWADESHI OUSHADI BHANDARA, KUNJAL,**

BRAHMAVAR P. O., S. Kanara.

*Udipi Stockists :—*

SRI BHARATA VASTU MANDIRA

(Regd)




## ಮೇಹಧ್ವಂಸಿನಿ

ಗುಪ್ತ ವ್ಯಾಧಿಗಳ ಮೇಲೆ ಬ್ರಹ್ಮಾಸ್ತ್ರ! ನೋವನ್ನು ಕೊಡುವ ಶಸ್ತ್ರ ಚಿಕಿತ್ಸೆ ಅನಾವಶ್ಯಕ. ಶರೀರವನ್ನು ಕೃಶಿಸಿ ಮಾನವನ ಜೀವಶ್ರವಗೈಯ್ಯುತ್ತಿರುವ ಬಿಳುಪು, ಕೆಂಪು, ಪರಂಗಿ ಹುಣ್ಣು, ಮೇಹಗಡ್ಡೆ, ಮೇಹ ಜ್ವರ, ಚರ್ಮವ್ಯಾಧಿ, ಕೀಲುಗಳ ನೋವು, ಅತಿ ಮೂತ್ರ ವಗೈರೆ ಚಿನ್ಹೆಗಳನ್ನು 'ಮೇಹಧ್ವಂಸಿನಿ'ಯು ಶೀಘ್ರವಾಗಿ ಖಂಡಿಸಿ, ರಕ್ತಶುದ್ಧಿ ಮಾಡಿ ನರಗಳಿಗೆ ಬಲವನ್ನೀಯುವುದು. ಸೇವಿಸುವುದಕ್ಕೆ ಹಿತಕರ. ಪ್ರತಿಯೊಂದು ಹೊತ್ತಿನ ಔಷಧದಲ್ಲಿಯೂ ಅದ್ಭುತ ಗುಣವಿದೆ.

ದೊಡ್ಡ ಸೈಜು 4-0-0. ಮೀಡಿಯಂ ಸೈಜು 2-4-0. ಚಿಕ್ಕ 1-2-0.

ಹಂಚಿಕೊಡುವ ಪ್ರಮುಖರು:—ಬಾಸೆಲ್ ಮಿಶ್ಯನ್ ಪ್ರೆಸ್ ಮಂಗಳೂರು.

ಸಬ್ ಏಜಂಟರು:—ಉಡ್ಪಿ ಮಿಶ್ಯನ್ ಶೋಪ್, ಸಂತೆಕಟ್ಟೆ, ಉಡುಪಿ.

ವಿ. ವಿ. ಶೆಣೈ, ಕಾರ್ಕಳ. ಭಕ್ತಾ ಬ್ರದರ್ಸ್, ಕಾಸರಗೋಡು.

# ಭಗದತ್ತನ ಬಹಿರಂಗ ಪತ್ರಗಳು



**ಇಂಡಿಯಾ ಸರಕಾರದ ಆರೋಗ್ಯ ಶಾಖಾಧಿಕಾರಿಗಳಿಗೆ—**

ಮಹಾಶಯರೆ,

೧೯೪೦ ರಲ್ಲಿ ಭಾರತದ ಜನಸಂಖ್ಯೆಯು ೪೦ ಕೋಟಿಯಾಗುವುದೆಂದು ನೀವು ಹೇಳಿರುವುದನ್ನು ಕಂಡು ನನಗೆ ನಗೆ- ಬೇಸರಗಳು ಒಮ್ಮೆಯೇ ಬರಲಾರಂಭಿಸಿವೆ. ಸ್ವಲ್ಪ ಸಮಯದ ಹಿಂದೆ ಸರ್ ಯಚ್. ಯಸ್. ಗೌರ್‌ರವರು ಭಾರತದ ಪ್ರಧಾನ ಮನೆ ಕೈಗಾರಿಕೆಯೆಂದರೆ "ಶಿಶು ತಯಾರಿ"ಯೆಂದು ಹೇಳಿರುವುದು ನೆನಪಿಗೆ ಬರುತ್ತದೆ. ನಮ್ಮ ಜನರು ಏಕ ಪ್ರಕಾರವಾಗಿ ಶಿಶುತಯಾರಿ ಕೈಗಾರಿಕೆಯಲ್ಲಿ ನಿರತರಾಗಿರುವುದೇಕೆಂದು ಪ್ರಾಯಶಃ ನಿಮಗರಿತಿಲ್ಲ. ಬಂಗಾಳದ ಭೀಕರ ನೆರೆ, ತಿರುವಾಂಕೂರಿನ ಗೋಳೀಬಾರು, ಸಂಸ್ಥಾನಗಳ ನರಯಜ್ಞ ಇವೇ ಮೊದಲಾದುವುಗಳಿಂದಾಗಿ ಜನಸಂಖ್ಯೆಯು ಕಡಿಮೆಯಾಗುವುದೆಂದು ಭಾರತೀಯರು ಮೊದಲೇ ಈ ಮಹತ್ಕಾರ್ಯಕ್ಕೆ ಕೈಗೊಟ್ಟಿರುವುದಾಗಿದೆ. ಶ್ರೀ ಪರಮಾತ್ಮನು ಈ ಮಹತ್ವದ ಕೆಲಸಕ್ಕೆ ಪೂರ್ಣ ಬೆಂಬಲವನ್ನು ಕೊಡುತ್ತಿದ್ದಾನೆಂದು ಪ್ರತ್ಯೇಕ ಹೇಳಬೇಕಾಗಿಲ್ಲ. ಮಕ್ಕಳನ್ನು ದೇವರು ಕೊಡುವುದೆಂಬುದನ್ನು ಪ್ರಾಯಶಃ ನೀವು ಈ ಮೊದಲೇ ಕೇಳಿರಬಹುದು. ನಮ್ಮ ಭಾರತದಲ್ಲಿ ಮುಸ್ಸೋಲಿನಿ ಮಹಾಶಯನಿದ್ದರೆ ಮಕ್ಕಳನ್ನು ಹುಟ್ಟಿಸಿದ ತಂದೆ-ತಾಯಿಯವರಿಗೆ ಸರಕಾರೀ ಬಹುಮಾನವು ದೊರಕುತ್ತಿತ್ತು! ರಾಷ್ಟ್ರಗಳನ್ನು ನಡುಗಿಸಬಲ್ಲ ಸರ್ವಾಧಿಕಾರಿಗಳಿಗೆ ಮಕ್ಕಳ ಸಂಖ್ಯೆಯನ್ನು ಹೆಚ್ಚಿಸಲಿಕ್ಕಾಗುವುದಿಲ್ಲ. ನಾವು ಕೇವಲ ಅಹಿಂಸಾತ್ಮಕ ವಿಧಾನದಲ್ಲಿ ಜನಸಂಖ್ಯೆಯನ್ನು ಹೆಚ್ಚಿಸುತ್ತಿರುವುದು ಸ್ತುತ್ಯವಾಗಿದೆ. ಜನಸಂಖ್ಯೆ ಹೆಚ್ಚುವುದರಿಂದ ಆರೋಗ್ಯವು ಕೆಡುವುದೆಂಬ ತಪ್ಪು ಅಭಿಪ್ರಾಯವನ್ನು ನೀವು ಈ ಪತ್ರ ನೋಡಿದೊಡನೆಯೇ ಬಿಟ್ಟು, ಜಗನ್ನಿಯಾಮಕನ ಸೃಷ್ಟನಾ ಕಾರ್ಯದಲ್ಲಿ ಅವನ ಸೃಷ್ಟಿಗಳಾದ ಮಾನವರು ಪೂರ್ಣ ಹೃದಯದಿಂದ ಭಾಗಿಯಾಗಲು ನೀವು ಕೂಡಾ ಉತ್ಸಾಹವನ್ನು ತೋರಬೇಕಾಗಿ ಬಿನ್ನವಿಸುತ್ತೇನೆ.

ಇತಿ ತಮ್ಮ
ಶಿಶು ತಯಾರಿ ಪ್ರಿಯ,
**ಭಗದತ್ತ.**

**ಮದ್ರಾಸಿನ ರಾಜಾಜಿಯವರಿಗೆ**

ಹೆರ್ ಆಚಾರ್ಯರೆ,

ನಾಝೀ ಕ್ರಮದ ವಂದನೆಯನ್ನು ಇದೋ ಸ್ವೀಕರಿಸಿರಿ. ತಾವು ಮದ್ರಾಸಿನಲ್ಲಿ ಪ್ರೆಸ್ ಕೆಲಸಗಾರರಿಗೆ ಕೊಟ್ಟ ಬುದ್ಧಿವಾದಗಳನ್ನು ಕೇಳಿ ಈಗಾಗಲೇ ಹೆರ್ ಹಿಟ್ಲರನಿಗೆ ಅಪಾರ ಸಂತೋಷವಾಗಿರಬಹುದು. ಜರ್ಮನಿಯು ನಿಜವಾಗಿಯೂ ಅನುಕರಣೀಯವಾಗಿದೆ" ಯೆಂಬ ಸಾರಾಂಶದ ಮಾತುಗಳನ್ನು ನೀವು ಹೇಳಿರುವುದಕ್ಕೆ ನನ್ನದೊಂದು "ಜೈ" ವೋಟು! ಅಧಿಕಾರದಲ್ಲಿರುವಾಗ ಇತರರಿಗಿಂತ ಸರ್ವಾಧಿಕಾರಿಗಳಾದ ಹಿಟ್ಲರ್, ಮುಸಲೋನಿಯರೇ ಆದರ್ಶರಾಗಿ ಕಾಣುವುದು ಸ್ವಾಭಾವಿಕವಾಗಿದೆ. ಅದಂತಿರಲಿ, ಮದ್ರಾಸ್ ಪ್ರಾಂತ್ಯದಲ್ಲಿ ಸದ್ಯದಲ್ಲಿಯೇ ಒಂದು "ಕನ್ಸೆಂಟ್ರೇಶನ್ ಕ್ಯಾಂಪ"ನ್ನು ತೆರೆಯಿಸುವುದು ಅತ್ಯವಶ್ಯವಿದೆ. ಡಾಚ್ಚೋ ಸೆರೆಮನೆಯು ಅತ್ಯಂತ ಆದರ್ಶ ಸೆರೆಮನೆಯಾಗಿದೆ. ಜರ್ಮನಿಯ ಜನರಲ್ ಗೋರಿಂಗರ ಆರ್ಥಿಕ ಧೋರಣೆಯನ್ನು ನಾವು ಅನುಸರಿಸಿದರೆ ಮುಂದೆ ಆರ್ಥಿಕ ಪ್ರಶ್ನೆಯೇ ತಲೆದೋರಲಾರದು. ಹಿಟ್ಲರನ ವಿಧಾನಗಳು ಸತ್ಯ ಮತ್ತು ಅಹಿಂಸೆಯನ್ನು ಪರಿಪೂರ್ಣ ಪಾಲಿಸುವುದರಿಂದ ಪರಿಶುದ್ಧ ಆರ್ಯನಾದ ಹಿಟ್ಲರ್ ಮಹಾಶಯನು ನಮ್ಮ ಪ್ರಾಂತ್ಯವನ್ನು ಸಂಚರಿಸುವಂತೆ ಕೇಳಿಕೊಂಡರೆ ಬಹಳ ಉತ್ತಮವಾಗುತ್ತಿತ್ತು.

ಹೈಲ್ ರಾಜಾಜಿ,
**ಭಗದತ್ತ.**

**ಭಾರತದ ಎಲ್ಲಾ ಸಂಸ್ಥಾನಗಳ ರಾಜರಿಗೆ.**

ಭೂಪರಾಕ್, ಉದ್ದಂಡ ನಮ

ಸ್ಕಾರಗಳು. ಪರಿತರುವಾಯ ತಾವು ಬ್ರಿಟಿಷ್ ಸರಕಾರಕ್ಕೆ ಯುದ್ಧವಾಗುವುದಿದ್ದರೆ ಪೂರ್ಣ ಬೆಂಬಲವನ್ನು ಕೊಡುವಿರೆಂದು ಆಶ್ವಾಸನೆಯಿತ್ತಿರುವುದನ್ನು ಕಂಡು ಸಂತೋಷದಿಂದ ನನ್ನ ಹೃದಯವು ಇಬ್ಭಾಗವಾಗಿದೆ. ತಮ್ಮಂಥ ಅಮಿತ ಪರಾಕ್ರಮಿಗಳಿದ್ದರೆ ಎಂತಹ ಹೊಲಿವುಡ್ಡನ್ನೂ ಮುರಿದೊಗೆಯಲು ಸಾಧ್ಯವಿದೆ. ಈ ಪರಾಕ್ರಮದಿಂದಾಗಿ ಬ್ರಿಟಿಷರು ಹೆದರಿ ನಮ್ಮ ಭಾರತಕ್ಕೆ ಬಂದು ತಮ್ಮ ಆಶ್ರಯದಲ್ಲಿದ್ದಾರೆ. ತಾವು ಸಂಸ್ಥಾನದ ಪ್ರಜೆಗಳನ್ನು ಆಳುವ ವಿಧಾನವನ್ನು ಕಂಡು ಸ್ವರ್ಗದ ದೇವತೆಗಳೆಲ್ಲಗೂ ವೈಷಮ್ಯದಿಂದ ಮುಮ್ಮಲ ಮರುಗುತ್ತಿದ್ದಾರೆ. ಹೇಗೂ ಇರಲಿ, ನಾಡದು ನಮ್ಮ ಭಾಗ್ಯವಿಧಾತರಾದ ಬ್ರಿಟಿಷರು ತರಲಿರುವ ಫೆಡರೇಶನಿಗೆ ತಾವುಗಳೆಲ್ಲರೂ ತಮ್ಮಗಳ ಸರ್ವಸ್ವವನ್ನು ಬ್ರಿಟಿಷ್ ಸರಕಾರದ ದಿವ್ಯ ಚರಣಗಳಿಗರ್ಪಿಸಿ, ಪಾದಧೂಳಿಯನ್ನು ಸೇವಿಸುವಿರೆಂಬ ಭರವಸೆಯಿಂದಿರುವ

ತಮ್ಮಗಳ

**"ಭಗದತ್ತ"**

**ಶ್ರೀ ಪರಮಾತ್ಮನಿಗೆ,**
**ಕದ. ನಂಬರು ೧.**
**ಸ್ವರ್ಗ.**
ಹೆಸರಿಲ್ಲದವನೆ,

ಏಕವಚನದಲ್ಲಿ ಸಂಭೋಧಿಸುವುದನ್ನು ಕಂಡು ಬೇಸರಿಸಬೇಡ. ನೀನು ಲೋಕದಲ್ಲಿ ಮಾಡಿರುವ ಅನಾಹುತವನ್ನು ಕಂಡು ಮನಕರಗಿ ಈ ಪತ್ರವನ್ನು ಬರೆಯುತ್ತಿದ್ದೇನೆ. ಇಟಲಿ ಮತ್ತು ಜರ್ಮನಿಗಳಲ್ಲಿ ನಿನ್ನ ಹಿರಿಯ ಮಕ್ಕಳಾದ ಹಿಟ್ಲರ್ ಮುಸ್ಸೋಲಿನಿಯರು ಯಹೂದಿಯರನ್ನು ಸಿಕ್ಕಾಬಟ್ಟೆ ಹೊರಗ ಹಾಕುತ್ತಿದ್ದಾರೆ. ಈ ಲೋಕದಲ್ಲಿ ಅವರಿಗೆ ಸ್ಥಾನವಿಲ್ಲದಿದ್ದರೆ ಅವರನ್ನು ಸೃಷ್ಟಿಮಾಡುವ ಕೆಲಸಕ್ಕೆ ನೀನು ಕೈ ಹಚ್ಚಿರುವುದೇಕೆ? ಈಗ ಅವರು ಅನುಭವಿಸುತ್ತಿರುವ ಕಷ್ಟವನ್ನು ಕಂಡೂ ಉದಾಸೀನನಾಗಿರುವುದನ್ನು ನೋಡುವಾಗ ನಿನ್ನ ಭಕ್ತವೃಂದದವರು ನಿನ್ನ ಮೇಲೆ ಅವಿಶ್ವಾಸ ಠರಾವನ್ನು ಸದ್ಯದಲ್ಲಿಯೇ ತರುವುದು ಅತ್ಯವಶ್ಯವೆಂದು ತೋರುತ್ತದೆ, ಇತ್ತೀಚಿಗಿನ ನಿನ್ನ ಚಟುವಟಿಕೆಗಳು ತೀರಾ ವಿಚಿತ್ರವಾಗಿವೆ. ಉತ್ತರ ಹಿಂದುಸ್ಥಾನವು ಸಾಲದೆ ನಿನ್ನ ಉಂಗುಷ್ಟದಿಂದ ದಕ್ಷಿಣ ಹಿಂದುಸ್ಥಾನವನ್ನು ಕೂಡಾ ನೀನು ಅಲುಗಾಡಿಸಿರುವುದರಿಂದ ನಮ್ಮ ಮನೆಗಳ ಗೋಡೆಗಳಿಗೆ ಭಯವಾಗಲಾರಂಭಿಸಿದೆ. ನೀನು ಸ್ನಾನಮಾಡವುದು ಅಧಿಕವಾದುದರಿಂದ ಬಂಗಾಳದಲ್ಲಿ ನೆರೆಯು ಧಾರಾಳವಾಗಿ ಬಂದು ದೊಡ್ಡ ದೊಡ್ಡ ಊರುಗಳು ನೀರಡಿಯಲ್ಲಿವೆ. ಯೋಚಿಸಿ ನೋಡುವಾಗ ನಿನ್ನಷ್ಟು ಸ್ವಾರ್ಥಿಗಳು ವಿಶ್ವದಲ್ಲಿ ಬೇರಾರೂ ಇಲ್ಲವೆಂದು ತೋರುತ್ತದೆ. ಪ್ರತಿಯೊಬ್ಬರೂ ನಿನ್ನನ್ನು ಹೊಗಳಬೇಕೆಂಬ ನಿಯಮವನ್ನು ನೀನು ಸಮರ್ಥಿಸಿರುವುದನ್ನು ನೋಡುವಾಗ ಜರ್ಮನಿಯ ಹಿಟ್ಲರನ ಸರ್ವಾಧಿಕಾರಿತ್ವಕ್ಕೂ ನಿನ್ನ ಸರ್ವಾಧಿಕಾರಿತ್ವಕ್ಕೂ ಹೆಚ್ಚಿನ ವ್ಯತ್ಯಾಸವಿಲ್ಲವೆನಿಸುತ್ತದೆ. ನಿನ್ನಲ್ಲಿ ಬಹಳ ಪಕ್ಷಪಾತವಿದೆ. ಇತರ ಪ್ರಾಂತ್ಯಗಳಿಗೆ ಧುರೀಣರನ್ನು ಕೊಟ್ಟಿರುವಾಗ ಕರ್ನಾಟಕಕ್ಕೆ ಇಷ್ಟರ ತನಕ ಒಬ್ಬ ಧುರೀಣನನ್ನೂ ಒದಗಿಸಿ ಕೊಡಲಿಲ್ಲ. ಪ್ರಾಯಶಃ ನೀನು ಕನ್ನಡವನ್ನು ಮರೆತಿರುವಂತೆ ಕಾಣುತ್ತದೆ. ಇಲ್ಲದಿದ್ದರೆ ಹಿಟ್ಲರನ ಪ್ರಾರ್ಥನೆಗಳನ್ನು ಮನ್ನಿಸುವಾಗ ನೀನು ನಮ್ಮ ಪಾರ್ಥನೆಯನ್ನೇಕೆ ಮನ್ನಿಸುವುದಿಲ್ಲ. ನಿನ್ನ ವಿಲಾಸತನವು ಬಹಳ ಹೆಚ್ಚಾಗಿದೆ. ಸಿಂಧಪ್ರಾಂತ್ಯದಲ್ಲಿ ನೀನು ಭಾಯಿಲೋಖರಾಜನಾಗಿ ಹುಟ್ಟಿ 'ಓಂ ಮಂಡಲಿ'ಯೆಂಬ ಹೆಸರಿನಲ್ಲಿ ಸಿಕ್ಕಿದವರ ಮಡದಿಯರನ್ನೆಲ್ಲಾ ಆಕರ್ಷಿಸಿ ಕುಟುಂಬಗಳನ್ನು ಒಡೆಯುತ್ತಿರುವಿ.

ನೀನು ಇದೇ ರೀತಿಯಲ್ಲಿ ನಡೆಯುತ್ತಾ ಬಂದರೆ ಈಗಾಗಲೇ ದೇವರೆಂದು ಹೇಳಿಸಿಕೊಳ್ಳಲೆತ್ನಿಸುತ್ತಿರುವ ಹಿಟ್ಲರನನ್ನೇ ನಾವು ದೇವನನ್ನಾಗಿ ಕಾಣುತ್ತೇವೆ-

ನಿನ್ನ ಅವಿಧೇಯ ಭಕ್ತ

**ಭಗದತ್ತ.**

*For best*
**ASAFOETIDA**
Approach
Sri Bharata Vastu Mandira
**UDIPI.**
ಉತ್ತಮ ಹಿಂಗು
**ಶ್ರೀ ಭಾರತ ವಸ್ತು ಮಂದಿರ,**
**ಉಡುಪಿ**
**ಇಲ್ಲಿ ದೊರಕುತ್ತದೆ**

ಈ ರೀತಿಯ ಜಾಹಿರಾತಿಗೆ ಪ್ರತಿಬಾರಿಗೆ **0-8-0.**

# ಭಾರತಾವಲೋಕನ

## ಗುಪ್ತಚಾರರ ಮುಂದೆ!

ಕಾಮ್ರೇಡ್ ಯಂ. ಯನ್. ರಾಯರು ಕಾಂಗ್ರೆಸಿನವರಾದರೂ ಕಾಂಗ್ರೆಸ್ ಪ್ರಾಂತ್ಯಗಳಲ್ಲಿ ಅವರ ಹಿಂದೆ ಸಿ. ಐ. ಡಿ. ಯಾನೆ ಗುಪ್ತಚಾರರು ಸದಾ ಹೋಗುತ್ತಿರುವರೆಂದು ಅವರು ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಹೇಳಿದ್ದಾರೆ.

ಸ್ವಲ್ಪ ಸಮಯದ ಹಿಂದೆ ಮದ್ರಾಸ್ ಸರಕಾರವು ಕಮ್ಯೂನಿಷ್ಟರ ಕುರಿತು ಹೊರಡಿಸಿದ ಹೇಳಿಕೆಯನ್ನು ಓದಿಯೂ ಅವರು ಹೀಗೆ ಬಹಿರಂಗವಾಗಿ ದೂರು ಹೇಳಬಹುದೆ?

○ ○ ○

## ಈ ಸಂಚಾರ!

"ಸಂಸ್ಥಾನ ಭಾರತ" ದೊಳಗೆ "ಬ್ರಿಟಿಷ್ ಭಾರತ"ದ ಪ್ರಜೆಗಳು ಹೋಗಬಾರದೆಂಬ ನಿಯಮವಿದ್ದರೂ, ಭಾವನೆಗಳು ಹೇಗೂ ಸಂಸ್ಥಾನಮೊಳಗೆ ಹೋಗಿಯೇ ಬಿಡುತ್ತವೆ. ಆದುದರಿಂದ "ಸಂಸ್ಥಾನ ಮತ್ತು ಬ್ರಿಟಿಷ್ ಭಾರತ"ಗಳ ಧೋರಣೆಯು ಒಂದೇ ಆಗಿರುವುದು ಅತ್ಯವಶ್ಯವಲ್ಲವೆ ಎಂದೊಂದು ಪ್ರಶ್ನೆ.

ಆದರೆ ಭಾವನೆಗಳು ಸಂಸ್ಥಾನಗಳೊಳಗೆ ಪ್ರವೇಶಿಸದಂತೆ ಒಂದು ವೈಜ್ಞಾನಿಕ ಶೋಧನೆ ಮಾಡಿದರೆ ಈ ಸಮಸ್ಯೆಯನ್ನು ಬಗೆಹರಿಸಿದಂತಾಗುವುದಿಲ್ಲವೆ?

○ ○ ○

## ಆರ್ಥಿಕ ಸಾಮ್ರಾಜ್ಯಶಾಹಿ.

ಲಂಡನಿನ ನೇಶನಲ್ ಇಕೊನಾಮಿಕ್ ಮತ್ತು ಸೋಶಿಯಲ್ ರಿಸರ್ಚ್ ಇನ್‌ಸ್ಟಿಟ್ಯೂಟಿನ ಡೈರೆಕ್ಟರಾದ ಪ್ರೊ. ಯನ್. ಯಫ್. ಹಾಲ್–ಅವರು ಏಸ್ಯಾ ಮತ್ತು ಆಫ್ರಿಕಾ ಖಂಡಗಳನ್ನು ಹಸಿ ಪದಾರ್ಥಗಳನ್ನೊದಗಿಸುವ ವಸಾಹತುಗಳನ್ನಾಗಿ ಉಪಯೋಗಿಸಬೇಕೆಂದು ಜನಾಂಗ ಸಭೆಗೆ ಒಂದು ಯೋಜನೆಯನ್ನು ತಯಾರಿಸಿಕೊಟ್ಟಿದ್ದಾರೆ.

ಪ್ರಾಯಶಃ ಆ ಪ್ರೊಫೆಸರ್ ಸಾಹೇಬರು ಏಸ್ಯಾ ಮತ್ತು ಆಫ್ರಿಕಾ ಖಂಡದವರು ಇನ್ನೂ "ಸೊಪ್ಪು ತಿನ್ನುವ ಕುರಿಜನ"ಗಳೆಂದು ಭಾವಿಸಿರಬಹುದು. ಆರ್ಥಿಕ ಮತ್ತು ಸಾಮಾಜಿಕ ಶೋಧನಾ ಕಾರ್ಯದಲ್ಲಿ ನಿರತರಾಗಿರುವುದರಿಂದ ಅವರು ಗರ್ಭಿಲನ್ನು ಗರ್ಭಿಲ ಎಂದು ಭಾವಿಸಿರಲೂ ಬಹುದು! ಈ ಪ್ರೊಫೆಸರರಿಗೆ ಬೇಗನೆ ಒಂದು ನೊಬೆಲ್ ಬಹುಮಾನವನ್ನು ಕೊಡಿಸುವ ಯೋಚನೆ ಮಾಡಬಹುದಿತ್ತು!

○ ○ ○

## ಘಟನೆ ಮುರಿಯುವ ಕೆಲಸ!

ಮದ್ರಾಸಿನಲ್ಲಿ ನವರಾಜ್ಯ ಘಟನೆಯನ್ನು ಮುರಿಯುವ ಕೆಲಸವೇ ಆಗಲಿಲ್ಲವೆಂದೊಂದು ದೂರು ಇತ್ತೀಚೆಗೆ ಅಖಿಲ ಭಾರತ ಕಾಂ. ಕಮಿಟಿಯ ಮುಂದೆ ಬಂತು. ಪ್ರಧಾನರಾದ ರಾಜಾಜಿಯವರು ಇದನ್ನು ಪೂರ್ಣವಾಗಿ ವಿರೋಧಿಸಿ, "ಅದು ಸುಳ್ಳು" ಎಂದು ಹೇಳಿದ್ದಾರೆ.

ನಿರ್ಭಯವಾಗಿ ನಿಷ್ಪಕ್ಷಪಾತ ದೃಷ್ಟಿಯಿಂದ ಹೇಳುವುದಿದ್ದರೆ ಕಳೆದ ಹತ್ತು ತಿಂಗಳಲ್ಲಿ ನವರಾಜ್ಯ ಘಟನೆಯನ್ನು ಮುರಿಯುವ ಕೆಲಸವು ಬಹಿರಂಗವಾಗಿ ನಡೆಯಲಿಲ್ಲವೆಂದು ಸ್ಪಷ್ಟವಾಗಿ ಹೇಳಬಹುದು. ಇನ್ನು ಅಂತರಂಗದ ವಿಚಾರ ಅಲ್ಲಿರುವವರಿಗೇ ಗೊತ್ತು. ಕಾಂಗ್ರೆಸ್ ಸರಕಾರಗಳು ಜನರ ಸರಕಾರಗಳಾದರೂ ಘಟನೆಯು ಪರದೇಶೀಯರಿಂದ ನಮ್ಮ ಮೇಲೆ ಹೊರಿಸಲ್ಪಟ್ಟಿರುವುದರಿಂದ ಅದನ್ನು ಮುರಿಯುವುದು ಅತ್ಯವಶ್ಯವೆಂಬುದನ್ನು ಒಪ್ಪಬೇಕಾದರೂ, ಕಾಂಗ್ರೆಸ್ ಸರಕಾರದವರು ಕಟ್ಟುವಾಗಲೇ ಮುರಿಯುವುದು ಹೇಗೆ ಸಾಧ್ಯವೆಂಬ ಸಮಸ್ಯೆಯನ್ನು ಬಿಡಿಸುತ್ತಿದ್ದಾರೆ. ಸಾಯುವುದೂ ಬದುಕುವುದೂ ಒಮ್ಮೆಗೇ ಸಾಧ್ಯವೋ ಎಂಬ ಪ್ರಶ್ನೆಗೆ ಮಾಯಾಮೀಮಾಂಸೆಯನ್ನು ತಿಳಿದವರೇ ಉತ್ತರ ಕೊಡಬೇಕಾಗಿದೆ. ಹೇಗಿದ್ದರೂ ಘಟನೆ ಮುರಿಯುವ ಕೆಲಸವಿರುವುದು ಒಂದು ಬಾಯಿಯಲ್ಲಿ, ಇನ್ನೊಂದು ಕಾರ್ಯದಲ್ಲಿ. ಈಗ ನಾವು ಘಟನೆ ಮುರಿಯುತ್ತಿರುವುದು ಬಾಯಿಯಲ್ಲಿ! ಕಾರ್ಯರೂಪದಲ್ಲಿ ಮುರಿಯುವುದರಿಂದ ಅಹಿಂಸಾ ತತ್ವವನ್ನು ಮುರಿದಂತಾಗುವುದಿಲ್ಲವೆ?

○ ○ ○

## ಸಮಸ್ಯೆಯ ಮೇಲೆ ಸಮಸ್ಯೆ!

'ಸತ್ಯಾಗ್ರಹ'ವೆಂದರೇನೆಂದು ಗಾಂಧಿಜಿಯವರೇ ಹೇಳಬೇಕಾಯಿತು. ಈಗ ನಾಗರಿಕ ಸ್ವಾತಂತ್ರ್ಯ

(Civil Liberty) ಎಂದರೇನೆಂದು ವಿವರಿಸುವ ಕೆಲಸವನ್ನು ಯಾರಾದರೂ ವಹಿಸಿಕೊಳ್ಳಬೇಕಾಗಿದೆ. ಸುಳ್ಳು ಹೇಳುವುದು ನಾಗರಿಕ ಸ್ವಾತಂತ್ರ್ಯದಲ್ಲಿ ಸೇರುತ್ತದೆಯೇ ಎಂಬುದು ಇನ್ನೊಂದು ಪ್ರಶ್ನೆ. 'ನಾಗರಿಕ ಸ್ವಾತಂತ್ರ್ಯ'ವೆಂಬುದರ ಅರ್ಥವು ಅರ್ಥಮಾಡಲ್ಪಡುವ ಸ್ಥಳದ ಮೇಲೆ ಹೊಂದಿಕೊಂಡಿದೆ. ಮದ್ರಾಸಿನಲ್ಲಿ ಕ್ರಿಮಿನಲ್ ಕಾಯಿದೆಯನ್ನು ಜಾರಿಗೆ ತಂದರೆ ಅದು 'ಅಹಿಂಸಾತ್ಮಕ ಕ್ರಿಮಿನಲ್ ಲಾ ಎಮೆಂಡ್‌ಮೆಂಟ್ ಕಾಯಿದೆ'ಯೆಂದಾಗುತ್ತದೆ. ಅದೇ ಕಾಯಿದೆಯನ್ನು ತಿರುವಾಂಕೂರಿನಲ್ಲಿ ಜಾರಿಗೆ ತಂದರೆ ಅದು 'ದಬ್ಬಾಳಿಕೆಯ ಕ್ರೂರ ಕಾಯಿದೆ'ಯಾಗುತ್ತದೆ. ಇದಂತಿರಲಿ, ಸಾಮಾನ್ಯ ಸುಳ್ಳನ್ನು ಹೇಳುವುದು ನಾಗರಿಕ ಸ್ವಾತಂತ್ರ್ಯದಲ್ಲಿ ಸೇರಿಕೊಂಡಿದೆ. ಕಾರಣ-ಪೂರ್ಣ ಸತ್ಯವನ್ನು ಹೇಳುವ ಹವ್ಯಾಸಕ್ಕೆ ಜನರು ಬಲಿಬಿದ್ದರೆ ಹೆಚ್ಚಿನವರು ಸೆರೆಮನೆಗಳೊಳಗೆ ಇರಬೇಕಾದೀತು. ತೀವ್ರಗಾಮಿಗಳು ಮಂದಗಾಮಿಗಳ ದೃಷ್ಟಿಯಲ್ಲಿ ನಾಗರಿಕ ಸ್ವಾತಂತ್ರ್ಯವನ್ನು ದುರುಪಯೋಗಿಸುವವರಾಗುತ್ತಾರೆ. ಮಂದಗಾಮಿಗಳು ತೀವ್ರಗಾಮಿಗಳ ದೃಷ್ಟಿಯಲ್ಲಿ ನಾಗರಿಕ ಸ್ವಾತಂತ್ರ್ಯದ ಕೊಲೆಗಾರರಾಗುತ್ತಾರೆ. **ಸಮಸ್ಯೆಯ ಮೇಲೊಂದು ಸಮಸ್ಯೆ.**

○ ○ ○

### ಬಿನ್ನಹ!

ಜೆಕೊಸ್ಲೊವೇಕಿಯದ ಇಪ್ಪತ್ತೊಂಭತ್ತು ಪ್ರಸಿದ್ಧ ಬರೆಹಗಾರರು ಮಾಡಿಕೊಂಡ ಬಿನ್ನಹದಲ್ಲಿ ಪ್ರಜಾಸತ್ತಾತ್ಮಕ ಜೆಕೊಸ್ಲೊವೇಕಿಯವನ್ನು ಅನ್ಯಾಯವಾಗಿ ಕಷ್ಟಕ್ಕೀಡು ಮಾಡಿದ್ದಾರೆಂಬುದನ್ನು ಪ್ರತಿಯೊಬ್ಬ ಗ್ರಂಥಕರ್ತ ಹಾಗೂ ಪತ್ರಿಕೋದ್ಯಮಿಯು ತಮ್ಮ ರಾಷ್ಟ್ರದ ಜನರಿಗೆ ತಿಳಿಸಬೇಕೆಂದು ಕೇಳಿಕೊಂಡಿದ್ದಾರೆ.

ಸರಿ, ತಿಳಿಸುವುದಂತೂ ಕಷ್ಟವಲ್ಲ. ಆದರೆ ಗ್ರಂಥಕರ್ತರು ತಿಳಿಸುತ್ತಿರುವಂತೆಯೇ ಹಿಟ್ಲರನು



ಬ್ಯಾರಿಸ್ಟರ್ ಎಮ್. ಎ. ಜಿನ್ನರು.

ಜೆಕೊಸ್ಲೊವೇಕಿಯದ ಒಂದು ಭಾಗವನ್ನು ಜೇಬಿನೊಳಗೆ ಹಾಕಿಕೊಂಡಿರುತ್ತಾನಲ್ಲಾ? ಈ ವ್ಯಾಧಿಗೇನು ಮದ್ದು? :

○ ○ ○

### ಖರೆ ನಾಟಕದ ಮಂಗಲಗೀತೆ

ಯನ್ನು ಮೊನ್ನೆಯ ಅಖಿಲ ಭಾರತ ಕಾಂಗ್ರೆಸ್ ಕಮಿಟಿಯ ಸಭೆಯಲ್ಲಿ ಹಾಡಿಯಾಯಿತು. ಡಾ। ಖರೆಯವರ ಮೇಲೆ ಎರಡು ವರುಷಗಳ ಶಿಸ್ತಿನ ಜಾರಿಯಾಯಿತು. ಪ್ರಾಯಶಃ ಮಹಾರಾಷ್ಟ್ರದ ಪತ್ರಿಕೆಗಳಿಗೆ ಮುಂದೆ ಸ್ವಲ್ಪ ವಿಶ್ರಾಂತಿಯು ಸಿಗಬಹುದು! ಆದರೆ ಅವರ ಭಾವೀ ನ್ಯಾಶನಲ್ ಡೆಮಾಕ್ರೆಟಿಕ್ ಪಕ್ಷದ ವಿಚಾರವೇನು?

○ ○ ○

### ಲಜ್ಜಾವಹ ಪತ್ರವ್ಯವಹಾರ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಮಿ। ಜಿನ್ನರವರೊಡನೆ ಲಜ್ಜಾವಹ ಪತ್ರವ್ಯವಹಾರ ನಡೆಸುವುದನ್ನು ಇನ್ನೂ ನಿಲ್ಲಿಸದಿರುವುದು ಬೇಸರದ ಸಂಗತಿಯಾಗಿದೆ. ಹಿಂದೂ ಮುಸ್ಲಿಮ್ ಐಕ್ಯವನ್ನು ಸಾಧಿಸಲು ಜನತೆಯ ಸಂಪರ್ಕವಿಲ್ಲದ ಮಿ। ಜಿನ್ನರ ಮುಸ್ಲಿಮ್ ಲೀಗಿನೊಡನೆ ಕಾಂಗ್ರೆಸ್ ಪತ್ರವ್ಯವಹಾರ ನಡೆಸುತ್ತಿರುವುದನ್ನು ನೋಡುವಾಗ ಕಾಂಗ್ರೆಸು ಜನತಾ ಸಂಪರ್ಕ ಚಳವಳದ ಅಂತ್ಯಕ್ರಿಯೆಯನ್ನು ಮಾಡಿ, ಅದರಮೇಲೆ ಪತ್ರವ್ಯವಹಾರದ ಗೋರಿಯನ್ನು ಕಟ್ಟಿದಂತೆ ಕಾಣುತ್ತದೆ. ಕಾಂಗ್ರೆಸಿನ ಈಗಿನ ಕಾರ್ಯಕ್ರಮವು "ರಚನಾತ್ಮಕ"ವೆಂದು ಬಾಯಲ್ಲೇ ಹೇಳಲ್ಪಡುವುದಲ್ಲದೆ ಚುನಾವಣೆಗಳ ಕಾಲಗಳಲ್ಲಲ್ಲದೆ ಬೇರೆ ಸಮಯದಲ್ಲಿ ಕಾಂಗ್ರೆಸ್ ಚಟುವಟಿಕೆಯೇ ಇಲ್ಲವಾಗಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಜನತಾ ಸಂಪರ್ಕ ಚಳವಳವನ್ನು ನಿಲ್ಲಿಸಿ ಹಳೆವಿಧಾನದಲ್ಲಿ ಅರೆದೇವತೆಗಳಂತಿರುವ ಧುರೀಣರೊಂದಿಗೆ ಪತ್ರವ್ಯವಹಾರ ನಡೆಸುವುದು ತೀರಾ ಅಸಮಾಧಾನಕರ

ವಾಗಿದೆ. ಐಕ್ಯಪರಿಷತ್ತಿನ ಗೋರಿಗಳು ಹಲವಾರು ಇರುವುದಿದ್ದರೂ ವರ್ಕಿಂಗ್ ಕಮಿಟಿಯವರು ಇನ್ನೂ ಕೆಲವು ಗೋರಿಗಳನ್ನು ಮಾಡಲು ಯತ್ನಿಸುತ್ತಿರುವುದು ಲಜ್ಜಾವಹವಾಗಿದೆ.

○ ○ ○

## ಸಂಯುಕ್ತ ರಾಜ್ಯ ಘಟನೆಯು ೧೯೪೦ರಲ್ಲಿ ಬರಬಹುದು.

ಆಶ್ರಿತ ರಾಜ್ಯಗಳ ಪ್ರತಿನಿಧಿಗಳು ಸಿಮ್ಲಾದಲ್ಲಿ ಸೇರಿ ಸಂಯುಕ್ತ ಘಟನೆಗೆ ಸೇರುವ ಕುರಿತು ಚರ್ಚಿಸಿದರು. ಸರ್. ಸಿ. ಪಿ. ರಾಮಸ್ವಾಮಿ ಐಯ್ಯರರೂ ಸಿಮ್ಲಾಕ್ಕೆ ತಾವೂ ಹೋಗಿ ತಿರುವಾಂಕೂರಿನ ಧೋರಣೆಯನ್ನು ತಿಳಿಸಿದರು. ಫೆಡರೇಶನು ೧೯೪೦ನೇ ಇಸವಿಯ ಕೊನೆಯ ಭಾಗದಲ್ಲಿ ಜಾರಿಗೇನೆ ಬರಬಹುದು, ಇಲ್ಲವಾದಲ್ಲಿ ಅದೇ ಸಮಯದಲ್ಲಿ ಫೆಡರೇಶನು ಜಾರಿಗೆ ಬರುವ ತಾರೀಕನ್ನಾದರೂ ಚಕ್ರವರ್ತಿಗಳು ಜಾಹೀರು ಮಾಡಬಹುದು. ಅಂತೂ ೧೯೪೦ರಲ್ಲಿ ಫೆಡರೇಶನಿನ ಕಾರ್ಯಾರಂಭವಾಗುವದು ಖಂಡಿತವೆಂದು ತಿಳಿದುಬರುತ್ತದೆ.

ಈ ಸಂದರ್ಭದಲ್ಲಿ ಕೇಂದ್ರ ಎಸೆಂಬ್ಲಿಯ ಆಯುರ್ಮಾನವನ್ನು ಹೆಚ್ಚಿಸಿದ ಸರಕಾರದ ವರ್ತನೆಯನ್ನು ಖಂಡಿಸಿರುವ ಕಾಂಗ್ರೆಸನ್ನು ತೃಪ್ತಿಪಡಿಸುವ ಸಲುವಾಗಿ ಬರುವ ಸಿಮ್ಲಾ ಅಧಿವೇಶನದ ನಂತರ ಕೇಂದ್ರ ಎಸೆಂಬ್ಲಿಯನ್ನು ಬರ್ಖಾಸ್ತು ಪಡಿಸಿ ಹೊಸ ಚುನಾವಣೆ ನಡಿಸುವರೆಂದು ತಿಳಿದುಬರುತ್ತದೆ.

ಬಂತು ಇನ್ನೊಂದು ಚುನಾವಣೆಯ ಗದ್ದಲ! ಉಮೇದ್ವಾರರು ಕಟಿಬಿಗಿದು ಸಿದ್ಧರಾಗಲಿ.

○ ○ ○

## ಕಾಂಗ್ರೆಸಿಗೆ ಇನ್ನೊಂದು ದಾನವೆ?

ಈ ನಡುವೆ ನಾನಾ ವಿಧದ ಊಹಾಪೋಹೆಗಳೆದ್ದಿವೆ. ಕಾಂಗ್ರೆಸು ಫೆಡರೇಶನನ್ನು ವಿರೋಧಿಸುವ ನಿರ್ಧಾರಮಾಡಿದೆ. ಕಾಂಗ್ರೆಸ್ ಅಧಿಕಾರದಲ್ಲಿರುವ ಪ್ರಾಂತ್ಯದ ನ್ಯಾಯವಿಧಾಯಕ ಸಭೆಗಳೂ ಅಂತೆಯೇ ನಿರ್ಧರಿಸಿವೆ. ಹೇಗಾದರೂ ಕಾಂಗ್ರೆಸಿನ ಮನವೊಲಿಸಬೇಕೆಂದು ಇಂಡಿಯಾ ಸರಕಾರದ ಲಾ ಮೆಂಬರರಾಗಿ ಕಾಂಗ್ರೆಸಿನವರನ್ನಾರಿಸುವ ಊಹೆಯೆದ್ದಿದೆ. ಕಾಂಗ್ರೆಸ್ ಧೋರಣೆಯ ದೃಷ್ಟ್ಯಾ ಇದು ಅಸಾಧ್ಯ. ಈಗಿನ ಲೋ ಮೆಂಬರರಾದ ಸರ್. ಎನ್. ಎನ್. ಸರಕಾರರೂ, ಆರ್ಥಿಕ ಮೆಂಬರರಾದ ಸರ್. ಜೇಮ್ಸ್ ಗ್ರಿಗ್ಗರೂ ಸುಮಾರು ಆರು ತಿಂಗಳು ನಂತರ ಅಧಿಕಾರದಿಂದ ನಿವೃತ್ತರಾಗುವರು.

---


# ಔದ್ಯೋಗಿಕ ಶಿಕ್ಷಣವು.

ನಿಮ್ಮ ಮಕ್ಕಳಿಗೆ ಆಧುನಿಕ ರೀತಿಯಿಂದಲೂ, ಶಾಸ್ತ್ರೀಯ ವಿಧಾನಗಳಿಂದಲೂ ಕಮರ್ಶಿಯಲ್ ಪಾಠಗಳಲ್ಲಿ ಶಿಕ್ಷಣವು ಬೇಕೆಂದಿದ್ದರೆ, ಪಾಂಗಾಳ್ ನಾಯಕ್ ಬೇಂಕಿನ ಎದುರುಗಡೆಯಲ್ಲಿರುವ

**ದಿ ಸಿಟಿ ಸ್ಕೂಲ್ ಒಫ್ ಕೊಮ್ಮರ್ಸ್ (The City School of Commerce)**

ಎಂಬ ಶಾಲೆಗೆ ಕಳುಹಿಸಿರಿ. ಟೈಪ್ ರೈಟಿಂಗ್, ಶೋರ್ಟ್‌ಹೇಂಡ್, ಬುಕ್ ಕೀಪಿಂಗ್, ಬೇಂಕಿಂಗ್, ಕರೆಸ್‌ಪೊಂಡೆನ್ ಮತ್ತು ಇತರ ಬೇರೆ ವಿಷಯಗಳಲ್ಲಿಯೂ ಉಚ್ಚ ಶಿಕ್ಷಣವನ್ನೀಯುವ ಸಾಲೆ ಎಂದರೆ ಉಡುಪಿಯಲ್ಲಿ ಇದೊಂದೇ, ಅಲ್ಲದೆ, ಮಹಿಳೆಯರಿಗೋಸ್ಕರ ಶಾಸ್ತ್ರೀಯ ರೀತಿಯಿಂದ ಡ್ರೆಸ್ ಮೇಕಿಂಗ್, ಕಟ್ಟಿಂಗ್, ಎಂಬ್ರೋಯ್ಡರಿ (Scientific Dress-making, Cutting & Embroidery) ಕಲಿಸುವ ಕ್ಲಾಸುಗಳು ಬೇರೆಯೇ ಕಟ್ಟಡದಲ್ಲಿ ನಿಪುಣರಾದ ಮಹಿಳೆಯರ ಕೈಕೆಳಗೆ ಇವೆ. ಈಗ ಫೀಸು ಕೊಡಲು ಸಾಮರ್ಥ್ಯವಿಲ್ಲದ ತೀರ ಬಡ ವಿದ್ಯಾರ್ಥಿಗಳಿಗೆ 'ದುಡಿಯುವಾಗ ಕೊಡು' (*Pay when you earn*) ಎಂಬ ಕ್ರಮದ ಪ್ರಕಾರದ ವಿದ್ಯೆಯು ಕೊಡಲಾಗುವುದು. ಫೀಸುಗಳು ತೀರಾ ಕಮ್ಮಿ. ನಮ್ಮೂರ ಗೃಹಸ್ಥರೇ ಹುರ ಜನರ ಪ್ರೋತ್ಸಾಹದಿಂದ ಸ್ಥಾಪಿಸಿದ ಸಾಲೆಯು ಇದಾಗಿದೆ. **ವಿದ್ಯಾರ್ಥಿಗಳ ಶಿಕ್ಷಣದ ಸಂಪೂರ್ಣ ಅವಧಿಯು ಮುಗಿದೊಡನೆ ಉದ್ಯೋಗವನ್ನು ದೊರಕಿಸಲಾಗುವುದು.** ಇನ್ನೂ ಹೆಚ್ಚಿನ ಮಾಹಿತಿಗೆ ಆ ಸಾಲೆಯ ಹೆಡ್‌ಮಾಸ್ತರರನ್ನು ಕಂಡು ಮಾತಾಡಿಸಿರಿ. ಕ್ಲಾಸುಗಳು ಈಗಲೇ ತುಂಬುತ್ತ ಬರುತ್ತಿವೆ.

**W. A. SUCHITTA,** F. I. C. A.,
*Incorporated Com. Accountant,*
**Head-master**

# ಎಡ್ವರ್ಡ್-ಸಿಂಪ್

## ಗುಟ್ಟಿನ ಗುಣಗ

## ಚರ್ಚಾಸ್ಪ

## ವಿಕ್ಟೋರಿ

## ತರುಣ

**ಸಮಗ್ರ ಜಗತ್ತಿನಲ್ಲಿ ಅತ್ಯಂತ ಚರ್ಚಾಸ್ಪದ ವಿಚಾರವಾದ**

ವಿಂಡ್ಸರ್-ಸಿಂಪ್ಸನ್ ಪ್ರಹಸನದ

**ಅದ್ಭುತರಮ್ಯ ವಿಷಯಗಳನ್ನು ಬರುವ ವಾರದ ಸಂಚಿಕೆಯಲ್ಲೋದಿರಿ.**

ಹಿಂದೆಂದೂ ನೋಡದ ಚಿತ್ರಗಳನ್ನು ನೀವು ಬರುವ ವಾರದ ಲೇಖಾಂಕದಲ್ಲಿ ನೋಡುವಿರಿ.

# "ವೈಯಕ್ತಿಕ ಸ್ವಾತಂತ್ರ್ಯ

**ಸ್ವತಂತ್ರ ಮನೋವೃತ್ತಿ**

ಐದನೆಯ ಜಾರ್ಜರ ಆಳ್ವಿಕೆಯ ಕೊನೆಯ ಭಾಗ. ಪ್ರಿನ್ಸ್ ಆಫ್ ವೇಲ್ಸರು ತನ್ನ ಸ್ವತಂತ್ರ ಬುದ್ಧಿಯಿಂದ ವಿಂಡ್ಸರ್ ಪಾರ್ಕಿನ ಫೋರ್ಟ್ ಬೆಲ್ವೆಡಿಯರಿನಲ್ಲಿ ವಾಸಿಸಿ ತಮ್ಮ ವ್ಯಕ್ತಿತ್ವದ ವೈಶಿಷ್ಟ್ಯವನ್ನು ಬ್ರಿಟಿಷ್ ಸಾಮ್ರಾಜ್ಯಕ್ಕೆ ತೋರಿಸುತ್ತಿದ್ದರು. ತರುಣ ಜೀವನದ ಸ್ವತಂತ್ರ ವಾತಾವರಣವು ಅವರಿಗೆ ರುಚಿಸಿತು. ಗಾಲ್ಫ್, ತೋಟಗಾರಿಕೆ ಮೊದಲಾದುವುಗಳಲ್ಲಿ ಎಡ್ವರ್ಡರು ವಿಶೇಷ ಅಭಿರುಚಿಯನ್ನು ತೋರಿಸಲಾರಂಭಿಸಿದರು. ರಾಜತ್ವದ ಮೌಢ್ಯ ಪದ್ಧತಿಯನ್ನು ಎಡ್ವಾರ್ಡರು ವಿಶೇಷವಾಗಿ ಲಕ್ಷಿಸಲಿಲ್ಲ. ವೈಯಕ್ತಿಕ ಸ್ವಾತಂತ್ರ್ಯವು ಪ್ರತಿಯೊಬ್ಬ ವ್ಯಕ್ತಿಯ ಜನ್ಮಸಿದ್ಧ ಹಕ್ಕೆಂದು ಅವರು ಬಗೆದರು.

**ತುದಿಬುಡವಿಲ್ಲದ ವಿಮರ್ಶೆ.**

ತರುಣ ರಾಜರ ಈ ತರದ ಜೀವನವನ್ನು ಕಂಡು ಹಳೆ ಸಾಂಪ್ರದಾಯಗಳಲ್ಲಿ ಹುಟ್ಟಿ ಬೆಳೆದವರಿಗೆ ಬೇಸರವೆನಿಸಿತು. ಎಲ್ಲೆಡೆಗಳಲ್ಲಿಯೂ ತುದಿಬುಡವಿಲ್ಲದ ಬೇಜವಾಬ್ದಾರಿ ವಿಮರ್ಶೆಯು ತಲೆದೋರಲಾರಂಭಿಸಿತು. ಕ್ಯಾಂಟರ್ಬರಿಯ ಆರ್ಚ್‌ಬಿಷಪರಂಥ ಜವಾಬ್ದಾರಿ ವ್ಯಕ್ತಿಗಳು ಕೂಡಾ ಸಾರ್ವಜನಿಕವಾಗಿ ಈ ಕುರಿತು ತಮ್ಮ ಖಂಡನೆಯನ್ನು ವ್ಯಕ್ತಪಡಿಸಿದರು. ಆದರೆ ಎಡ್ವಾರ್ಡರು ಈ ನಿರಾಧಾರ ವಿಮರ್ಶೆಗಳನ್ನು ಲಕ್ಷಿಸಲಿಲ್ಲ. ತನಗೆ ಪ್ರಿಯವಾದವರೊಡನೆ ಕೂಡಿ ನಡೆಯುವುದರಲ್ಲಿ ಯಾವ ತಪ್ಪೂ ಇಲ್ಲವೆಂಬ ಅಭಿಪ್ರಾಯವು ಅವರಲ್ಲಿ ಬೇರೂರಿತು. ಬೆಲ್ವೆಡಿಯರಿನ ಸ್ವತಂತ್ರ ಜೀವನದ ಸುಖಕ್ಕಾಗಿ ಎಡ್ವರ್ಡರು ಹಲವು ತರದ ವಿಮರ್ಶೆಗಳಿಗೆ ತನ್ನ ತಲೆಯನ್ನೊಡ್ಡಬೇಕಾಯಿತು.

**ಲಂಡನಿನ ಗುಟ್ಟಿನ ಮಾತು!**

ಎಡ್ವಾರ್ಡರು ಅಮೇರಿಕದ ತರುಣಿಯೊಬ್ಬಳನ್ನು ವಿವಾಹವಾಗುವರೆಂಬ ಸುದ್ದಿಯು ಎಲ್ಲೆಡೆಗಳಲ್ಲಿಯೂ ಹಬ್ಬಿಬಿಟ್ಟಿತು. ಗುಟ್ಟಿನ



**ಸತೀ ಸಿಂಪ್ಸನ್.**

ಮಾತು ಕೊನೆಗೆ ಪತ್ರಿಕೆಗಳ ಪುಟಗಳನ್ನು ನುಗ್ಗಿತು.

# ಯ ಪ್ರಸಂಗ

## ಗಟ್ಟಲೆ ಜನರ ಯಿತು !

ಮುಂದೆ ವ್ಯಕ್ತಿ

## ರನ ಜನ್ಮಸಿದ್ಧ ಹಕ್ಕು!”

ಲೇಖಾಂಕ ಮೂರು.

= ೩ =

**— ಮುಂದಿನ ಲೇಖಾಂಕದಲ್ಲಿ —**

ಸಿಂಪ್ಸನ್-ಎಡ್ವರ್ಡರ ಪ್ರಣಯ ಪ್ರಸಂಗವು ಜಗತ್ತಿನ ರಾಜಕೀಯ ಮುತ್ಸದ್ದಿಗಳ ಮಹತ್ವದ ಮಾತಾದ ರೀತಿ,-ಸಮಗ್ರ ಯುರೋಪಿನ ಗುಪ್ತಚಾರರು ಜಗತ್ತಿನ ಅದ್ಭುತರವ್ಯ ಪ್ರಹಸನದ ರಹಸ್ಯವನ್ನು ಕಂಡುಹಿಡಿಯಲು ಮಾಡಿದ ಯತ್ನದ ಬಗ್ಗೆ,ಧಾರ್ಮಿಕ ವಿಚಾರಗಳ ಆಡುಂಬೊಲವಾದ ಇಗರ್ಜಿಗಳಲ್ಲಿ ಆರೋಪಣೆಗಳ ಪ್ರಸಾದ-ವಿವಾಹ ವಿಚ್ಛೇದನ-ವಿದೇಶೀಯ ರಾಜಕಾರಣದಲ್ಲಿ ರಾಜರ ಭಾಗ-ಕೊನೆಗೆ ನಿಗೂಢವಾದೊಂದು ಭಾಷಣ ಇವೇ ಮೊದಲಾದ ಸ್ವಾರಸ್ಯಮಯ ವಿಚಾರಗಳು!

ಲಂಡನಿನಲ್ಲಿ ವ್ಯಾಪಾರ ಮಾಡತೊಡಗಿದ್ದ. ೧೯೨೮ರಲ್ಲಿ ಸಿಂಪ್ಸನ್ ಮತ್ತು ಇವರಿಗೆ ವಿವಾಹವಾಗಿತ್ತು.



**ಸ್ವಾತಂತ್ರ್ಯಪ್ರಿಯ ಎಡ್ವಾರ್ಡ್**

ಈಕೆ ಮೆರಿಲೇಂಡಿನ ಒಬ್ಬ ಗೃಹಸ್ಥನ ಮಗಳು. ಆ ಮಹಾಶಯನ ಹೆಸರು ವಾಲಿಸ್ ವಾರ್‌ಫೀಲ್ಡ್ ಎಂದಿದ್ದುದರಿಂದ ಈಕೆಯೂ 'ವಾಲಿಸ್' ಎಂದು ಕರೆಯಲ್ಪಡುವಂತಾಯಿತು. ಈ ತರುಣಿಯ ತಾಯಿ ವರ್ಜೀನಿಯದ ಆಲಿಸ್ ಮೋಂಟೇಗ್-ಎಂಬಾಕೆ. ತಂದೆತಾಯಿಯರ ಕುರಿತು ಸಂಕ್ಷಿಪ್ತವಾಗಿ ಹೇಳುವುದಿದ್ದರೆ ಅವರು ಸಾಮಾನ್ಯ ಮಟ್ಟಿನ ಭೂಮ್ಯಾಲಿಕರಾಗಿದ್ದರು.

### ಪ್ರಥಮ ವಿವಾಹ.

ಸತೀ ಸಿಂಪ್ಸನಳು ಪ್ರಾರಂಭದಲ್ಲಿ ಅಮೇರಿಕದ ಯುನೈಟೆಡ್ ಸ್ಟೇಟ್ಸಿನ ಲೆಫ್ಟನೆಂಟ್ ವಿನ್‌ಫೆಲ್ಡ್ ಎಂಬವನ ಮಡದಿಯಾದಳು. ಈ ವಿವಾಹವು ೧೯೧೬ರಲ್ಲಿ ನಡೆಯಿತು. ಯುದ್ಧಕಾಲದ ವಿವಾಹಗಳು ಸಾಮಾನ್ಯವಾಗಿ ಯಶಸ್ವಿಯಾಗುವುದಿಲ್ಲವೆಂಬ ಗಾದೆಯಂತೆ ಇವರಿಬ್ಬರ ವಿವಾಹ ವಿಚ್ಛೇದನಕ್ಕೆ ಹೆಚ್ಚು ಕಾಲ ಹಿಡಿಯಲಿಲ್ಲ. ಗಂಡನೊಡನೆ ಜೀವನವು ಸುಖಮಯವಾಗಿ ನಡೆಯಲಿಲ್ಲವೆಂಬ ಆಧಾರದಿಂದ ೧೯೨೭ನೇ ದಶಂಬರ ೧೦ರಂದು ವಿವಾಹ ವಿಚ್ಛೇದನವಾಗಿ ಹೋಯಿತು!

### ಸೌಂದರ್ಯದ ಪ್ರಭಾವ

ಫೋರ್ಟ್ ಬೆಲ್ವಡೀಯರಿನಲ್ಲಿ ಎಡ್ವರ್ಡರು ಸತೀ ಸಿಂಪ್ಸನಳ ಮೈತ್ರಿಯನ್ನು ಬೆಳೆಸಿದರು. ಪರಿಚಯವಾದಂದಿನಿಂದ ಎಡ್ವಾರ್ಡರ ಜೀವನದಲ್ಲಿ ಅದೊಂದು ತರದ ವ್ಯತ್ಯಾಸವುಂಟಾಗಿತ್ತು. ವಿಂಡ್ಸರ್ ಪಾರ್ಕಿನಲ್ಲಿ ಅವರು ಬಹು ಕಾಲ ಒಟ್ಟಿಗಿದ್ದುದರಿಂದ ಸತೀ ಸಿಂಪ್ಸನಳು ತನ್ನ ಸೌಂದರ್ಯದ ಪ್ರಭಾವದಿಂದ ಎಡ್ವರ್ಡರ ಹೃದಯವನ್ನು ಸೂರೆಗೊಂಡಿದ್ದಳು. ಈ ಮೈತ್ರಿಯಿಂದಾಗಿ ಎಡ್ವಾರ್ಡರ ಜೀವನವು ಸುಖಮಯವಾಯಿತು. ಈ ಮೈತ್ರಿಯು ಕೊನೆಗೆ ಜಗತ್ತಿನ ಮಹತ್ವದ ಪ್ರಣಯ ಪ್ರಹಸನವಾಗಿ ಕೊನೆಗೊಂಡಿತು.

### ಸದ್ಗುಣಿ ಸಿಂಪ್ಸನ್

ಸತೀ ಸಿಂಪ್ಸನಳು ಸಾಮಾನ್ಯ ಸ್ತ್ರೀಯಾಗಿದ್ದಿಲ್ಲ. ಆಕೆಯ ವ್ಯವಹಾರಜ್ಞಾನ, ಸೊಬಗು, ಒನಪು,

ಯಥಾರ್ಥತೆ, ನಿರ್ಭಯ ಮನೋವೃತ್ತಿಯೇ ಮೊದಲಾದ ಸದ್ಗುಣಗಳು ಎಂಥ ಪುರುಷನ ಮನಸ್ಸನ್ನೂ ಸೂರೆಗೊಳಿಸುವಂತಹದು. ಎಂಥವರನ್ನೂ ತಗೆದೂಗಿಸುವಂತಹದು.

**ಎಡ್ವರ್ಡರ ಆದರ್ಶಪ್ರೇಮ.**

ಎಡ್ವರ್ಡರು ಸತೀ ಸಿಂಪ್ಸನಳನ್ನು ಪ್ರೇಮಿಸಿರುವುದರಿಂದ ಅದು ಕೇವಲ ಮೋಹಕದೃಷ್ಟಿಯಿಂದಲೇ ಎಂದು ಹೇಳಲಾಗುವುದಿಲ್ಲ. ಅವರು ಪ್ರಿನ್ಸ್ ಆಫ್ ವೇಲ್ಸರಾಗಿದ್ದಾಗ ನೂರಾರು ಸುಂದರಿಯರು ಅವರ ಇಚ್ಛೆಗನುಸಾರವಾಗಿ ನಡೆಯಲು ಸಿದ್ಧರಿದ್ದರೆಂದು ಹೇಳಬೇಕಾಗಿಲ್ಲ. ಸತೀ ಸಿಂಪ್ಸನಳನ್ನೇ ತನ್ನ ಹೃದಯರಾಣಿಯನ್ನಾಗಿ ಮಾಡಬೇಕೆಂಬ ಅಭಿಲಾಷೆಯು ಅವರಲ್ಲಿ ಬಲವಾಗುತ್ತ ಬಂತು.

**ನಿರಾಧಾರ ವಿಚಾರ.**

ಪ್ರಿನ್ಸ್ ಆಫ್ ವೇಲ್ಸರು ಆಕೆಯೊಡನೆ ಪ್ರಣಯ ಮಾಡತೊಡಗಿದಂದಿನಿಂದ ಐದನೆಯ ಜಾರ್ಜರಿಗೆ ಬೇಸರವಾಗಲಾರಂಭವಾಗಿತ್ತೆಂದು ಅನೇಕ ವಿಮರ್ಶಕರು ಹೇಳಿದ್ದಾರೆ. ಆದರೆ ಗ್ರೀಸಿನ ರಾಜಕುಮಾರರಾದ ಕ್ರಿಸ್ಟೋಫರರು ಇತ್ತೀಚೆಗೆ ಹೇಳಿರುವುದನ್ನು ಕೇಳುವಾಗ ಈ ವಿಚಾರವು ನಿರಾಧಾರವಾದುದೆಂದು ಸ್ಪಷ್ಟವಾಗುತ್ತದೆ. ಡ್ಯೂಕ್ ಆಫ್ ಕೆಂಟ್ ಮತ್ತು ಪ್ರಿನ್ಸೆಸ್ ಮೇರಿನ್ ಇವರ ವಿವಾಹಕಾಲದಲ್ಲಿ ಸತೀ ಸಿಂಪ್ಸನಳು ರಾಜಅತಿಥಿಯಾಗಿದ್ದಳು. ಆ ಕಾಲದಲ್ಲಿ ಯಾರೂ ಆಕೆಯ ಕುರಿತು ತಮ್ಮ ಸಮಾಧಾನವನ್ನು ವ್ಯಕ್ತಪಡಿಸಿಲ್ಲ. ಸತೀ ಸಿಂಪ್ಸನ್ ವಿವಾಹಿತ ಸ್ತ್ರೀಯಾಗಿರುವುದರಿಂದ ಎಡ್ವರ್ಡ್-ಸಿಂಪ್ಸನ್ ಮೈತ್ರಿಗೆ ರಾಜ ಮನೆತನದವರು ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಡಲಿಲ್ಲ.

**ಆರ್ಚ್ ಬಿಷಪರ ಆರೋಪಣೆ**

ಕ್ಯಾಂಟರ್ಬರಿಯ ಆರ್ಚ್ ಬಿಷಪರು ಮಾಡಿದ ಬ್ರಾಡ್‌ಕಾಸ್ಟ್ ಭಾಷಣದಲ್ಲಿ ಸತೀ ಸಿಂಪ್ಸನಳು ಹೀನ ಕುಲದ ಸ್ತ್ರೀಯೆಂದು ಹೇಳಿರುವುದು ತೀರಾ ನಿರಾಧಾರವಾಗಿದೆ. ಈ ಸುಳ್ಳಿನಿಂದಾಗಿ ಬಹಳ ಮಂದಿ ಬೇಸರ ಪಟ್ಟಿದ್ದಾರೆ.

**ಆರ್ಜೆಂಟೈನ್ ಶಿಷ್ಟಮಂಡಲ**

ಆರ್ಜೆಂಟೈನ್ ಮತ್ತು ಬ್ರಿಟನುಗಳಿಗೆ ಒಂದು ತಿಕ್ಕಾಟವು ೧೯೩೨ರಲ್ಲಿ ತಲೆದೋರಿತು. ಪ್ರಿನ್ಸ್ ಆಫ್ ವೇಲ್ಸರು ಇವೆರಡು ರಾಷ್ಟ್ರಗಳೊಳಗೆ ಸಾಂಸ್ಕೃತಿಕ ಮೈತ್ರಿಯನ್ನು ಬೆಳೆಸುವಂತೆ ಮಾಡಲು ಎರಡು ವಿದ್ಯಾವೇತನಗಳನ್ನೇರ್ಪಡಿಸಿದರು. ಆರ್ಜೆಂಟನದಿಂದ ಶಿಷ್ಟಮಂಡಲವು ಬಂದಾಗ ಅದನ್ನು ಸ್ವಾಗತಿಸಿ, ತಿಕ್ಕಾಟವನ್ನು ಯಾವ ತೊಂದರೆಯೂ ಇಲ್ಲದಂತೆ ಕೊನೆಗೊಳಿಸಿದ ಕೀರ್ತಿಯು ಪ್ರಿನ್ಸ್ ಆಫ್ ವೇಲ್ಸರ ವೈಯಕ್ತಿಕ ಸಾಮರ್ಥ್ಯಕ್ಕೆ ಸಲ್ಲುತ್ತದೆಂದು ಶಿಷ್ಟ ಮಂಡಲದ ಉಪಾಧ್ಯಕ್ಷರಾದ ಡಾ। ಜೂಲಿಯೋರೀಕಾರವರು ಹೇಳಿದ್ದರು.

**ನಿರುದ್ಯೋಗ ನಿವಾರಣಾಯತ್ನ**

ಸಾಮ್ರಾಜ್ಯದ ಭಾಗದಲ್ಲಿ ನಿರುದ್ಯೋಗವೆಂಬುದೇ ಇಲ್ಲದಂತೆ ಮಾಡಬೇಕೆಂಬ ಮಹಿದಭಿಲಾಷೆಯು ಎಡ್ವರ್ಡರಲ್ಲಿತ್ತು. ಅದಕ್ಕಾಗಿ ಅವರು ಹಲವು ಮುಖಂಡರೊಡನೆ ಮಾತುಕತೆಗಳನ್ನು ನಡೆಸಿದ್ದರು.

**ಜಾರ್ಜರ ರಜತೋತ್ಸವ**

ಮೇ ತಿಂಗಳ ೬ನೇ ತಾರೀಕಿನಂದು ಬ್ರಿಟಿಷ್ ಸಾಮ್ರಾಜ್ಯದ ಎಲ್ಲೆಡೆಗಳಲ್ಲಿಯೂ ಐದನೆಯ ಜಾರ್ಜರ ಆಳ್ವಿಕೆಯ ರಜತೋತ್ಸವವು ನಡೆಯಿತು. ಆಗ ಪ್ರಿನ್ಸ್ ಒಫ್ ವೇಲ್ಸರು ತನ್ನ ಚಟುವಟಿಕೆಗಳಿಂದ ಸುಧಾರಿತ ಮನೋವೃತ್ತಿಯವರ ಮನ್ನಣೆಯನ್ನು ಪಡೆದಿದ್ದರು. ಪ್ರಧಾನ ಮಂತ್ರಿಗಳಾದ ಬಾಲ್ಡ್ವಿನ್‌ರವರು ಆಗಾಗಲೆ ತನ್ನ ಹಳೆ ಸಂಪ್ರದಾಯದ ಬಲೆಯನ್ನು ಹರಡಿ, ಆರ್ಚ್ ಬಿಷಪರೊಂದಿಗೆ ಎಡ್ವಾರ್ಡರ ಖಂಡನೆಯನ್ನು ಮಾಡತೊಡಗಿದ್ದರು.

**೨೦ರ ಮಾತು!**

ಎಡ್ವರ್ಡರು ತನ್ನ ಇಪ್ಪತ್ತನೆ ವಯಸ್ಸಿನಲ್ಲಿ ಅಲೆಕ್ಸಾಂಡ್ರಾ ರಾಜ್ಞಿಯೊಡನೆ ತನ್ನ ಮನದಿಚ್ಛೆಯನ್ನು ಸ್ಪಷ್ಟವಾಗಿ ಹೇಳಿದ್ದರು. ತಾನು ಪ್ರೀತಿಸುವ ಕನ್ಯೆಯನ್ನೇ ಮದುವೆಯಾಗುವುದು ವಿಹಿತವೆಂದು ಹೇಳಿ ಅವರು ಹಲವರಿಗೆ ಆಶ್ಚರ್ಯವನ್ನುಂಟು ಮಾಡಿದ್ದರು. ನಿರ್ಭಯದ ಮನೋವೃತ್ತಿಯಿಂದುಂಟಾದ ವಿಷ

**ಉತ್ತಮ ಊದುಬತ್ತಿಗಳು ಬೇಕಾದರೆ ಶ್ರೀ ಭಾರತ ವಸ್ತುಮಂದಿರ.**

ರ್ಶಯು ಈ ಸ್ಪಷ್ಟೋಕ್ತಿಯಿಂದ ಮತ್ತಷ್ಟು ಹೆಚ್ಚಾಯಿತು.

**ಎಂಟನೆಯ ಎಡ್ವರ್ಡ್**

೧೯೩೬ ನೆಯ ಜನವರಿ ೨೦ ರಂದು ಐದನೆಯ ಜಾರ್ಜರು ಗತಿಸಿದರು. ಮರುದಿನ ಮಂಗಳವಾರ ಎಂಟನೆಯ ಎಡ್ವರ್ಡರು ಡ್ಯೂಕ್ ಆಫ್ ಯಾರ್ಕರೊಂದಿಗೆ ಪ್ರಧಾನ ಮಂತ್ರಿ ಬಾಲ್ಡ್ವಿನರನ್ನು ಕಾಣ ಹೋದರು. ಆ ದಿನ ರಾತ್ರಿ ಲಾರ್ಡ್ ಬಾಲ್ಡ್ವಿನರು ಮಾಡಿದ ಭಾಷಣದಲ್ಲಿ ಎಂಟನೆಯ ಎಡ್ವರ್ಡರ ಅವಿವಾಹಿತ ಏಕಾಕಿ ಜೀವನದ ಕಷ್ಟ ಸುಖಗಳ ಕುರಿತು ಕೆಲವು ಅಸ್ಪಷ್ಟ ಮಾತುಗಳನ್ನಾಡಿದ್ದರು. ಎಡ್ವಾರ್ಡರು ತನ್ನ ವೈಯಕ್ತಿಕ ನೆಲೆಯಲ್ಲಿ ತಾನು ತನ್ನಿಚ್ಛೆಗನುಸಾರವಾದ ಕನ್ಯೆಯನ್ನು ಮದುವೆಯಾಗಬಹುದೇ ಎಂಬರ್ಥದ ಪ್ರಶ್ನೆ ಕೇಳಿದರು. ಈ ಪ್ರಶ್ನೆಗೆ ಅಸಮಾಧಾನದ ಉತ್ತರ ಸಿಕ್ಕಿದುದರಿಂದ ಯೋಗ್ಯ ವ್ಯಕ್ತಿಯಂತೆ ಎಡ್ವರ್ಡರು ಆ ಪ್ರಶ್ನೆಯನ್ನು ಪುನಃ ಕೇಳಲೇ ಇಲ್ಲ.

---

ನಿರೀಕ್ಷಿಸಿರಿ! ಅಗತ್ಯ ಓದಿರಿ!

ದೊಡ್ಡ ಆಕಾರ!! **ವರ್ತಕ ಧುರೀಣ** ಹೆಚ್ಚು ವಿಷಯಗಳು!

ಮಾಸಪತ್ರಿಕೆಯು ಇದೇ ಅಕ್ಟೋಬರ ತಾ. ೧೫ರಿಂದ ದೊಡ್ಡ ಆಕಾರದಿಂದ ಚಿತ್ತಾಕರ್ಷಕವಾಗಿ ಹೊರಡಲು ಪ್ರಾರಂಭವಾಗುವುದು.

**ನಿಮಗೆ ಬೇಕಾದ ಅಪೂರ್ವ ವಿಷಯಗಳ ಪ್ರಚಂಡ ಸಂಗ್ರಹವು ಪ್ರತಿ ತಿಂಗಳಲ್ಲಿ ಪ್ರಕಟವಾಗುವುದು. ಅವುಗಳನ್ನು ಓದಿ ನೀವು ಆನಂದ ಪಡೆವಿರಿ, ಅಚ್ಚರಿಗೊಳ್ಳುವಿರಿ, ಜಗತ್ತಿನ ರಹಸಗಳನ್ನು ತಿಳಿಯುವಿರಿ!**

ಟಪ್ಪಾಲು ಮೂಲಕ ಪತ್ರಿಕೆಯನ್ನು ಪಡೆಯುವುದು ಸರ್ವರಿಗೂ ಅನುಕೂಲ, ಕಾರಣ ಪ್ರತಿ ತಿಂಗಳ ಸಂಚಿಕೆಯೂ ತಪ್ಪದೆ ಕೈಸೇರುವುದು. ಗ್ರಾಮಗಳಿಗೂ ಕೂಡ ಟಪ್ಪಾಲು ಪೇದೆಯು ಅವುಗಳನ್ನು ತಂದು ವಿಳಾಸದಾರರಿಗೆ ತಲಪಿಸುವನು. ವಾರ್ಷಿಕ ಚಂದಾಹಣ, ಅಂಚೆವೆಚ್ಚ ಸೇರಿ ಮನಿಯಾರ್ಡರ ಮೂಲಕ ರೂ. ೧-೮-೦ ಮಾತ್ರ.

ಜನರು ಬಿಡಿಸಂಚಿಕೆಗಳನ್ನು ತಮ್ಮೂರ ಏಜಂಟರಿಂದ ಪಡೆಯಬಹುದು. ಹೆಚ್ಚು ಪ್ರತಿಗಳು ಬೇಕಾದ ಏಜಂಟರು ಮುಂದಾಗಿ ನಮಗೆ ತಿಳಿಸತಕ್ಕದ್ದು.

ಏಜಂಟರಾಗ ಬಯಸುವವರು ನಮಗೆ ಪತ್ರ ಬರೆದರೆ ಕೂಡಲೇ ಏಜನ್ಸಿ ಶರ್ತಗಳನ್ನು ತಿಳಿಸಲಾಗುವುದಲ್ಲದೆ, ಮಾರಾಟದ ಬಗ್ಗೆ ಯೋಗ್ಯ ಕಮಿಶನ್ ಕೆರಲಾಗುವುದು.

**ಬಿಡಿ ಸಂಚಿಕೆಯ ಬೆಲೆ ೦-೨-೦. ಹಿಂದಿನ ಸಂಚಿಕೆ (ಉಪಲಬ್ಧವಿದ್ದಲ್ಲಿ) ೦-೩-೦.**

**ಮಾದರಿ ಸಂಚಿಕೆಯನ್ನು ಬಯಸತಕ್ಕವರು ಅಗತ್ಯವಾಗಿ ೦-೨-೦ ಸ್ಟಾಂಪನ್ನು ಕಳುಹಿಸತಕ್ಕದ್ದು.**

**ವಿಳಾಸ: ಪ್ರೊಪ್ರೈಟರ್, 'ವರ್ತಕ ಧುರೀಣ' ಪೋಸ್ಟ್-ಉಡುಪಿ, ದಕ್ಷಿಣ ಭಾರತ.**

- - 'ದೀನಬಂಧು ನಿಧಿ'ಯು ಬಡವರ ಬಂಧು - -

# ಅಂತರಂಗ

**ಆದಿತ್ಯವಾರ, ಒಕ್ಟೋಬರ ೯, ೧೯೩೮.**

## ಭಾರತದ ಔದ್ಯೋಗೀಕರಣ

ಇಷ್ಟರ ತನಕ ಖಾದಿಯೇ ಇತ್ಯಾದಿ ಗ್ರಾಮ ಕೈಗಾರಿಕೆಗಳ ಸುಧಾರಣೆಗೆ ತನ್ನ ಲಕ್ಷ್ಯವನ್ನೀಯುತ್ತಿದ್ದರೂ ಪ್ರಾಂತಿಕ ಸ್ವಾಯತ್ತೆಯಿಂದಾಗಿ ಸ್ವಲ್ಪ ಮಟ್ಟಿನ ಅಧಿಕಾರವು ಸಿಕ್ಕಿರುವುದರಿಂದ ಈಗ ಸಮಸ್ತ ಭಾರತದ ಔದ್ಯೋಗೀಕರಣದ ಕುರಿತು ಯೋಚಿಸುವಂತಾಗಿರುವುದು ಸಂತೋಷದ ಸಂಗತಿಯಾಗಿದೆ. ಇತ್ತೀಚೆಗೆ ದೆಹಲಿಯಲ್ಲಿ ಜರಗಿದ ಉದ್ಯೋಗ ಮಂತ್ರಿಗಳ ಪರಿಷತ್ತಿನಲ್ಲಿ ರಾಷ್ಟ್ರಪತಿ ಸುಭಾಷ ಬೋಸರು ಹೇಳಿದಂತೆ ಔದ್ಯೋಗಿಕ ಪ್ರಗತಿಯಿಲ್ಲದ ರಾಷ್ಟ್ರವು ನಿಶ್ಚಯವಾಗಿಯೂ ಬದುಕುವಂತಿಲ್ಲ. ಭಾರತದ ಕೋಟಿಗಟ್ಟಲೆ ಜನರು ನಿರುದ್ಯೋಗ ಮತ್ತು ದಾರಿದ್ರ್ಯಕ್ಕೆ ತುತ್ತಾಗಿರುವುದರಿಂದ ಆದಷ್ಟು ಬೇಗನೆ ರಾಷ್ಟ್ರದ ಮುಂದಿರುವ ಸಮಸ್ಯೆಗಳನ್ನು ಬಿಡಿಸಬೇಕಾಗಿದೆಯೆಂದು ಹೇಳಬೇಕಾಗಿಲ್ಲ. ದೊಡ್ಡ ದೊಡ್ಡ ಕೈಗಾರಿಕೆಗಳಂತೆಯೇ ಗ್ರಾಮ ಕೈಗಾರಿಕೆಗಳನ್ನು ಸುಧಾರಿಸುವುದೂ ಅತ್ಯವಶ್ಯವಾಗಿದೆ. ದೆಹಲಿಯ ಪರಿಷತ್ತಿನಲ್ಲಿ ರಾಷ್ಟ್ರೀಯ ಔದ್ಯೋಗಿಕ ಯೋಜನೆಯೊಂದನ್ನು ತಯಾರಿಸಲು ಒಂದು ಸಮಿತಿಯು ನೇಮಿಸಲ್ಪಟ್ಟಿದೆ. ಭಾರತದ ಆರ್ಥಿಕ ಮತ್ತು ಇನ್ನಿತರ ಪರಿಸ್ಥಿತಿಗಳನ್ನು ಕೂಲಂಕಷವಾಗಿ ತಿಳಿದುಕೊಂಡು ಸಂಬಂಧಪಟ್ಟ ಸರಕಾರಗಳಿಗೆ ಅವುಗಳನ್ನೊಪ್ಪಿಸುವುದು ಈ ಸಮಿತಿಯ ಕೆಲಸವಾಗಿದೆ ಈ ಸಮಿತಿಯು ನಾಲ್ಕು ತಿಂಗಳೊಳಗೆ ಅಂತಹ ಯೋಜನೆಯೊಂದನ್ನು ಒಪ್ಪಿಸಬೇಕೆಂದಾಗಿದೆ. ಈ ವರದಿಯನ್ನು ಸ್ವೀಕರಿಸಿ ಅದನ್ನು ಅಖಿಲಭಾರತದ ಮುಂದಿಡುವ ಕರ್ತವ್ಯವನ್ನು ಅಖಿಲ ಭಾರತ ರಾಷ್ಟ್ರೀಯ ಔದ್ಯೋಗಿಕ ಕಮಿಷನು ವಹಿಸಿಕೊಂಡಿದೆ. ಇದಕ್ಕೆ ಕೇಂದ್ರ ಸರಕಾರದೊಡನೆ ಪ್ರತ್ಯಕ್ಷ ಸಂಬಂಧವಿಲ್ಲದಿದ್ದರೂ, ಪ್ರಾಂತಿಕ ಸರಕಾರ, ಸಂಸ್ಥಾನ, ವಣಿಕ ಸಂಘ, ಗ್ರಾಮ ಕೈಗಾರಿಕೆ ಸಂಘ ಮೊದಲಾದವುಗಳ ಪ್ರತಿನಿಧಿಗಳು ಈ ಕಮಿಷನಿನಲ್ಲಿರುವುದರಿಂದ ಇದರ ಸೂಚನೆಗಳು ಕೇಂದ್ರ ಸರಕಾರದಿಂದ ಕಡೆಗಣಿಸಲ್ಪಡುವುದೆಂದು ಹೇಳಲಾಗುವುದಿಲ್ಲ. ಈ ರಾಷ್ಟ್ರೀಯ ಕಮಿಷನಿನ ಸ್ಥಾಪನೆಯಿಂದಾಗಿ ಭಾರತೀಯರ ದೃಷ್ಟಿಯು ಔದ್ಯೋಗೀಕರಣದೆಡೆಗೆ ಹರಿಯುವಂತಾಗಿರುವುದು ಸಂತೋಷದ ಸಂಗತಿಯೆನ್ನಬೇಕು.

ನಮ್ಮಲ್ಲಿ ಬೇಕಾಗಿರುವ ಎಲ್ಲಾ ಹಸಿ ಪದಾರ್ಥಗಳು ದೊರಕುವುದಿದ್ದರೂ ಅದನ್ನು ಉಪಯೋಗಿಸುವರೆ ಅವಶ್ಯವಾದ ಯಂತ್ರಸಾಧನಗಳೂ, ಅಧಿಕಾರವೂ ಇಲ್ಲದಿರುವುದರಿಂದ ಕೇಂದ್ರ ಸರಕಾರವನ್ನು ಆದಷ್ಟು ಬೇಗನೆ ಭಾರತೀಯರು ಕೈವಶಪಡಿಸುವುದು ಅತ್ಯವಶ್ಯವಾಗಿದೆ. ಈ ಕೇಂದ್ರಾಧಿಕಾರವನ್ನು ನಮ್ಮಿಂದ ಸೆಳೆದೊಯ್ಯಲೆತ್ನಿಸುವ ಫೆಡರಲ್ ಯೋಜನೆಯನ್ನು ಅತ್ಯಂತ ಯಶಸ್ವಿಯಾಗಿ ಎದುರಿಸಿ ನಮ್ಮ ಸರ್ವತೋಮುಖ ಪ್ರಗತಿಯು ಬೀಗದ ಕೈಯಂತಿರುವ ಕೇಂದ್ರ ಸರಕಾರದಲ್ಲಿ ಜನತೆಯ ಚುನಾಯಿತ ಪ್ರತಿನಿಧಿಗಳೇ ಇರುವಂತೆ ಮಾಡುವುದು ಪ್ರತಿಯೊಬ್ಬ ಭಾರತೀಯನ ಕರ್ತವ್ಯವಾಗಿದೆ. ಈ ಔದ್ಯೋಗಿಕ ಯೋಜನೆಯು ನಮ್ಮಲ್ಲಿ ಹೊಸ ಹುರುಪನ್ನು ಹುಟ್ಟಿಸಿ ಇಷ್ಟರ ತನಕ ನುಡಿಯಲ್ಪಟ್ಟವುಗಳು ಮುಂದೆ ನಡೆಯಲ್ಲಿ ತೋರಿಸಲ್ಪಟ್ಟರೆ ರಾಷ್ಟ್ರವು ಪ್ರಗತಿಪಥದಲ್ಲಿ ಮುಂದಡಿಯಿಟ್ಟಂತಾಗುವುದು. ಔದ್ಯೋಗೀಕರಣ ಯೋಜನೆಯ ಯಶಸ್ಸು ಕೇಂದ್ರಾಧಿಕಾರವನ್ನು ಜನತೆಯು ಪ್ರತಿನಿಧಿಗಳು ವಹಿಸಿಕೊಳ್ಳುವುದರ ಮೇಲೆ ಹೊಂದಿಕೊಂಡಿದೆಯೆಂಬುದನ್ನು ನಾವು ನೆನಪಿನಲ್ಲಿಡಬೇಕಾಗಿದೆ.

# ಅವನು—ಅವಳು(?)

ಸರೋಜ ರೆಂಜೆಯ ಹೂ ಹೆಕ್ಕಲು ಬಂದಿದ್ದಳು ನಾನು ಹಲ್ಲುಜ್ಜಿಕೊಳ್ಳಲು ಮಾವಿನ ಎಲೆ ತರುವರೆ ಹೋಗಿದ್ದೆ. ನಾನು ಆ ಸ್ಥಳವನ್ನು ಸಮೀಪಿಸುತ್ತಿದ್ದಾಗ ಅವಳೊಮ್ಮೆ ತಲೆಯೆತ್ತಿ ನನ್ನನ್ನು ನೋಡಿದ್ದಳು. ನನ್ನ ಮಾವಿನ ಮರ ಮತ್ತು ಅವಳ ರೆಂಜೇಮರ ಜತೆಯಲ್ಲಿದ್ದವು. ನಾನು ಎಲೆಯನ್ನೆಟಕಲು ಉಂಗುಷ್ಠದಲ್ಲಿ ನಿಂತಿದ್ದೆ; ಅವಳು ಹೂ ಹೆಕ್ಕಲು ತೀರಾ ಬಗ್ಗಿದ್ದಳು. ನಮ್ಮೊಳಗೆ ಇಷ್ಟು ವ್ಯತ್ಯಾಸವುಂಟೆಂದು ನಾನು ಭಾವಿಸಿರಲಿಲ್ಲ! ಸರೋಜ ಮಾತನಾಡುವ ಲಕ್ಷಣ ತೋರದ್ದರಿಂದ ಎಲೆ ಹಿಡಕೊಂಡು ಅಲ್ಲಿಂದ ಹೊರಟೆ. 'ಹುಡುಗಿಗೇನೋ ಚಿಂತೆ ತಾಗಿರಬೇಕು. ನಾನು ಹೊಸಬನಂತೆ ಅವಳನ್ನು ಮಾತನಾಡಿಸದೆ ಬಂದೆನಲ್ಲಾ, ನಕ್ಕು ನಲಿದು ಮಾತಾಡುವ ಹುಡುಗಿಗೇನಾಯಿತು ಈ ದಿನ?' ಬರುವಾಗ ಇದೇ ಯೋಚನೆ. ಈ ಕಡೆಗೇ ನೋಡುತ್ತಾ ಮನೆಯಂಗಳದಲ್ಲಿ ನಿಂತಿದ್ದ ಸರೋಜನ ತಾಯಿ ನನ್ನನ್ನು ನೋಡಿದವಳು ಒಳಗೆ ಹೋಗಿಬಿಟ್ಟಳು.

* * *

ಪದ್ಧತಿಯಂತೆ ಆ ದಿನವೂ ಅಪರಾಹ್ನ ಸರೋಜನ ಮನೆಗೆ ಹೋದೆ. ಹೆಬ್ಬಾಗಿಲಲ್ಲಿ ನಿಂತಿದ್ದ ಹುಡುಗಿ ನನ್ನ ನೋಡಿ ಮನೆಯೊಳಗೆ ಹೋದಳು. ನನಗೆ ತುಂಬಾ ವ್ಯಸನವಾಯಿತು. ನಿನ್ನೆಯೂ ನಾನು ಹೀಗೆಯೇ ಹೋಗಿದ್ದೆ, ಸಿಗರೇಟಿನ ಹೊಗೆ ಕಂಡ ಸರೂ 'ಅಮ್ಮಾ, ಸ್ಟೀಮರು ಬಂತು' ಎಂದಳು. 'ಹುಡಗಿ ಏನನ್ನುತ್ತದೆ' ಎನ್ನುತ್ತಾ ತಾಯಿ ಹೊರಬಂದಳು; ನನ್ನನ್ನು ನೋಡಿ ಗಹಗಹಿಸಿ ನಕ್ಕು 'ನಿನಗೊಂದು ಹೊಸ ಹೆಸರು ಬಿತ್ತು' ಎಂದಳು. ಆಗ ನಾನು 'ಏನು ಸರೂ, ತಮಾಷೆ ಮಾಡಲು ಕಲಿತೆಯಾ?' ಅಂದದ್ದು; ಅವಳು ಲಜ್ಜೆಯಿಂದ ತಲೆ ಬಾಗಿದುದು — ಇವೆಲ್ಲಾ ನೆನಪಿಗೆ ಬಂದವು. ಮನೆಯೊಳಕ್ಕೆ ಹೋದೆ, ಒಳಗೆ ಯಾರೂ ಇರಲಿಲ್ಲ. ಕುರ್ಚಿಯ ಮೇಲೆ ಐದು ಮಿನಿಟು ಸುಮ್ಮಗೆ ಕುಳಿತೆ. ಸರೋಜನ ಸುಳಿವಿಲ್ಲ. ಅಂಗಳದಲ್ಲಿ ಶ್ರೀಧರನ ಸ್ವರ ಕೇಳಿಸಿತು, ಕರೆದೆ. ಹುಡುಗ ಓಡಿಬಂದ, ಬಂದವನೇ ನನ್ನ ತೆಕ್ಕೆಯೊಳಗೆ ಬಿದ್ದ. 'ನೋಡುವ, ನನ್ನ ಮುಖಕ್ಕೆ ಹೊಗೆ ಬರಲಿ' ಎಂದು ಕಾಡಹತ್ತಿದ. ನಾನು ಹುಡುಗನನ್ನು ಹಿಡಿದು ಇದಿರು ನಿಲ್ಲಿಸಿಕೊಂಡೆ. 'ನೀನು ಈಗ ಹೀಗೆ ನಿಂತುಕೊ, ಅಕ್ಕ ಒಳಗೆ ಏನು ಮಾಡುತಿದ್ದಾಳೆ?' ಎಂದೆ. 'ಹೀ ಹೀ ಅವಳು ಒಳಗಿದ್ದಾಳೆ; ಅವಳ ಮುಖಕ್ಕೆ ಹೊಗೆ ಬಿಟ್ಟರೆ ಅಮ್ಮ ಬೈಯ್ಯುತ್ತಾರೆ, ಹೂಂ ನಿನ್ನೆ ಬೈದಿದ್ದಾರೆ' ಎಂದು ಶ್ರೀಧರ ತೊದಲಿದ. ನನ್ನ ಕಣ್ಣನ್ನು ತೆರೆದಂತಾಯಿತು 'ಹುಡುಗನನ್ನು ಸಮೀಪಕ್ಕೆಳೆದುಕೊಂಡು 'ಅಮ್ಮ ಏನೆಂದು ಬೈದರು?' ಎಂದು ಕೇಳಿದೆ. 'ನೀವು ನಾನು, ಅಕ್ಕ ನಿನ್ನೆ ಕೋಣೆಯಲ್ಲಿದ್ದಾಗ ನೀವು ನನ್ನ ಮುಖಕ್ಕೊಮ್ಮೆ ಅಕ್ಕನ ಮುಖಕ್ಕೊಮ್ಮೆ ಹೊಗೆ ಬಿಟ್ಟರಲ್ಲ, ಅದಕ್ಕೇ ಅಮ್ಮ ಬೈದದ್ದು, ಹೂಂ ಹಾಗೆಯೆ ಆಗಬೇಕು ನಿಮಗೆ!' ಹುಡುಗ ಅಣಕಿಸಹತ್ತಿದ. 'ನನಗೆ ಹಾಗೆಯೇ ಆಗಲಿ, ತಾಯಿ ಅಕ್ಕನಿಗೆ ಬೈದಳಲ್ಲಾ, ಬೈಯ್ಯುವಾಗ ಏನೆಲ್ಲಾ ಹೇಳಿದಳು, ಹೇಳು ನೋಡೋಣ, ಅದು ಗೊತ್ತೇ ಇಲ್ಲ ಓಹೊ!' ಎಂದು ಬಾಲಕನ ಸ್ವಾಭಿಮಾನವನ್ನು ಕೆರಳಿಸಿದೆ. 'ನನಗೆ ಗೊತ್ತುಂಟಲ್ಲ' ಹುಡುಗ ಹೆಗ್ಗಳಿಕೆಯಿಂದ ಹೇಳಲಾರಂಭಿಸಿದ. 'ಅಮ್ಮ ಅಕ್ಕನೊಡನೆ — ನೀನಿನ್ನು ಅವನ ಬಳಿಗೆ ಹೋಗಬಾರದು ಎಂದಳು. ಅವ ನಿನ್ನ ಮುಖಕ್ಕೆ ಬೀಡಿಯ ಹೊಗೆ ಬಿಡುತ್ತಾನಲ್ಲ — ನೀನೇನು ಇನ್ನೂ ಸಣ್ಣ ಮಗುವೆ? ಮೊನ್ನೆ ಆಚೆಮನೆ ಸುಬ್ಬಕ್ಕ ಏನು ಹೇಳಿದಳು ಗೊತ್ತೇ ನಿನಗೆ? ಎಂದರು ಅಮ್ಮ' ಶ್ರೀಧರನ ಮಾತು ಕೇಳಿ ನನಗೆ ಅತಿರೇಕ ಸಂಕಟವಾಯಿತು. 'ಅದಕ್ಕೆ ಸರೋಜ ಏನೆಂದಳು?' ನಾನು ಕೇಳಿದೆ. "ನಾನೇನು ಮಾಡಿದೆ? ಅವರು ಶ್ರೀಧರನ ಮುಖಕ್ಕೆ ಹೊಗೆ ಬಿಟ್ಟರು, ಇವನ ಮೂಗು ಬಾಯಿ ತುಂಬಾ ಹೊಗೆ ಹೊಕ್ಕು ಕೆಮ್ಮಿದ; ಅದಕ್ಕೆ ನಾನು ಅವರೊಡನೆ 'ಮೂಗಿಗೆ ಹೊಗೆ ಬಿಡುವದೆ?' ಎಂದು ಸಿಟ್ಟುಗೊಂಡೆ. ನಿನ್ನ ತಮ್ಮನ ಮೂಗಿಗೇನಾಯಿತು, ಈ ಹೊಗೆಯೆಂದರೆ ಜರ್ಮನರ ವಿಷಗಾಳಿಯೆ? ಏನಾಗುತ್ತದೆ ನೋಡು—ಎಂದು ನನ್ನ ಮುಖಕ್ಕೊಮ್ಮೆ ಹಾಗೆಯೆ ಹೊಗೆ ಬಿಟ್ಟರು. ಅದರಲ್ಲೇನಾಯಿತೀಗ?' — ಎಂದು ಅಕ್ಕ ಹೇಳಿದಳು. ಅದಕ್ಕೆ ಅಮ್ಮ 'ಶ್ರೀಧರನ ಹಾಗೆ ನೀನೇನು ಗಂಡೊ? ನಿನಗೆ ಅಲ್ಲಿ ಏನು ಕೆಲಸವಿತ್ತು?' -ಎಂದು ಅಬ್ಬರಿಸಿದರು ಅಕ್ಕ ಇಡೀದಿನ ಅಳುತ್ತಾ ಕೂತಳು' ಶ್ರೀಧರ ಇಷ್ಟನ್ನೂ ಹೇಳಿದ. ನನಗೆ ಎದೆ ಭಾರವಾದಂತೆ ತೋರಿತು; ಹುಡುಗನ ಕೈ ಬಿಡಿಸಿಕೊಂಡು ಅಲ್ಲಿಂದೆದ್ದೆ

* * *

ನನ್ನ ಕಣ್ಣುಗಳು ತನ್ನಂತೆ ಒಳಕೋಣೆಯ ಬಾಗಿಲಿ

(೩೪ನೇ ಪುಟ ನೋಡಿರಿ)

ಬರೆದವರು: ಶ್ರೀ. ಕೆ. ಎಸ್. ರಾಮಕೃಷ್ಣ ಮೂರ್ತಿ --- ಶಿವಮೊಗ್ಗಾ

# ವಿಜ್ಞಾನ

ವಿಜ್ಞಾನ! ಹೌದು ವಿಜ್ಞಾನ, ಗಾಬರಿಬೇಡ. ಈ ನಾಸ್ತಿಕ ದೈವವು ಆಸ್ತಿಕರಾದ ನಿಮಗೇಕೆಂದು ಕೇಳುವಿರೇನು? ಹಾಗಲ್ಲ, ಇದರ ನಿಜಸ್ವರೂಪವರಿಯದೆ ದೂರುವ ಗೂಬೆಯತನ ಬೇಡ. ಸನಾತನ ಆಲದ ಮರಕ್ಕೆ ನೇತು ಹಾಕಿಕೊಳ್ಳುವ ಮುನ್ನ, ವಿಚಾರದ ಪ್ರಭೆಗೆ ಕಣ್ಣು ಬಿಚ್ಚುವ ಸಾಹಸಮಾಡಿ.

ವಿಜ್ಞಾನ, ನೀವಂದುಕೊಂಡಿರುವಂತೆ. ನರಕ ಕೂಪಕ್ಕೆಳೆಯುವ, ಅಜ್ಞಾನದ ಪಾಶವಲ್ಲ. ಸತ್ಯ ವಿಚಾರದೆಡೆಗೊಯ್ಯುವ ನಿಚ್ಚಣಿಕೆ. ಅಂಥರೆ ವಿಜ್ಞಾನವೆಂದರೇನು?

ಆದಿ, ಅಂತ್ಯಗಳ ಪರಿವೆಯಿಲ್ಲದಂತೆ ಮಾಡಿ ಆಹಾರ ತೃಷೆಗಳೆಂಬ ಕಟ್ಟನ್ನು ಕಟ್ಟಿ. ವಿಚಿತ್ರದಂತೆ ತೋರುವ ಈ ಜಗತ್ತಿನ ಮಧ್ಯರಂಗದೊಳಕ್ಕೆ ಜೀವವು ಬಂದಾಗಿನಿಂದ, ಈ ಎಲ್ಲವುಗಳ ಸತ್ಯಾರ್ಥವನ್ನು ಕಾಣುವ ಬಯಕೆ. ಜೀವದ ಮೇಲ್ಪಂತಸ್ತಿನ ಮಾನವನಲ್ಲಿ, ಬೆಳೆಯುತ್ತಾ ಬಂದಿದೆ.

ಹೀಗೆ ನಿಷ್ಕೃಷ್ಟತೆಯಿಂದ ಈ ಗುರಿಯನ್ನು ಮುಟ್ಟುವ ಪ್ರಯತ್ನದಲ್ಲಿ ವಿಜ್ಞಾನವೂ ಒಂದು ದಾರಿಯಾಗಿದೆ. ಅಂದರೆ ಈ ವಿಜ್ಞಾನದ ಅರ್ಥ ಇದರ ದೃಷ್ಟಿ, ರೀತಿ, ನೀತಿಕ್ರಮಗಳಲ್ಲಿ ಅಡಗಿದೆ.

‘‘ಯಥಾರ್ಥ ಜ್ಞಾನಾನುರಾಗವೇ” ಇದರ ಮೂಲ ಮಂತ್ರ. ಅಂದರೆಇದ್ದದ್ದನ್ನು ಇದ್ದಂತೆ ಕಾಣುವುದು, ಮತ್ತು ಪ್ರಕಾಶ ಪಡಿಸುವುದು ವಿಜ್ಞಾನದ ಮನೋಧರ್ಮ. ಅಯ್ಯೋ ಇದೇನು ಮಹಾ. ಎನ್ನಬಹುದು. ಆದರೆ ಈ ಇದ್ದದ್ದನ್ನು ಇದ್ದಂತೆ ಹೇಳಲು ಪ್ರಯತ್ನಿಸಿದಾಗ ಮಾತ್ರ ಅದರ ಕಷ್ಟಗೊತ್ತಾಗುವುದು.

ನಮ್ಮ ಮೂಗು ನೇರಕ್ಕೆ ನಾವು ಕಾಣುವುದು ನಮಗೆ ಹತ್ತಿ ಬಂದ ಚಾಳಿ. ನಮಗೆ ಬೇಕಾದುದನ್ನು ಇಟ್ಟುಕೊಂಡು ಬೇಡವಾದುದನ್ನು ಬಿಡುವುದು ನಮ್ಮಲ್ಲಿ ರಕ್ತಗತವಾಗಿದೆ. ಪಾಶ್ಚಾತ್ಯರು, ಮ್ಲೇಚ್ಛರು, ಅವರು ಭೌತಿಕವಾದಿಗಳು. ಆದ್ದರಿಂದ ಅವರಿಗೂ ಅವರ ವಿಜ್ಞಾನಕ್ಕೂ (ಭೌತಿಕ) ಬೆಂಕಿ ಬೀಳಲಿ, ಎಂದು ವಿಜ್ಞಾನವೆಂದರೇನು ಅದರಿಂದೇನೇನು ಸಾಧಕವಾಗಿದೆ ಎಂಬ ವಿವೇಚನೆಗೆ ಎಡೆಗೊಡದೆ ದೂರುವುದು ಮನೆ ಮಾತಾಗಿದೆ.

ಅಂದರೆ ಈ ಯಾವ ಅನ್ವೇಷಣನ, ಅತ್ಯನ್ವೇಷಣಗಳ ಬಲೆಗೂ ಬೀಳದೆ. ಕೇವಲ ಸತ್ಯವನ್ನೇ ಕಾಮಿಸುವ ಬಯಕೆ ಈ ವಿಜ್ಞಾನಿಯದು. ವಿಜ್ಞಾನಕ್ಕೆ ನಿಲುಕದ ವಿಷಯವೇ ಇಲ್ಲ. ಆದರೆ ಎಲ್ಲ ವಿಷಯಗಳಲ್ಲೂ ರುಜುವಾತಿರುವ ಸತ್ಯವನ್ನು ಪೂರ್ಣವಾಗಿ ಕಾಣಬೇಕೆನ್ನುವ ಬಯಕೆ ಮಾತ್ರ ವಿಜ್ಞಾನದ ಮನೋಧರ್ಮ.

ಹೀಗೆ ಸಮಗ್ರವಾಗಿ, ಯಥಾರ್ಥ ಜ್ಞಾನಾನುರಾಗದಿಂದ, ವಿಶ್ವದ ಗುಟ್ಟನ್ನು ಬಿಡಿಸಲೆತ್ನಿಸುವಾಗ, ಒಟ್ಟಾಗಿ ಉಂಡೆಯಾಗಿ ಪರಿಶೀಲಿಸಲು ಸಾಧ್ಯವಾಗದೆ ಇರುವುದರಿಂದ, ವಿಭಜಿಸಿ ತನ್ನ ಕಾರ್ಯಕ್ರಮವನ್ನು ಮುಂದುವರಿಸುವ ಪ್ರಯತ್ನವನ್ನು ಮಾಡಿತು. ಭೌತವಿಶ್ವವನ್ನು ಆತ್ಮವೆಂಬುದರಿಂದ ಬೇರ್ಪಡಿಸಿತು. ಭೌತವಿಶ್ವದಲ್ಲೂ, ಜಡ, ಜೀವಗಳು ಬೇರೆಯಾದವು. ಜೀವಿಗಳಲ್ಲೂ ಸಸ್ಯ, ಪ್ರಾಣಿಗಳೆಂದು ವಿಭಾಗ. ಹೀಗೆ ಈ ವಿಭಜನಾ ಕ್ರಮ ಮುಂದುವರಿಯಿತು. ಮುಂದುವರಿಯುತ್ತಿದೆ, ಇದರಿಂದ ದಿವಸಕ್ಕೆ ಒಂದೊಂದು ಹೊಸ ಶಾಸ್ತ್ರದ ಹೆಸರು ಕೇಳುತ್ತಿದ್ದೇವೆ ಅಂದಿನಿಂದ ವಿಭಜನಾ ಕ್ರಮವು, ವಿಜ್ಞಾನದ ರೀತಿಯಾಯಿತು.

ಆದರೆ ಈ ವಿಭಜನೆಯಂತೆ, ಮುಂದುವರಿದರೆ ಕೊನೆ ಮುಟ್ಟುವುದೆಲ್ಲಿ? ಅದಕ್ಕಾಗಿಯೇ, ವಿಭಜನೆ, ಪರಿಶೀಲಿಸಿ ಒಂದೇ ರೀತಿಯಾಗಿರುವ ವಿಚಾರಗಳ ಪರಸ್ಪರ ಸಂಬಂಧಗಳನ್ನು ಸಾಮಾನ್ಯ ಸಿದ್ಧಾಂತಗಳನ್ನಾಗಿ ಏರ್ಪಡಿಸುವುದೇ, ಈ ವಿಜ್ಞಾನದ ವೈಶಿಷ್ಟ್ಯವಾಗಿದೆ.

ಪ್ರಕೃತಿಯಲ್ಲಿ ಎಲ್ಲವೂ ಒಂದಕ್ಕೊಂದು ಹಾಸುಹೊಕ್ಕುಗಳಂತೆ ಹೆಣೆದುಕೊಂಡಿವೆ. ದುಂಬಿಗಳಿಗೂ, ಹೂವು ಕಾಯಾಗುವುದಕ್ಕೂ, ಎರೆಹುಳುವಿಗೂ ಜನಗಳ ಆಹಾರಕ್ಕೂ ಯಾರು ತಾನೆ ಸಂಬಂಧವನ್ನು ಕಲ್ಪಿಸಿಯಾರು? ಆದರೆ ಈ ವಿಭಜನೆ ಮತ್ತು ಪರಸ್ಪರ ಸಂಬಂಧಗಳ ಅನ್ವೇಷಣದಿಂದ ಈ ಜ್ಞಾನವೆಲ್ಲಾ ಬಯಲಾಗುತ್ತಿದೆ.

ಯಥಾರ್ಥ ಜ್ಞಾನಾನುರಾಗವು ಸಾಮಾನ್ಯವಾಗಿ ಎಲ್ಲಾ ಶಾಸ್ತ್ರಗಳ ಧರ್ಮವೇ. ಉದಾಹರಣೆಗಾಗಿ ಇತಿಹಾಸ ತತ್ವಗಳನ್ನು ಹೇಳಬಹುದು. ಆದ್ದರಿಂದ ವಿಜ್ಞಾನವನ್ನು ವಿಭಜನೆ, ಒಂದೇ ರೀತಿಯ ವಿಚಾರಗಳ ಪರಸ್ಪರ ಸಂಬಂಧವನ್ನು ಸಾಮಾನ್ಯ ಸಿದ್ಧಾಂತಗಳನ್ನಾಗಿ ಏರ್ಪಡಿಸುವ ಶಾಸ್ತ್ರ ಎಂಬುದಾಗಿ ಕರೆಯಬಹುದು.

ಇಂದು ವಿಜ್ಞಾನವು ಅಗಾಧವಾಗಿ ಬೆಳೆದಿದೆ. ಆದರೆ ಇದರಿಂದ ಜನಾಂಗಕ್ಕಾಗಿರುವ ಉಪಯೋಗವೇನು? ವಿಶ್ವಶಾಂತಿಯನ್ನು ಕೆಡಿಸಿದೆ. ಸಮಾಜದ ಕಟ್ಟನ್ನು ಸಡಿಲಿಸಿ ಹೊಲಸು ಮಾಡಿದೆ. ಮತದ ಮೂಲಮಂತ್ರಗಳನ್ನೂ ದೇವರನ್ನೂ ನಿಂದಿಸಿದೆ ಎನ್ನುವ ಮಾತು ಎಲ್ಲೆಲ್ಲೂ ಕೇಳಿ ಬರುತ್ತಿದೆ.

ಮೊದಲನೆಯದಾಗಿ ವಿಜ್ಞಾನವು ನಾವು ಬಯಸಿದಂತೆ ಅಗಾಧವಾಗಿ ಬೆಳೆದಿಲ್ಲ. ಅದರ ಮೊದಲ ಮೆಟ್ಟಲನ್ನೂ ಸಹಾ ನಾವಿನ್ನೂ ಏರಿಲ್ಲ ಎಂಬುದಾಗಿ ವಿಜ್ಞಾನಿಗಳು ಹೇಳುತ್ತಾರೆ. ಇಂದು ಸಾಧಕವಾಗಿರುವ ಯಂತ್ರಗಳಲ್ಲಿ ಕೆಲವು ವಿಜ್ಞಾನದ ವಿಭಜನಾಕ್ರಮವನ್ನು ಸೂಕ್ಷ್ಮವಾಗಿ ನೆರವೇರಿಸಲನುಕೂಲವಾಗುವಂತೆ ಮಾಡಿಕೊಂಡ ಕೈವಾರಗಳಾಗಿವೆ. ಈ ಯಂತ್ರಗಳೆಲ್ಲ ಪ್ರಕೃತಿ ಶಕ್ತಿಯ ಗುಟ್ಟು ಅರಿತಾಗ ಅದನ್ನು ತಮ್ಮ ಸ್ವಾಧೀನಪಡಿಸಿಕೊಂಡು ತಮ್ಮನುಕೂಲಕ್ಕನುವಾಗುವಂತೆ ಮಾಡಿಕೊಂಡ ಸಾಧನಗಳಾಗಿವೆ.

ತಾತ್ವಿಕರು, ತಪಂಬಡುತ್ತಿದ್ದಾಗ. ಕಂಡುಕೊಂಡ ಆಧ್ಯಾತ್ಮ ವಿದ್ಯೆಯನ್ನು ಸಾಧಿಸುತ್ತಿದ್ದಾಗ, ಲಭಿತ ಮನಃಶಕ್ತಿಯ ಗುಟ್ಟನ್ನು, ಮಾಯ, ಮಂತ್ರ, ಹಿಪ್ನೋಟಿಸಂ ಇತ್ಯಾದಿ ಅನ್ವಿತ ವಿದ್ಯೆಗಳನ್ನಾಗಿ ಹೊರಗೆಡವಿದಂತೆ, ಈ ವೈಜ್ಞಾನಿಕರ ಯಂತ್ರಗಳೂ ವಿಜ್ಞಾನ ಶಕ್ತಿಯ ಅನ್ವಿತಗಳಾಗಿವೆ ಅಂದರೆ, ವಿಭಜಿಸಿ, ಪರಿಶೀಲಿಸಿ ಸಂಬಂಧಗಳನ್ನು ಸಮನ್ವಯಗೊಳಿಸಿ ಸಿದ್ಧಾಂತಿಸುವ, ಅಂದರೆ ಒಳಗುಟ್ಟನ್ನು ಬಿಡಿಸುವದಕ್ಕೆ ಶುದ್ಧ ವಿಜ್ಞಾನವೆಂತಲೂ; ಈ ಶಕ್ತಿಯನ್ನು ಪ್ರಯೋಜನಾನುಕೂಲಕ್ಕಾಗಿ ಅನ್ವಯಿಸಿಕೊಳ್ಳುವುದಕ್ಕೆ ಅನ್ವಿತ ವಿಜ್ಞಾನವೆಂತಲೂ ರೂಢಿಯಾಗಿದೆ. ಇದು ವಿಜ್ಞಾನಾರ್ಥವನ್ನು ಸ್ಪಷ್ಟಪಡಿಸುವುದು.

ಈಗ ನಡೆಯುತ್ತಿರುವ ಯುದ್ಧ, ಅನಾಚಾರ, ಸಮಾಜದ ಹೊಲಸುಗಳಿಗೆಲ್ಲಾ ಕಾರಣರು ವಿಜ್ಞಾನಿಗಳಲ್ಲ. ಆದರೆ ಈ ವಿಜ್ಞಾನಿಗಳನ್ನು ಸ್ವಾರ್ಥಕ್ಕಾಗಿ ಉಪಯೋಗಿಸುವ ರಾಜಕಾರಣರ, ವರ್ತಕರ ಕೈಚಳಕವಾಗಿದೆ ಎನ್ನುವುದು ಸ್ಫುಟವಾದಂತಾಯಿತು.

ವಿಜ್ಞಾನವು ಮತದ ಮೂಲ ಕಟ್ಟನ್ನು ಸಡಿಲಿಸುತ್ತಿಲ್ಲ. ಕೇವಲ ತನ್ನ ಕಾರ್ಯಕ್ರಮವನ್ನು ಸರಿಯಾದ ರೀತಿಯಲ್ಲಿ ನಿರ್ವಹಿಸುತ್ತಿದೆ. ತನ್ನ ಮೂಲಮಂತ್ರದಂತೆ ಯಥಾರ್ಥ ಜ್ಞಾನುರಾಗದಿಂದ, ವಿಚಾರವನ್ನು ವಿಭಜಿಸಿ ಪರಿಶೀಲಿಸುತ್ತದೆ.


# ನೀವು ಬಲ್ಲಿರಾ?

**ಉಪ್ಪಿಗಿಂತ ರುಚಿಯಿಲ್ಲ,**
**ಪುಸ್ತಕಕ್ಕಿಂತ ಬಂಧುವಿಲ್ಲ**
**ಎಂಬುದನ್ನು?**

ಕಳೆದ ಐದಾರು ವರ್ಷಗಳಿಂದ ಕನ್ನಡದ ಸೇವೆಯನ್ನು ಅವಿಶ್ರಾಂತವಾಗಿ ಮಾಡುತ್ತ ಬಂದಿರುವ ಉಡುಪಿ ಕಿರಿಯರ ಪ್ರಪಂಚದವರು ಪ್ರಕಟಿಸಿದ ಕನ್ನಡಿಗರೆಲ್ಲರ ಪ್ರಶಂಸೆಗೆ ಪಾತ್ರವಾಗಿ ಕರ್ನಾಟಕದಲ್ಲೆಲ್ಲಾ ವಿಶಾಲವಾಗಿ ಪ್ರಚಾರವಾಗಿ, ಎರಡೆರಡು ಮೂರು ಮೂರು ಬಾರಿ ಮುದ್ರಣಗೊಂಡ

## ಪುಸ್ತಕಗಳು ಯಾವುವು ಬಲ್ಲಿರಾ?

### ಸಂಶಯ ಪಿಶಾಚಿ
ವಿಷಾದಾಂತ ಸಾಮಾಜಿಕ ನಾಟಕ
ತೃತೀಯ ಮುದ್ರಣ ಬೆಲೆ ೦ ೬ ೦

### ನಾಡ ಕತೆಗಳು
ಆರು ಸಣ್ಣ ಕತೆಗಳ. ಚಿಕ್ಕ ಪುಸ್ತಕ.
ಎರಡನೆ ಮುದ್ರಣ ಬೆಲೆ ೦ ೨ ೦

### ಮುಂದಿನ ದೇವರು
ವಿಚಾರ ಕ್ರಾಂತಿಯ ನ್ಯಾಸ.
ಪುನರ್ಮುದ್ರಣ ಬೆಲೆ ೦ ೨ ೦

### ಸನ್ಯಾಸಿಯ ಸೋಗಿನಲ್ಲಿ
ಏನೆಲ್ಲಾ ಆಗುತ್ತದೆ ಎಂಬುದನ್ನು ಓದಿಯೇ ತಿಳಿಯಬೇಕಾದ ಸಾಮಾಜಿಕ ಕಾದಂಬರಿ.
ಪುನರ್ಮುದ್ರಣ ಬೆಲೆ ೦ ೮ ೦

### ಸಂದಾದೀಪ
೧೧ ಚಿಕ್ಕ ಕತೆಗಳ ಸಂಗ್ರಹ.
ಬೆಲೆ ೦ ೮ ೦

### ದೇಶಭಕ್ತ
ದೇಶಭಕ್ತಿಯನ್ನು ಉದ್ದೀಪನಗೊಳಿಸುವ ನವೀನ ಸಾಮಾಜಿಕ ನಾಟಕ ಮೈಸೂರಿನವರು ಅತ್ಯವಶ್ಯವಾಗಿ ಓದಬೇಕು.
ಬೆಲೆ ೦ ೧೦ ೦

### ಇತರ ಪುಸ್ತಕಗಳು
ನಮ್ಮ ಉಡುಪಿ ೦ ೫ ೦; ಅಡ್ಡ ಬೆಳೆದ ಗಿಡ್ಡಿಯ ಮದುವೆ ೦ ೧ ೦; ಮುದುಕನ ಹೆಂಡ್ತಿ ಥಕಥೈ ರಾಧೆ ೦ ೧ ೦; ಆರೋಗ್ಯ ಪ್ರತಾಪ ೦ ೮ ೦; ಬಾಲವಾಙ್ಮಯ ೦ ೩ ೦; ವತ್ಸಲಾ ೦ ೭ ೩. ಆನಂದ ಅಥವಾ ಮನೆಯ ಅಳಿಯ ೦ ೮ ೦

## ನವಭಾರತ ಪುಸ್ತಕ ಭಂಡಾರ
**ಪ್ರಸಿದ್ಧ ಪುಸ್ತಕವ್ಯಾಪಾರಿಗಳು, ಉಡುಪಿ.**

ಸತ್ಯಕಾಮಿಯಾದ್ದರಿಂದ, ಗಟ್ಟಿ (ನಿಜ) ವಿಚಾರಗಳನ್ನು ಇಟ್ಟುಕೊಂಡು, ಸುಳ್ಳು ವಿಚಾರಗಳನ್ನು ತಳ್ಳುತ್ತಿದೆ.

ವಿಜ್ಞಾನವು ಒಟ್ಟಿನಲ್ಲಿ ಪರಮಪವಿತ್ರವಾದುದು. ಅದು ಜ್ಞಾನವೂ ಹೌದು, ಶಕ್ತಿಯೂ ಹೌದು. ಆದರೆ ಅದನ್ನೂ ಪರಿಪೂರ್ಣವೆಂದು ಕರೆಯಲಾಗುವುದಿಲ್ಲ. ಅದು ಅಂಶದೃಷ್ಟ ಆದರೆ ಸತ್ಯದ ಪ್ರಭೆಯೊಡನೆ ನಮ್ಮನ್ನು ಕರೆದೊಯ್ಯುತ್ತಿದೆ. ಪ್ರಭೆ ಕಣ್ಣು ಕೋರೈಸಬಹುದೇನೊ ಎಂಬುದರಿಂದ ಕಣ್ಣು ಕಟ್ಟಿಕೊಳ್ಳಬಾರದು.

ಮೇಲೆ ಹೇಳಿದಂತೆ ವಿಜ್ಞಾನವು, ನಮ್ಮ ಧ್ಯೇಯ ಸಾಧನೆಯ ದಾರಿ, ಮಂತ್ರ. ಅಂದರೆ ಅದು ನಮ್ಮ ಕೈವಾರವೇ ಹೊರತು, ನಮ್ಮ ಸರ್ವಸ್ವವಲ್ಲ. ಹೀಗೆ ನಾವು ಮತವನ್ನೂ, ತತ್ವವನ್ನೂ, ತಲೆಯನ್ನೂ ಬಳಸಲೆತ್ನಿಸುತ್ತಿರುತ್ತೇವೆ.

ಯಾವುದರಲ್ಲೂ ಕೃತ ಕೃತ್ಯತೆಯು ಸರ್ವರಿಗೂ ಸಿದ್ಧವಾಗಿಲ್ಲ. ಯಾವುದೊಂದರಿಂದ ಸಿದ್ಧವಾಗುತ್ತದೆಂಬ ಧೈರ್ಯವಿಲ್ಲ. ಆದುದರಿಂದ ಈ ಎಲ್ಲವುಗಳ ಸಮನ್ವಯವೇ ನಮಗೆ ಬೇಕಾದುದು. ಯಾವುದೂ ಹೆಚ್ಚು ಯಾವುದೂ ಕಡಿಮೆಯಲ್ಲ.

ವಿಜ್ಞಾನವೂ ಮತದಂತೆ ಪವಿತ್ರವೆಂದು ಭಾವಿಸಬೇಕು. ತತ್ವದಂತೆ ಅಭ್ಯಾಸಿಸಬೇಕು. ಕಲೆಯಂತೆ ಸರ್ವಾದರಣೀಯತೆಯನ್ನು ಪಡೆಯಬೇಕು. ವಿಜ್ಞಾನವನ್ನು ಕಡೆಗಣಿಸಿರುವವರಿಗೆ ತಿಳಿಸುವ ಮಾತು. ಅಂದೆ ಅವರಲ್ಲಿ ನೈಜ ಸಾರಸ್ವತ ಸತ್ಯ ಭಾವನೆಯು ಪ್ರಚುರವಾದೀತೆಂದು ಬಗೆಯಬಹುದು.

---

(೩೧ನೆ ಪುಟದಿಂದ ಮುಂದರಿದುದು)

ನೆಡೆಗೆ ಹೊರಳಿದವು- ತಲೆತಗ್ಗಿಸಿಕೊಂಡು ಸರೋಜ ನಿಂತಿದ್ದಳು. ಆ ವರೆಗೂ ಇರದ ನಾಚಿಕೆ ಮತ್ತು ವೇದನೆಯ ಚಿಹ್ನೆಯು ಇಂದು ಅವಳ ಮುಖದಲ್ಲಿತ್ತು. ಶ್ರೀಧರ ಓಡಿಬಂದು ನನ್ನ ಕೈ ಹಿಡಕೊಂಡ. ಆದರೆ ಸರೋಜ ನನ್ನನ್ನೊಮ್ಮೆ ದೀನ ದೃಷ್ಟಿಯಿಂದ ನೋಡಿ ಒಳಗೆ ಹೋಗಿಬಿಟ್ಟಳು. ಸರೋಜ ಮತ್ತು ಶ್ರೀಧರರೊಳಗೆ ವ್ಯತ್ಯಾಸವಿದೆಯೆಂದು ನನಗೂ ಅವಳಿಗೂ ಗೊತ್ತಾದುದು ಆ ದಿನವೆ! ನಾನು ಅವರ ಮನೆಗೆ ಕೊನೆಯ ಸಲ ಹೋದುದೂ ಆ ದಿನವೆ.

ಮು. ವಿ.


# BEST—CHEAP—AND RELIABLE.

Our 'M' Brand **PURE MUSK**, packed in 1/96th TOLA bottles, price Rs. 4—8—0 per dozen (F. O. R. any station) is a boon to humanity and can be used in all cases of emergency. Highly appreciated and recommended by Doctors, Hakims & Vaids.

Our 'M' Brand **KASTURI PILLS** packed in bottles containing 300 Pills costing annas three (F. O. R. any station) is the best tonic of the day and is highly recommended in cases of impotency, nervous debility and all other diseases of heart weakness.

Our **KRISHANA BRAND HINGOO** packed in 3 tola packets costing 1-14-0 per dozen (F. O. R. any station) is best, fragrant for daily uses. Highly recommended by all who use it.

We also supply best Musk, Saffron, Silver and Gold leaves, Pachakarpur, Goulochin etc. Best Crystal SHILAJIT recommended by all Vaids, Doctors and guaranteed to be pure and best by all who have once used it, packed in beautiful packets of tola one each costing 0—8—0 per bottle F. O. R.

**ALL OTHER MEDICINAL ARTICLES AND JODI BATHIS CAN ALSO BE HAD. ONCE TRIED ALWAYS PATRONISED.**

*PLEASE ORDER ONCE AND OBLIGE.*

**S. D. METHA & CO.,** *(REGISTERED)*

**Purani Kanak Mandi, AMRITSAR.**



ಉಪಾಧ್ಯಾಯ— ಕ್ಲಾಸಿನಲ್ಲಿ ಯಾರೂ ಏನನ್ನೂ ತಿನ್ನಬಾರದು.

ವಿದ್ಯಾರ್ಥಿ—ಪೆಟ್ಟನ್ನು ಕೂಡಾ?

ೲ ೲ ೲ

ಉಪಾಧ್ಯಾಯರು ಭೂಗೋಲ ಠ ಮಾಡಿ "ತೆಂಗಿನಕಾಯಿ ಎಲ್ಲಿ ಶೇಷ" ಎಂದು ಕೇಳಿದರು.

"ಮರದಲ್ಲಿ ಸಾರ್" ಎಂದೊಬ್ಬ ಧ್ಯಾರ್ಥಿಯ ಉತ್ತರ.

ೲ ೲ ೲ

ರಾಮು—ಅವರ ಮನೆಯಲ್ಲಿ ಗ್ರಾಮಫೋನ್ ಇಟ್ಟಿದ್ದಾರೆ ಳೋಣ ಬಾರೊ.

ಶ್ಯಾಮು—ಆಗಲೆ ಕೇಳಿದೆ ಯಾರಾಯ. ಕೊಡೋದಿಲ್ಲಂತ ೇಳಿದ್ರು.

ೲ ೲ ೲ

ವ್ಯಾಪಾರಿ—ಹಲ್ಲುಪುಡಿ ಬೇಕೇ, ಲ್ಲುಪುಡಿ.

ಬೀದಿಹೋಕ—ಯಾರ ಹಲ್ಲು ಡಿಯಯ್ಯಾ?

ವ್ಯಾಪಾರಿ - ಪಂಡಿತರದು.

ಬೀದಿಹೋಕ—ಪಾಪ, ಅವರ ಲ್ಲು ಯಾಕಯ್ಯಾ ಪುಡಿಮಾಡಿದಿ. ವರ ಹಲ್ಲಿನ ಪುಡಿಗೆ ದುಡ್ಡಾದರೂ ಡುವುದು ಯಾರು?

ೲ ೲ ೲ

ಉಪಾಧ್ಯಾಯ—ಉಪ್ಪು ಸಾಗರದಲ್ಲಲ್ಲದೆ ಬೇರೆಲ್ಲಿ ಸಿಗುತ್ತದೋ?

ಹುಡುಗ—ರಾಮದಾಸ ಪೈಗಳ ಅಂಗಡಿಯಲ್ಲಿ.

ಉಪಾಧ್ಯಾಯ—ಕತ್ತೆ.

ಹುಡುಗ— (ಆಶ್ಚರ್ಯದಿಂದ) ಹೌದು ಸಾರ್, ನಿನ್ನೆ ನಾನು ಏಳು ಸೇರು ಮನೆಗೆ ಕೊಂಡುಹೋಗಿದ್ದೇನೆ

ೲ ೲ ೲ

"ಲೀಲೂಗೆ ಕಾಂಪಿಟೇಷನಿನಲ್ಲಿ ಏನು ಬಹುಮಾನ ಬಂತೊ?"

"ಒಂದು ಕ್ಷೌರಕತ್ತಿ?"

## = ವಚನಾಮೃತ =

'ನಮ್ಮ ದೇಶದಿ ನೇಯ್ದ ಬಟ್ಟೆಯೆ ನಮ್ಮ ದೇಹಕೆ ಭೂಷಣವು'

.......

'ಲೀನನಾಗಬೇಕು. ಆದರೆ ದುಡ್ಡು ಬಿಡಬಾರದು'

........

'ಅಭಿಮಾನ ಇರಬೇಕು, ಆದರೆ ಇತರರೆದುರು ಮಾತ್ರ'

......

'ರಾಷ್ಟ್ರಾಭಿಮಾನವೇ ಸ್ವಾರ್ಥಾಭಿಮಾನವು'

......

'ಭಕ್ತಿಸಹಿತವಾದ ಪ್ರಾರ್ಥನೆಯು ನಿರುದ್ಯೋಗಿಯ ಕೆಲಸ'

........

'ಅಹಿಂಸೆಯನ್ನು ಅಧೈರ್ಯರೇ ಆಚರಿಸಬಲ್ಲರು'

........

'ಸಹಾಯಶೂನ್ಯರ ಸೇವೆ ಮಾಡುವುದು ಹುಚ್ಚು. ಕಾರಣ ಹಾಗೆ ಮಾಡುವವನೆ ಸಹಾಯ ಶೂನ್ಯನಾಗುತ್ತಾನೆ'

.......

'ಸಮಯಕ್ಕೆ ಬಾರದ ಮಡದಿ ಕೇವಲ ಸೂಳೆ!'

........

'ಜನಾಂಗಗಳ ಚರಿತ್ರೆಯೆಂದರೆ ಕೇವಲ ಹೊಡೆದಾಟಗಳ ಸಮೂಹ'

........

'ನಾನು ನೀನು ಇತ್ಯಾದಿ ಭಾವನೆಯು ಸಂಪತ್ತಿನ ತೌರುಮನೆಯು'

......

.......

'ಅತಿವ್ಯಯದಿಂದ ಕೀರ್ತಿ ಸಿಗುತ್ತದೆ'

......

'ಅಹಂಕಾರವಿಲ್ಲದವನು ಮರಕ್ಕೆ ಸಮಾನನು'

ತುಳುನಾಡ್ ತಿಲಕ ಪಂಚಾಂಗ'ದಲ್ಲಿ ಜಾಹಿರಾತು ಕೊಡಿರಿ

# ಜೆಕೋಸ್ಲೋವೇಕಿಯುವನ್ನು ಕತ್ತರಿಸಿ ಹಿಟ್ಲರನ ಬಾಯಿಗಿಟ್ಟರು!

## ಆಂಗ್ಲೋ-ಫ್ರೆಂಚರು ಕರುವನ್ನು ಕೊಂದು ಕಾಗೆಗೆ ದಾನಕೊಟ್ಟರು!

## ಯುದ್ಧದ ಕಾರ್ಮೋಡ ಸದ್ಯಕ್ಕೆ ಚೆದರಿತು



ಹಿಟ್ಲರ್ ಮಹಾಶಯ

ಅಕ್ಟೋಬರ್ ೧ನೇ ತಾರೀಕಿನೊಳಗೆ ಸುಡೆಟನ್ ಭಾಗವನ್ನು ಪ್ರತಿಮಾತಿಲ್ಲದೆ ಜರ್ಮನಿಗೆ ಬಿಟ್ಟುಕೊಟ್ಟರಾಯಿತು; ಇಲ್ಲವಾದರೆ ಅದನ್ನು ಆಕ್ರಮಿಸಿಯೇ ಸಿದ್ಧವೆಂದು ಹಿಟ್ಲರನು ಫಣತೊಟ್ಟಿದ್ದನಷ್ಟೆ. ಬ್ರಿಟಿಷ್ ಪ್ರಧಾನ ಮಂತ್ರಿ ಸರ್. ನೆವಿಲ್. ಚೆಂಬರ್ಲೆನರು- ಎರಡು



ಸ್ಯುಡೇಟನ್ ಜರ್ಮನರ ಕಮಿಶನರ್
**ಹೆನ್ಲಿನ್**

ಸಲ ಜರ್ಮನಿಗೆ ಹಾರಿ ನಿರಾಶರಾಗಿ ಹಿಂದಿರುಗಿ ಬಂದವರು .-ಹಿಟ್ಲರನನ್ನು ಪಂಚಾಯತಿಕೆಗೆ ಆಹ್ವಾನಿಸಿ ಕೊನೆಯ ವಿನಂತಿಯನ್ನು ಮಾಡಿಕೊಂಡರು. ಹಾಗೆಯೇ ಹಿಟ್ಲರನ ಬೆಂಬಲಕ್ಕಿದ್ದ ಮುಸಲೋನಿಗೆ ಶಾಂತಿಸ್ಥಾಪನೆಗಾಗಿ ಆಗ್ರಹದ ಪತ್ರ ಬರೆದರು. ಅಮೇರಿಕದ ಪ್ರೆಸಿಡೆಂಟ್ ರೂಸ್‌ವೆಲ್ಟರು ಮೇಲಿಂದ ಮೇಲೆ ಹಿಟ್ಲರನನ್ನು ಶಾಂತಿ ಸ್ಥಾಪನೆಗಾಗಿ ಕೇಳಿಕೊಂಡರು. ಆದರೆ ಹಿಟ್ಲರನು ಎಲ್ಲವನ್ನೂ ಧಿಕ್ಕರಿಸಿ ಮುಂದೆ ನುಗ್ಗುವಂತೆ ಕಂಡು ಬಂತು.

### ಬ್ರಿಟಿಷ್ ನೀತಿ.

ಬ್ರಿಟಿಷ್ ಪಾರ್ಲಿಮೆಂಟು ಕಳೆದ ತಾ. ೨೮ರಲ್ಲಿ ಸೇರಿದಾಗ ಮಿ. ಚೆಂಬರ್ಲೆನರು ಜೆಕ್—ಜರ್ಮನಿ ಸಮಸ್ಯೆಯ ಕುರಿತು ಭಾಷಣವಿತ್ತರು. 'ಒಂದು ಸಣ್ಣ ರಾಷ್ಟ್ರದ ಮೇಲೆ ನಮಗೆಷ್ಟೇ ಸಹಾನುಭೂತಿಯಿದ್ದರೂ, ಮಹಾಯುದ್ಧದಂತಹ ಗಂಡಾಂತರವನ್ನು ಅಷ್ಟು ಸಣ್ಣ ವಿಷಯಕ್ಕಾಗಿ ಆಮಂತ್ರಿಸಲು ಸಾಧ್ಯವಿಲ್ಲ. ನಮಗಾವ ಪರಿಚಯವೂ ಇಲ್ಲದ ದೂರದ ಪರಕೀಯರಿಗಾಗಿ ಇಡೀ ಸಾಮ್ರಾಜ್ಯವನ್ನು ಯುದ್ಧಕ್ಕೆಳೆಯುವದೆಂದರೆ ಬಹು ದುಃಖದ ಸಂಗತಿ. ಕೊನೆಯ ಮಿನಿಟಿನ ವರೆಗೂ ಸಂಧಾನದ ಆಶೆಯಿದ್ದೇ ಇದೆ'-ಇದು ಚೆಂಬರ್ಲೆನರ ಭಾಷಣದಲ್ಲಿ ಹೊಳೆದ ಬ್ರಿಟಿಷರ ಧೋರಣೆ! ಬ್ರಿಟಿಷ್ ಮುಖ್ಯ ಮಂತ್ರಿಗಳು ಭಾಷಣ ಮಾಡುತ್ತಿದ್ದಾಗಲೇ ಅವರಿಗೆ ಹಿಟ್ಲರನ ಆಮಂತ್ರಣ ಬಂತೆಂದು ತಿಳಿದು ಬರುತ್ತದೆ. ಚೆಂಬರ್ಲೆನರ ವಿನಂತಿಯನ್ನು ಮನ್ನಿಸಿ ಮುಸಲೋನಿಯು ಹಿಟ್ಲರನಿಗೆ ತುಸು ತಡೆಯಬೇಕೆಂದು ತಿಳಿಸಿದನೆಂದೂ, ಹಿಟ್ಲರನು ಆದ ಕ್ಷೊಪ್ಪಿ, ಇಂಗ್ಲೆಂಡು, ಫ್ರಾನ್ಸು, ಇಟಲಿಯನ್ನು, ಮರುದಿನವೇ ಮ್ಯುನಿಚಿಗೆ ಬರುವಂತೆ

ಆ ಮಂತ್ರಿಸಿರುವನೆಂದೂ ಚೆಂಬರ್ಲೇನರು ಭಾಷಣಾವಸರವಲ್ಲಿ ತಿಳಿಸಿದಾಗ ಪಾರ್ಲಿಮೆಂಟು ಉತ್ಸಾಹಾವೇಗದಿಂದ ತುಂಬಿ ಹೋಯಿತು. ಮುಸಲನಿಯು, ಇಟಲಿಯಲ್ಲಿ ಸಾಮೂಹಿಕ ಸೈನ್ಯ ಸಂಗ್ರಹದ ಆಜ್ಞಾಪತ್ರಕ್ಕೆ ಸಹಿ ಹಾಕುವಂತೆ ರಾಜಾ ಇಮ್ಯಾನ್ಯುವೇಲರನ್ನು ಕೇಳಿಕೊಂಡಾಗ 'ಜರ್ಮನಿಗಾಗಿ ಈ ಆಜ್ಞೆ ಕೊಡುವದಕ್ಕಿಂತ ತಾನು ಕಿರೀಟವನ್ನು ಕೆಳಗಿಡುವದು ವಾಸಿ' ಎಂದು ರಾಜರು ನಿರಾಕರಿಸಿ ಬಿಟ್ಟರೆಂದೂ, ಹೀಗಾಗಿ ಮುಸಲನಿಯು ಹಿಟ್ಲರನನ್ನು ಸಂಧಾನಕ್ಕೆ ಒತ್ತಾಯಪಡಿಸಬೇಕಾಗಿ ಬಂತೆಂದೂ ವಾರ್ತೆಯಿದೆ. ಅಂತೂ ತಾ. ೨೯—೯—೩೮ರಲ್ಲಿ ಬ್ರಿಟಿಷ್ ಪ್ರಧಾನ ಮಿ. ಚೆಂಬರ್ಲೇನ್ ಮತ್ತು ಫ್ರಾನ್ಸ್ ಮುಖ್ಯಮಂತ್ರಿ ದಲಾಡಿಯಾರರು ವಿಮಾನ ಮೂಲಕವೂ, ಮುಸಲನಿಯವರು ರೈಲಿನಲ್ಲಿಯೂ ಜರ್ಮನಿಯ ಮ್ಯುನಿಚ್ ಪರಿಷತ್ತಿಗೆ ಧಾವಿಸಿದರು. ಹಿಟ್ಲರನು ಫೀಲ್ಡ್ ಮಾರ್ಶಲ್ ಗೋರಿಂಗನೊಡನೆ ಬಂದು ಇವರನ್ನು ಸೇರಿದನು. ಈ ನಾಲ್ಕು ಪ್ರಮುಖ ರಾಷ್ಟ್ರಗಳು ತಾ. ೩೦ರಲ್ಲಿ ಜೆಕ್-ಜರ್ಮನಿ ಕರಾರು ಪತ್ರಕ್ಕೆ ಸಹಿ ಹಾಕಿದವು. ಈ ತೀರ್ಮಾನದಂತೆ ಸುಡೇಟನ್ ಪ್ರಾಂತ್ಯವನ್ನು ಮೊದಲೇ ಸೂಚಿಸಿದ ಪ್ರಕಾರ ಸಂಪೂರ್ಣವಾಗಿ ಜರ್ಮನಿಗೆ ಬಿಟ್ಟುಕೊಡಬೇಕು. ಜರ್ಮನರ ವಶಕ್ಕೆ ಕೊಡುವ ಕಾರ್ಯವು ತಾ. ೧ರಿಂದ ಪ್ರಾರಂಭವಾಗಬೇಕು-- ತಾ. ೧೦ರೊಳಗೆ ಪೂರ್ತಿಯಾಗಬೇಕು. ಈ ಕಾರ್ಯವು ಜರ್ಮನಿ, ಬ್ರಿಟನ್, ಫ್ರಾನ್ಸ್, ಇಟಲಿ, ಝೆಕೊಸ್ಲೊವೇಕಿಯಾದ ಪ್ರತಿನಿಧಿ ಮಂಡಲದ ಮೇಲ್ವಿಚಾರಣೆಯಿಂದ ಸಾಗಬೇಕು. ಸಂಪೂರ್ಣ ಜರ್ಮನರದಾದ ಭಾಗವನ್ನು ತಾ. ೧೦ರೊಳಗೆ ಬಿಟ್ಟುಕೊಡುವದಲ್ಲದೆ, ಉಳಿದ ಭಾಗದ ಬದಲಾವಣೆ ತಾ. ೧೦ರಿಂದ ಪ್ರಾರಂಭವಾಗಿ ಪೂರ್ಣ ತೀರ್ಮಾನದ ತನಕ ಸ್ಥಳವು ಅಂತರ್ರಾಷ್ಟ್ರೀಯ ಮಂಡಲದ ಸ್ವಾಧೀನವಿರತಕ್ಕದ್ದು.



ಶಾಂತಿ ಯತ್ನಗಳನ್ನು ನಡೆಸಿ ತಾತ್ಕಾಲಿಕ ಜಯವನ್ನು ಪಡೆದ ಬ್ರಿಟಿಷ್ ಪ್ರಧಾನ ಮಂತ್ರಿ ಮಿ| ನೆವಿಲ್ ಚೇಂಬರ್ಲೇನ್

ಮತ್ತು ಮತಗಣನೆಯ ಸ್ಥಳಗಳಾವುವೆಂಬುದನ್ನು ಈ ಮಂಡಲವೇ ನಿಶ್ಚೈಸಿ, ಮತಗಣನೆಯ ಮೇಲ್ವಿಚಾರಣೆ ನಡೆಸಬೇಕು. ಹೀಗೆ ಗಡಿಗಳನ್ನು ನಿಶ್ಚೈಸಿದ ಮೇಲೆ-ಬ್ರಿಟಿಷ್ ಮತ್ತು ಫ್ರೆಂಚರು ಝೆಕೊಸ್ಲೊವೇಕಿಯದ ರಕ್ಷಣೆಗೆ ಜವಾಬ್ದಾರರಿರುವರು.

## ಜೆಕೊಸ್ಲೊವೇಕಿಯದ ಅನಿವಾರ್ಯದ ಸಮ್ಮತಿ.

ಬ್ರಿಟಿಷ್ ಮತ್ತು ಫ್ರೆಂಚರು ಪ್ರಥಮ ಸಲ ಸುಡೆಟನ್ ಭಾಗವನ್ನು ಹಿಟ್ಲರನಿಗೆ ಈಯುವ ನಿರ್ಧಾರ ಮಾಡಿದಾಗಲೂ, ಆ ಮೇಲೆ ಮ್ಯುನಿಚ್ ಪರಿಷತ್ತಿನ ಸಂದರ್ಭದಲ್ಲೂ ಝೆಕೋಸ್ಲೊವೇಕಿಯದ ಅಭಿಪ್ರಾಯವನ್ನು ಕೇಳಿರಲಿಲ್ಲ. ಜೆಕ್ಕರೊಪ್ಪದಿದ್ದರೆ ತಾವು ಈ ವಿಷಯದಲ್ಲಿ ಕೈತೊಳೆದು ಕುಳಿತುಕೊಳ್ಳುವೆವೆಂದು ಹೆದರಿಸಿ ಆಂಗ್ಲೋ ಫ್ರೆಂಚರು ಜೊಕೊಸ್ಲೊವೇಕಿಯದ ಸಮ್ಮತಿ ಪಡೆದಿದ್ದರು. ಮ್ಯುನಿಚ್ ನಿರ್ಣಯವನ್ನು ಜೆಕ್ ಮಂತ್ರಿಮಂಡಲವು ನಿರ್ವಾಹವಿಲ್ಲದೆ ಅಂಗೀಕರಿಸಿತು. ಈ ಕುರಿತು ಅಲ್ಲಿಯ ಈಗಿನ ಮುಖ್ಯಮಂತ್ರಿ ಜನರಲ್ ಸಿರ್ವೋಯಿಯವರು ತನ್ನ ದೇಶಕ್ಕೆತ್ತ ಹೃದಯಸ್ಪರ್ಶಿ ಸಂದೇಶದಲ್ಲಿ ಹೀಗೆಂದಿರುವರು 'ಪ್ರಯೋಜನಕ್ಕೆ ಬೀಳದ ಹೋರಾಟ ಮತ್ತು ತ್ಯಾಗಗಳ ಪೈಕಿ ನಾವು ಎರಡನೆಯದನ್ನೇ ಆರಿಸಿಕೊಳ್ಳಬೇಕಾಗಿ ಬಂತು. ನಮ್ಮ ಮೈತ್ರಿಯ ಶಕ್ತಿಗಳ ಒತ್ತಾಯಕ್ಕೆ ನಾವು ಒಳಗಾಗಬೇಕಾಯಿತು. ರಾಷ್ಟ್ರದ ಸಾಮರ್ಥ್ಯವನ್ನು ಇನ್ನಷ್ಟು ಹೆಚ್ಚಿಸಿಕೊಳ್ಳುವ ಅಗತ್ಯವಿದೆ'.

## ಉತ್ಸಾಹ-ನಿರಾಶೆ.

ಎಷ್ಟೇ ದೊಡ್ಡ ಬಲಿಕೊಟ್ಟಾದರೂ ಯುದ್ಧದ ಗಂಡಾಂತರವೊಂದು ತೊಲಗಿತಲ್ಲಾ-ಎಂದು ಮ್ಯುನಿಚ್ ಒಪ್ಪಂದದಿಂದ ಲೋಕವಿಡೀ ಆನಂದಗೊಂಡಿದೆ. ಮ್ಯುನಿಚ್‌ನಿಂದ ಹಿಂದಿರುಗಿದ ಪ್ರತಿನಿಧಿಗಳು ತಮ್ಮ ತಮ್ಮ ರಾಷ್ಟ್ರಗಳಲ್ಲಿ ಬಹು ವಿಜ್ರಂಭಣೆಯ ಸ್ವಾಗತ ಪಡೆದರು. ಲಂಡನಿನಲ್ಲಿ ಚೇಂಬರ್ಲೇನರಿಗಿತ್ತ ಗೌರವದ ಸ್ವಾಗತವು ಅನ್ಯಾದೃಶ್ಯವಾದುದು. ಎಲ್ಲೆಲ್ಲಿಯೂ ಅವರಿಗೆ

ಶಾಂತಿ ಪುರಸ್ಕಾರಗಳನ್ನೀವ ಸನ್ನಾಹಗಳು ನಡೆಯುತ್ತಿವೆ. ನೋಬೆಲ್ ಬಹುಮಾನವನ್ನು ಚೆಂಬರ್ಲೇನರಿಗೆ ಕೊಡುವ ಸೂಚನೆಗಳಾಗುತ್ತಿವೆ. ಮ್ಯೂನಿಚಿನಿಂದ ಹಿಂದಿರುವಾಗ ಬ್ರಿಟಿಷ್-ಜರ್ಮನಿ ಒಪ್ಪಂದಕ್ಕೆ ಅಸ್ತಿವಾರ ಹಾಕಿಯೇ ಬಂದಿದ್ದಾರೆ ಚೆಂಬರ್ಲೇನರು. ಬ್ರಿಟನ್-ಜರ್ಮನುಗಳು ಎಂದೂ ಪರಸ್ಪರ ಹೊಡೆದಾಡಿ ಕೊಳ್ಳಬಾರದು, ಎಲ್ಲಾ ಪ್ರಶ್ನೆಗಳನ್ನು ಒಡಂಬಡಿಕೆಯಿಂದ ತೀರ್ಮಾನಿಸಿ ಕೊಳ್ಳಬೇಕೆಂಬ ಕರಾರಿಗೆ ಚೇಂಬರ್ಲೇನ್-ಹಿಟ್ಲರರು ಸಹಿಮಾಡಿರುವರು. ಹಾಗೆಯೇ ಜರ್ಮನ್ ಫ್ರಾನ್ಸ್ ಒಪ್ಪಂದವಾಗುವ ಲಕ್ಷಣಗಳಿವೆ. ಸ್ಪೈನ್ ಯುದ್ಧವನ್ನು ರಾಜಿಯಿಂದ ತೀರ್ಮಾನಿಸುವ ಸಂಭವವಿದೆ.

ಈ ಒಪ್ಪಂದದಿಂದ ಪ್ರಜಾಪ್ರಭುತ್ವಕ್ಕೆ ದೊಡ್ಡ ಧಕ್ಕೆ ಬಿತ್ತು. ಇದರಿಂದ ಯುದ್ಧ ನಿವಾರಿತವಾಗದು. ಜರ್ಮನಿಯು ಕೊಲೊನಿಗಳನ್ನು ಇನ್ನೂ ಕೇಳುತ್ತಲೇ ಇದೆ. ಡಿಕ್ಟೇಟರರುಗಳ ಜುಲುಮೆಗೆ ಹಾದಿ ಮಾಡಿ ಕೊಡುತ್ತಾ ಬಂದಂತಾಯಿತು. ರಸ್ಯದ ಪ್ರತಿಷ್ಠೆಯು ಯುರೋಪಿನಲ್ಲುಳಿಯದಂತೆ ಪಾಶ್ಚಾತ್ಯ ರಾಷ್ಟ್ರಗಳು ಮಾಡಿದ ಒಳಸಂಚಿದು- ಇವೇ ಮೊದಲಾದ ನಿರಾಶೋದ್ಗಾರಗಳೂ ಕೇಳಿ ಬರುತ್ತಿವೆ. ಇತ್ತ ಪೊಲೆಂಡು ತನ್ನ ಜನಸಂಖ್ಯೆ ಅಧಿಕವಿರುವ ಜೆಕೊಸ್ಲೊವೇಕಿಯದ ಭಾಗವನ್ನು ಕೂಡಲೇ ಆಕ್ರಮಿಸುವ ಬೆದರಿಕೆ ಹಾಕಿ ಮುಂದೊತ್ತಿರುವದು. ಬ್ರಿಟಿಷ್ ಪ್ರಧಾನರು, ಜೆಕೊಸ್ಲೊವೇಕಿಯದ ಸ್ವಾತಂತ್ರ್ಯ, ಹಿಂದಿನ ಒಪ್ಪಂದ, ಪ್ರಜಾಸತ್ತಾತತ್ವ ಮೊದಲಾದುವುಗಳನ್ನೆಲ್ಲಾ ಕಡೆಗಣಿಸಿ ಯುದ್ಧದ ಸಂಕಷ್ಟವೊಂದನ್ನೆ ಭಯಂಕರವಾಗಿ ಚಿತ್ರಿಸಿ, ಪ್ರತ್ಯಕ್ಷವಾಗಿ ಹಿಟ್ಲರನ ಕಾರ್ಯ ಸಾಧಿಸಿ ಕೊಟ್ಟರೆಂದೂ ಫ್ರಾನ್ಸು ತನ್ನ ಭದ್ರತೆಗಾಗಿ ಬ್ರಿಟನಿನ ಬೆನ್ನು ಹಿಡಿದು ಜೆಕ್ ರಾಷ್ಟ್ರದ ಬಲಿದಾನಕ್ಕೆ ನೆರವಾಯಿತೆಂದೂ ವಿಚಾರಿಗಳೆಲ್ಲರ ಅಭಿಪ್ರಾಯ. ರಸ್ಯದ ಮೇಲೆ ಚೇಂಬರ್ಲಿನ್-ಹಿಟ್ಲರರಿಗೆ ಸಮಾನ ವಕ್ರದೃಷ್ಟಿಯಿರುವದರಿಂದ, ಈ ಒಪ್ಪಂದದಿಂದ ರಸ್ಯವನ್ನು ಹೊರಗಿಟ್ಟು, ರಸ್ಯದೊಡನೆ ಸಹಕರಿಸಿಕೊಂಡಿದ್ದ ಫ್ರಾನ್ಸನ್ನು ತಮ್ಮ ಕಡೆಗೆಳಕೊಂಡು, ಯುರೋಪಿನಲ್ಲಿ ಬೊಲ್ಶೆವಿಸ್ಟರ ಕೈಸಾಗದಂತೆ ಈ ಒಪ್ಪಂದದಿಂದ ಸಾಧಿಸಲಾಗಿದೆ.

---


# ಯು. ಆರ್. ಶೆಣೈ ಎಂಡ್ ಸನ್ಸ್.

**ಹೆಡ್ ಆಫೀಸ್:- ರಥಬೀದಿ. ಬ್ರಾಂಚ್:- ಕೊಡಿಯಾಲಬೈಲ್.**

**ಮಂಗಳೂರು**

ಎಲ್ಲಾ ತರದ ಶಾಲಾ ಕಾಲೇಜು ಪುಸ್ತಕಗಳು, ಸ್ಟೇಶನೆರಿ, ಕಟ್ಲೆರಿ, ಪ್ರಿಂಟಿಂಗ್ ಶಾಯಿ ಮತ್ತು ಮದುವೆ ಉಪನಯನಾದಿಗಳಿಗೆ ಬೇಕಾದ ಸುಗಂಧ ದ್ರವ್ಯ ಉಡುಗೆರೆ ವಗೈರೆಗಳು ಮತ್ತು ಪ್ರಿಂಟಿಂಗ್ ಕಾಗದಗಳು ನಮ್ಮಲ್ಲಿ ಸುಲಭ ದರದಲ್ಲಿ ಸಿಗುವುವು.

**For all kinds of School and College requisites, Books, Stationary Articles, Printing inks, and students everyday requisites:-**

## U. R. SHENOY & SONS,

***Car-Street, Mangalore,*** **Branch at Kodialbail.**

***BINDING IS OUR SPECIALITY.***

# ಮಡಿವಾಳನ ಮುಂದೆ ಕಾಯಿದೆಯ ಶರಣು



"ಬಿಸಿಲಿನ ಶಾಖಕ್ಕಾಗಿ ಮರಳ ದಿನ್ನೆಯ ಮೇಲೆ ಮಲಗಿರುವ ಮೊಸಳೆಯಂತೆ ರತ್ನಿ ಮಂಚದಮೇಲೆ ಒರಗಿಕೊಂಡಿದ್ದಳು.

### ಐದು ದೃಶ್ಯಗಳ ಒಂದು ನಾಟಕ

## ದೃಶ್ಯ ೧

[ಚಕ್ರವಾಕಪುರದ ಮ್ಯುನಿಸಿಪಲ್ ವಾಚನಾಲಯದಲ್ಲಿ ಸ್ಥಳೀಯ ಹೈಸ್ಕೂಲಿನ ಹೆಡ್ಮಾಸ್ತರರಾದ ರಾಮಚಂದ್ರ ಶೆಟ್ಟರು ಆರಡಿ ಎತ್ತರದ ತನ್ನ "ಕಾಯಂ ಕುರ್ಚಿ"ಯ ಮೇಲೆ ಆಸೀನರಾಗಿ ವಾಚನಾಲಯಕ್ಕೆ ಬರುವ ಏಕ ಮಾತ್ರ ದಿನ ಪತ್ರಿಕೆಯನ್ನು ಮೂರು ಮುಕ್ಕಾಲು ತಾಸಿನಿಂದ ಓದ ತೊಡಗಿದ್ದಾರೆ. ಕೆಳಗೆ ಅದೇ ಶಾಲೆಯ ಹಳೆ ವಿದ್ಯಾರ್ಥಿ ತಿಮ್ಮಣ್ಣ ಭಟ್ಟ ದಿನ ಪತ್ರಿಕೆಯ ಹಿಂದಿನ ಭಾಗದಲ್ಲಿರುವ ಚಿತ್ರಗಳನ್ನು ಎವೆಯಿಕ್ಕದೆ ನೋಡುತ್ತಿದ್ದಾನೆ. ನೆಲದ ಮೇಲೆ ಕೇವಲ ಮೂರು ಕಾಲುಗಳಿಂದ ಆಧರಿಸಿಕೊಂಡಿರುವ ಒರಗು ಬೆಂಚಿನ ಮೇಲೆ ವಕೀಲ ವೃತ್ತಿಯು ಇನ್ನೂ ಲಾಭಕಾರಿಯಾಗಿರಬಹುದೇ ಎಂಬದನ್ನು ಕಾರ್ಯರೂಪದಲ್ಲಿ ಪರೀಕ್ಷಿಸುತ್ತಿರುವ ಹಯವದನರಾವ್ ಮತ್ತು ಹಯಗ್ರೀವರಾಯರು ಕೂತಿದ್ದಾರೆ. ಹಯವದನರಾಯರು ವಿಶಾಲವಾದ ಮೈದಾನಿನಲ್ಲಿ ಭಾಷಣಕೊಡುವವರಂತೆ ವಾರ್ತಾ ತರಂಗಿಣಿ"ಯನ್ನು ಗಟ್ಟಿಯಾಗಿ ಓದುತ್ತಿದ್ದಾರೆ.]

**ಹಯಗ್ರೀವರಾಯರು:**—ಎಂಥದದು ಪುನಃ ಓದಿರಯ್ಯಾ.

**ಹಯವದನರಾಯರು:**-(ಎರಡೂ ಕಾಲುಗಳನ್ನು ಬೆಂಚಿನ ಮೇಲಿಟ್ಟು ಕುಳಿತು) ಹ್ಞ! "ಎರಡನೇ ಆರೋಪಿತನಾದ ಅಗಸ ಸುಬ್ಬನಿಗೆ ಮೂರು ತಿಂಗಳ ಕಠಿನ ಶಿಕ್ಷೆಯು ವಿಧಿಸಲ್ಪಟ್ಟಿತು."

ಗ್ರೀವ:-ಸುಳ್ಳು, ಪೂರಾ ಸುಳ್ಳು.

ವದನ:—(ಆಶ್ಚರ್ಯದಿಂದ) ಹ್ಞ! ಏನು ಸುಳ್ಳು?

ಗ್ರೀವ:—ಅದು ಪೂರಾ ಸುಳ್ಳು.

ವದನ:—ಯಾವುದು?

ಗ್ರೀವ:—ಯಾವುದು- ನೀವೀಗ ಓದಿದ್ದು.

ವದನ:—"ಎರಡನೆ ಆರೋಪಿತನಾದ ಅಗಸ ಸುಬ್ಬನಿಗೆ ಮೂರು ತಿಂಗಳ ಕಠಿನ ಶಿಕ್ಷೆಯು ವಿಧಿಸಲ್ಪಟ್ಟಿತು" ನಾನು ಓದಿದ್ದು ಹೀಗೆ. ಇದು ಸುಳ್ಳೇನಯ್ಯಾ ಹಯಗ್ರೀವರಾವ್?

ಗ್ರೀವ:—ಸರಿ. ಅದನ್ನೇ ನಾನು ಶುದ್ಧ ಸುಳ್ಳೆಂದು ಹೇಳಿದ್ದು.

ವದನ:—ಏನು ನಿಮ್ಮ ತಲೆ ಮೊನ್ನೆ ಬಂದ ನೆರೆಯಲ್ಲಿ ಹೋಗಿ ಬಿಟ್ಟಿತೇ ಏನು? ಅಲ್ಲ—ಪೇಪರ್ ಓದುತ್ತೇನೆ.—ಸುಳ್ಳಂತೆ! ಎಂಥಾ ಸುಳ್ಳಯ್ಯಾ? ನೀವೇ ಓದಿ.

ಗ್ರೀವ— ನಾನೋದೋದಿಲ್ಲ. ಒಂದನೆ ಪ್ಯೊಂಟ್, ಸುಬ್ಬನೆಂಬವ ಒಬ್ಬ ಮಡಿವಾಳ. ಎರಡನೆ ಪ್ಯೊಂಟ್ ಯಾವುದೆಂದರೆ ಅವನು ಮಡಿವಾಳನಾದುದರಿಂದ ಅವನಿಗೆ ಶಿಕ್ಷೆಯಾಗದಿರುವುದು.

ವದನ:—ಏನಯ್ಯಾ, ಸುಮ್ಗೆ ನನ್ನತ್ರ ಹೇಳಿಂದ್ರಿಂದಾಯ್ತು. ಬೇರೆಯವರೊಡನೆ ಹೀಗೆ ಮಾತಾಡಿದ್ರೆ ಈಗ ವರ್ಷಕ್ಕೊನ್ನೆ ಅಪ್ಪಿತಪ್ಪಿ ಬರುತ್ತಿರುವ ಒಂದೆರಡು ಕೇಸುಗಳೂ ಬರಲಿಕ್ಕಿಲ್ಲ. ಅಲ್ಲ, ನಿಮಗೆ ಸರಿಯಿಲ್ಲಯ್ಯಾ?

ಗ್ರೀವ:—ನನಗೆ ಸರೀ ಉಂಟು.

ವದನ:—(ಕೋಪದಿಂದ) ನೀವು ಹೇಳುವುದಕ್ಕೆ ಅರ್ಥವುಂಟಯ್ಯಾ? ಮಡಿವಾಳನು ತಪ್ಪು ಮಾಡಿದರೆ, ಅವನು ತಕ್ಷೀರುಗಾರನೆಂದು ರುಜುವಾತಾದರೆ ಅವನಿಗೆ ಶಿಕ್ಷೆಯಾಗುವುದಿಲ್ವೇ?

ಗ್ರೀವ:— ಖಂಡಿತವಾಗಿಯೂ ಇಲ್ಲ. ಅಪ್ಪಿತಪ್ಪಿ ಎಲ್ಯಾದ್ರೂ ಆಗಬಹುದಾದರೆ ಹೆಚ್ಚಾಗಿ ಅವರ ಮೇಲೆ ಕಾನೂನು ನಡೆಯುವುದಿಲ್ಲ. ಯಾಕಂದ್ರೆ ಒಂದು ಸಾವಿರ ಮಡಿವಾಳರು ತಪ್ಪುಮಾಡಿದರೆ ಅವರಲ್ಲಿ ಒಬ್ಬನಿಗೆ ಶಿಕ್ಷೆಯಾಗುತ್ತದೆ. ಮುದ್ದೈ ಮತ್ತು ಆಲೆಯರು ಒಂದೇ ಕಸಬಿನವರಾಗಿದ್ದರೆ ಯಾರಾದರೊಬ್ಬನಿಗೆ ಶಿಕ್ಷೆ ಯಾಗಬಹುದಲ್ಲದೆ ಅಗಸರ ಮೇಲೆ ಯಾವ ಕಾನೂನೂ ನಡೆಯುವುದಿಲ್ಲ.

ವದನ:—ಏನಯ್ಯಾ? ಹಾಗಿದ್ರೆ ಪಿನಲ್ ಕೋಡಿನಲ್ಲಿ ಈ ಕಾಯಿದೆ "ಅಗಸರಿಗೆ ಸಮನ್ವಯಿಸುವುದಿಲ್ಲ" ಎಂದೇಕೆ ಬರೆಯಿಲಿಲ್ಲ?

ಗ್ರೀವ:—ತಪ್ಪಿದಿರಿ, ಬರೆಯಬೇಕೆಂದಿಲ್ಲ. ನನ್ನ ವಾದಕ್ಕೆ ಆ

ಧಾರ ಪಿನಲ್ ಕೋಡಲ್ಲ. ಅವಕ್ಕಿಂತಲೂ ಹೆಚ್ಚು ಕೋಡುಗಳಿರುವ ರೂಫಿ ಕೋಡು! ಜಗತ್ತಿನ ರೂಫಿ ಕೋಡು, ಗೊತ್ತಾಯಿತಲ್ಲಾ, ಹಯವದನ ರಾಯ್ರೆ?

ವದನ: ನೀವೇನು ಹೇಳುತ್ತಿದ್ದೀರೆಂಬು ನನಗರ್ಥವಾಗೋದಿಲ್ಲ. ನಾಲ್ಕೈದು ತಿಂಗಳುಗಳಿಂದ ನಿಮಗೆ ಪ್ರೇಕ್ಟಿಸ್ ಕಡಿಮೆಯಾಗಿಯೋ ಏನೋ ಬಾಯಿಗೆ ಬಂದಂತೆ ಮಾತಾಡುತ್ತೀರಿ.

ಗ್ರೀವ:—ಅರೆ ಮಾರಾಯ್ರೇ ನನ್ನ ತಲೆ ಸರಿಯಿದೆ. ಆರು ತಿಂಗಳ ಮೊದಲು ಎಲ್ಲಿತ್ತೋ ಅಲ್ಲಿಯೇ ಇದೆ. ಹೇಗಿತ್ತೋ ಹಾಗೆಯೇ ಇದೆ. ಆದರೆ ನಿಮ್ಮ ತಲೆ ತುಪ್ಪ ಸ್ವಲ್ಪ ಗಟ್ಟಿಯಾಗಿರಬೇಕಯ್ಯಾ!

### ದೃಶ್ಯ ೨

(ಹಯವದನರಾಯರು ಕೋರ್ಟಿನಿಂದ ಹಿಂದೆ ಬಂದಿದ್ದಾರಷ್ಟೆ. ಅವರೆದುರಿರುವ ಮೇಜಿನ ಮೇಲೆ ಕಿತ್ತಳೆ ಹಣ್ಣುಗಳೂ ಕಾಫಿಯೂ ಇದೆ. ರತ್ನಿ, (ಹ್ರಸ್ವರೂಪ) ಅವರ ಮುದ್ದು ಮಡದಿ-ಬಳಿಯಲ್ಲಿರುವ ಮಂಚದ ಮೇಲೆ ಬಿಸಿಲಿನ ಶಾಕಕ್ಕಾಗಿ ಮರಳದಿನ್ನೆಯ ಮೇಲೆ ಬಿದ್ದಿರುವ ಮೊಸಳೆಯಂತೆ ಒರಗಿಕೊಂಡಿದ್ದಾಳೆ.)

ರತ್ನಿ: -(ಕೆಟ್ಟ ನಗೆಯೊಡನೆ) ಇನ್ನೊಂದು ತಿನ್ನಿ, ತಿನ್ನೀಂದ್ರೆ.

ವದನ:—ಬೇಡೇನೆ, ಈಗ ಶತ್ರುಘ್ನವಿಲಾಸದಲ್ಲಿ ನಮ್ಮ ತಿಮ್ಮಣ್ಣಾ ಚಾರ್ರುಹನ್ನೆರಡಾಣೆ ಕಾಫಿಕುಡ್ಸಿದ್ದು. ಒಂಭತ್ತಾಣೆದ್ದು ನಾನೇ ತಿಂದುಬಿಟ್ಟೆ.

ರತ್ನಿ:—ಏನಾಯ್ತು? ಬಾಯಿಗಿಟ್ಟ ಕೂಡಲೆ ನೀರಾಗುತ್ತದೆ. ಚಿನ್ನದ ಹಾಗುಂಟು (!)

ವದನ:—ನಂಗೆ ಬೇಡಾಂದ್ರೆ ನಿನ್ನ ಒತ್ತಾಯವೋ?

ರತ್ನಿ:—ನೀವು ತಿನ್ನಲೇ ಬೇಕು. ಕೆಲಸದ ರಾಮಕ್ಕೆ ಗಂಡನ ಹಾಗೆ ಸಾಯಲಿಕ್ಕೆ ಬಿದ್ದಿದ್ದೀರಿ. ಹುಂ ತಿನ್ನಿ. ನಂಗಾಗಿ ಒಂದು ತಿನ್ನಿಯಪ್ಪಾ! ನನ್ನತ್ರವೂ 'ಅಂಸಣಿ' ಯೋ?

ವದನ: – ಆಯ್ತೋ ರತ್ನಿ. ನೀನೇ ಳಿದ್ದಕ್ಕೆ ನಂದು ವಿರೋಧವಿದ್ದದ್ದು ನೀನು ಹುಟ್ಟಿದಂದಿನಿಂದ ನೋಡಿದ್ದಿಯೊ? ಈಗ ಬೇಡ, ಮತ್ತೆ ತಿನ್ತೇನೇ!

ರತ್ನಿ:—ತಿನ್ನೀಂದ್ರೆ!

ವದನ:– (ಸ್ವಲ್ಪ ಯೋಚಿಸಿ) ಹೌದೇ ರತ್ನಿ, ನಿಂಗೇನು ಬೇಕಪ್ಪಾ ಅದನ್ನು ಸೀದಾ ಸೀದಾ ಕೇಳಲಿಕ್ಕಾಗೋದಿಲ್ವೆ?

ರತ್ನಿ:—ಅಬ್ಬ ನಿಮ್ಮ ಧಿಮಾಕೇ! ನಾನೇನಾದ್ರೂ ಬೇಕೂಂತ ಹೇಳಿದ್ನೋ ನಿಮತ್ರ?

ವದನ:-(ನಗುತ್ತಾ,)ಏನು ಹೊಸ ಸೀರೆಯೊ?

ರತ್ನಿ:—ಅಲ್ಲ, ಉಹೂಂ!

ವದನ:—ಏನೂ ಬೇಡ್ವೆ?

ರತ್ನಿ:– ಇವತ್ತು ಬೇಡಾರಿತ.

ವದನ:—ಏನು ಹೊಸ ನಮೂನೆಯ ಸರ ಬೇಕೆ?

ರತ್ನಿ:-ಬೇಡಪ್ಪಾ, ನೀವಾ ದಿವ್ಸ ತೆಗೆದುಕೊಟ್ಟದ್ದು ಧಾರಾಳ ಸಾಕು.

ವದನ:—ಮಣ್ಣಾಕ್ಷಿ, ನಾವಿವತ್ತು ರಾತ್ರಿ ಸಿನೆಮೆಕ್ಕೆ ಹೋಗೋಣ.

ರತ್ನಿ:—ಅಬ್ಬಬ್ಬಾ! ಎಂಥಾ ಜನ ಇವತ್ತು ಬೇಡ. ಮೊನ್ನೆ ಹೇಳಿದ್ದು ಮರೆತೇ ಹೋಯ್ತೂಂತ ಕಾಣ್ತದೆ. ಇವತ್ತು...? ಯಾಕೆ ನೀವು ಸಂಜೆಗೆ ಮೇಸ್ತ್ರೇಟರ ಮನೆಗೆ ಹೋಗ್ತೀರೊ?

ವದನ:—ಯಾಕೆ? ನಾ ಹೋಗ್ಬೇಕೆ?

ರತ್ನಿ:—ಅಬ್ಬಾ! ನೀವು ಅಲ್ಲಿಗೆ ಯಾವಾಲೂ ಹೋಗೋದಿಲ್ವೆ?

ವದನ:—ಹೋಗ್ತೇನೆ ಖರೆ. ಆದ್ರೆ ಇವತ್ತು ಹೋಗಲೇ ಬೇಕೇಕೆ?

ರತ್ನಿ:—ನಿಮ್ಗೆ ನಾಳೆ ಹೊರಗೆ ಹೋಗಬೇಕೂಂತಿದ್ರೆ ಹೋಗ್ಬೇಕು. ಮಡಿಯ ಒಂದೇ ಒಂದು ಬಟ್ಟೆಯಿಲ್ಲ.

ವದನ:—ಹ್ಞಂ! ಏನು ನಾನು ಮೆಜಿಸ್ಟ್ರೇಟರಲ್ಲಿಂದ ಮಡಿಬಟ್ಟೆ ಬೇಡಿ ತರಬೇಕೂಂತ್ಲೋ ನೀ ಹೇಳೋದು ಏನು?

ರತ್ನಿ:—ನಿಮ್ಗೇನು? ಯಾವಾಗ್ಲೂ ಕುಶಾಲು. ನೀವಲ್ಲಿಂದ ಬಟ್ಟೆ ಬೇಡಿ ತರಬೇಕೂಂತ ನಾ ಹೇಳಿದ್ನೋ?

ವದನ:—ನಂಗೇನೂ ಅರ್ಥಾಗ್ತದೆ. ಆದರೆ ಈ ಹೆಂಗ್ಸರು "ಕುಂಕು" ಅರ್ಥಾಗ್ವುದಿಲ್ಲ. ನಿಂಗೆ ಸರಿ ಹೇಳಲಿಕ್ಕಾಗೋದಿಲ್ಲೇನೆ ರತ್ನಿ. ಅಬ್ಬಾ, ಗಂಡನೊಡನೆ ಕೂಡಾ ಮುಚ್ಚುರೆ.

ರತ್ನಿ: ನಮ್ಮ ಅಗಸ ಸುಬ್ಬ ಇದ್ದಾನಲ್ಲಾ, ಅಂವ ನಿನ್ನೆ ಮನೆಗೆ ಬಂದಿದ್ದ. ಐದು ದಿವ್ಸದ ನಂತ್ರ ಬಟ್ಟೆ ತರ್ತೇನೆಂತ ಹೇಳಿದ್ದ. ಒಳ್ಳೆಯವ......

ವದನ:-ಏನು ಸತ್ನೇ? ಪುರಾಣ

ಶ್ರೀ ಚಿದಂಬರಯ್ಯನವರ ಸರಳ ಭಾಷಾಂತರ 'ಗೀತೆಯ ಕೈಗನ್ನಡಿ'

ಬೇಡಾಂದ್ರೆ...ಮಹಾಪುರಾಣ ಶುರ್‍ಮಾಡಿದ್ದಾಳೆ.

ರತ್ನಿ:-ಅಮಮಮಮಾ! ನಿಮಗೆ ಹೆಂಗ್ಸಿರ್‍ದಲ್ಲಿ ಹೆಚ್ಚು ಧಿಮಾಕು! ಅವ ಸಾಯೋದೇಕೆ? ಪಾಪ, ನಂಗೆ ಕೊಗ್ಲಿಕ್ಕೆ ಬಂತು. ಅವನ ವೈರಿಗಳು ಅವನ ಮೇಲೆ ಸುಳ್ಳು ಕೇಸು ದಾಖಲೆ ಮಾಡಿದ್ದಾರಂತೆ. ಅಷ್ಟು ದೊಡ್ಡ ಕುಟುಂಬಕ್ಕೆ ಕತ್ತೆಗಳಂತೆ ಅವರಿಬ್ಬರೇ ಕೆಲ್ಸ ಮಾಡ್ಬೇಕು. ಬೇಜಾರದಿಂದ ಅವನಿಗೆ ಎರಡ್ರೂ ಪಾಯಿ ತೆಗೆದು ಕೊಟ್ಬಿಟ್ಟೆ.

ವದನ:—ನೀ ಒಟ್ಟಾರೆ ಹೇಳು ವ್ದೆಂಪ್ರೆ ಸುಬ್ಬನನ್ನ ಬಿಡಿಸಬೇಕೂಂತೆಲ್ಲ?

ರತ್ನಿ: - ಬೇಡಪ್ಪ, ಅದು ಸುಳ್ಳು ಕೇಸಾದ್ರೆ ಅವನನ್ನು ಬಿಡಲಿಕ್ಕಿಲ್ವೋ?

ವದನ:—ಆಯ್ತೇ, ಎಷ್ಟಂದ್ರೂ ನಮ್ಮ ಬಟ್ಟೆ ಒಗೀಬೇಕಲ್ಲ? ದುಡ್ಡು ಕೊಡ್ತದೆ, ದುಡ್ಡು ಎಲ್ಲದಕ್ಕೂ ಕೊಡ್ತದೆನ್ನು!

## ದೃಶ್ಯ ೩

[ಮೆಜಿಸ್ಟ್ರೇಟರ ಮನೆಯಲ್ಲಿ... ವದನರಾಯರು ಮತ್ತು ಮೆಜಿಸ್ಟ್ರೇಟರು ಲೋಕಾಭಿರಾಮ ಮಾತಾಡುತ್ತಿದ್ದಾಗ ಸುಬ್ಬನ ಸುದ್ದಿ ಬರುತ್ತದೆ]

ವದನ:—ಹೌದಲ್ಲಾ. ಸುಬ್ಬಾಂತ ಒಬ್ಬ ಅಗ್ಸನ ಮೇಲೆ ಏನಾದ್ರೂ ಕೇಸಾಗಿದ್ಯೇ?

ಮೆಜಿಸ್ಟ್ರೇಟರು:— ಹೌದೌದು. ಆದ್ರೆ ಅದಕ್ಕೆ ರುಜುವಾತೇ ಇಲ್ಲಯ್ಯ ಅಂವ ನಮ್ಮ ಮಡಿವಾಳ. ನಂಗೊತ್ತಿದ್ದಿಲ್ಲ ನನ್ನೆಂಡ್ತಿ ನಿನ್ನೆ ಬಟ್ಟೆಯಿಲ್ಲಾ, ಸುಬ್ಬನ ಮೇಲೆ ಕೇಸಾಗಿದೆಯಂತೆ ಎಂದು ಹೇಳಿದಾಗ ನಂಗೊತ್ತು. ನಿಮಗೇನಾದ್ರೂ ಆದರಲ್ಲುಂಟೋ?

ವದನ:—ಇಲ್ಲಪ್ಪಾ, ಅಂವ ನಮ್ಮ ಬಟ್ಟೆ ಕೂಡಾ ಕೊಂಡೋಗ್ತಾನೆ.

[ಪೋಲೀಸ್ ಇನ್ಸ್ಪೆಕ್ಟರ್ ಅಂತೋನಿ ಪಿಯಾದ ಪತ್ರಾಡೊ ಡಿಸಿಲ್ವರು ಪ್ರವೇಶಿಸುತ್ತಾರೆ.]

ಸಿಲ್ವ:—ಹೌದಲ್ಲಾ, ಎಂಥದು ಸ್ವಾಮಿ, ಪಾಪ, ಸುಬ್ಬನ ಮೇಲಿನ ಕೇಸಿಗೆ ರುಜುವಾತೇ ಇಲ್ಲ.

ಮೆಜಿಸ್ಟ್ರೇಟರು:— ಹೌದೌದು, ಅಂವ ಕೋರ್ಟಿಗೆ ಬರುತ್ತಿದ್ದಾಗ್ಲೆ ನಂಗೆ ಅದು ತಿಳಿದಿತ್ತು!

## ದೃಶ್ಯ ೪

[ಮೆಜಿಸ್ಟ್ರೇಟರ ಮನೆಯಿಂದ ಹಿಂದೆ ಹೋಗುವಾಗ ರಮಾನಾಥ ಸುಬ್ರಾಯ ಪೈ, ಅಸಿಸ್ಟಾಂಟ್ ಇಂಜಿನೀಯರು ಭೇಟಿಯಾದರು.]

ವದನ:—ಗುಡ್‌ನ್ಯಾಟ್ ಪೈಗಳೆ, ಎಲ್ಲಿ, ಮೆಜಿಸ್ಟ್ರೇಟರನ್ನು ನೋಡಲಿಕ್ಕೆ ಹೋಗುವದೊ?

ಪೈ: - ಗುಡ್‌ನ್ಯಾಟ್, ಹೌದೌದು.

ವದನ:—ಪ್ರಾಯಶಃ ಸುಬ್ಬನನ್ನು ಬಿಡಿಸಲಿಕ್ಕೆಂತ ಕಾಣ್ತದೆ?

ಪೈ:—(ಆಶ್ಚರ್ಯದಿಂದ) ನಿಮ್ಗೆ ಹೇಗ್ಗೊತ್ತಾಯ್ತಯ್ಯಾ?

ವದನ:—ಅದು ಹೇಗೂ ಗ್ಗೊತ್ತಾಗ್ಲಿ? ನಿಮ್ಮ ಮಡಿವಾಳ ಯಾರು?

ಪೈ:-ನಮ್ಮ ಬರಿಮಾರು ಸುಬ್ಬ!

ವದನ:-ಬನ್ನಿ ಸ್ವಾಮಿ, ಹಿಂದೆ ಹೋಗೋಣ. ಅದ್ಯಾಕದ್ರೆ ಹೋಗೋದೆ ಬೇಡ. ಮೆಜಿಸ್ಟ್ರೇಟ್ರ ತಲೆ ಹೋದ್ರೂ ಕುಟ್ಟಗೆ ಶಿಕ್ಷೆಯಾಗುವಂತಿಲ್ಲ. ಖರೆ ಸ್ವಾಮಿ, ನಂಬಹುದು!

(ಪೈ-ವದನರು ಹೋಗುವಾಗ ಹಯಗ್ರೀವರಾಯರು ಬಂದೇ ಬಿಟ್ಟರು)

ವದನ:—ಗುಡ್ನ್ಯಾಟ್ ಹಯಗ್ರೀವಯ್ಯಾ, ಎಲ್ಲಿಗೆ?

ಗ್ರೀವ:—ಓ! ಮೆಜಿಸ್ಟ್ರೇಟರ ಮನೆ ವರೆಗೆ.

ವದನ:—(ಹಯಗ್ರೀವನ ಬಲಗೈಯ್ಯನ್ನು ಗಟ್ಟಿಯಾಗಿ ಹಿಡಿದು) ನೀವು ಮೆಜಿಸ್ಟ್ರೇಟರಲ್ಲಿಗೆ ಹೋಗೋದೇಕೆಂತ ಗೊತ್ತಾಯ್ತು. ಸುಬ್ಬನನ್ನು ಬಿಡ್ತಾರೆ. ನೀವಿನ್ನೆ ರೀಡಿಂಗ್ ರೂಮಿನಲ್ಲಿ ಹೇಳಿದ್ದೆಲ್ಲಾ ಸರಿ. ಅಗಸನ ಮುಂದೆ ಎಂಥಾ ಕೋಡಿನ ಕೋಡೂ ಮುರಿದ್ಹೋಗುತ್ತದೆ. ಹೋಗೋಣ, ಬನ್ನಿ. ಅದಿರಲಿ ನಿಮ್ಮ ಡೋಬಿಗೆ ಸುಬ್ಬಾ ಏನಾಗ್ಬೇಕು?

ಗ್ರೀವ:—ಮಾವ!

## ದೃಶ್ಯ ೫.

(ಚಕ್ರವಾಕಪುರದ ಮ್ಯುನಿಸಿಪಲ್ ವಾಚನಾಲಯದ ಮೂರು ಕಾಲಿನ ಚರಗು ಬೆಂಚಿನಲ್ಲಿ ವದನರಾಯರು "ವಾರ್ತಾ ತರಂಗಿನಿ" ಓದುತ್ತಾರೆ.)

ವದನ:-(ಕೋಣ ಓಡಿಸುವಂತೆ) "ತಿದ್ದುಪಡಿ. ನಮ್ಮ ಪತ್ರಿಕೆಯ ಸಪ್ಟಂಬರ್ ತಿಂಗಳ ೧೮ನೇ ತಾರೀಕಿನ ಸಂಚಿಕೆಯ ೮ನೇ ಪುಟದ ೪ನೇ ಕಲಮಿನ ೫ನೇ ಪಂಕ್ತಿಯಿಂದ ಎರಡನೆ ಆರೋಪಿತನಾದ ಅಗಸ ಸುಬ್ಬನಿಗೆ ಮೂರ ತಿಂಗಳಕಠಿನ ಶಿಕ್ಷೆ ವಿಧಿಸಲ್ಪಟ್ಟಿತು" ಎಂಬುದನ್ನು "ಎರಡನೆ ಆರೋಪಿತನಾದ ಅಗಸ ಸುಬ್ಬನನ್ನು ಸಾಕಷ್ಟು ರುಜುವಾತಿಲ್ಲದಿದ್ದುದರಿಂದ ಬಿಡಲಾಯಿತು" ಎಂದು ಓದಬೇಕು.

—ಸಂ. ವಾ. ತ.]

೨೫ ಕತೆಗಳ ಸಂಗ್ರಹ ಮಧುವನ ರೂ. 1-8-0 ತುಳುನಾಡ್ ಪ್ರೆಸ್.

# ವಿಚಿತ್ರವಾದರೂ ಪೂರಾ ಸತ್ಯ

### ಗಂಡ ಸ್ತ್ರೀಯಾದುದರಿಂದ ಮಗುವಿಗೆ ತಂದೆಯಿಲ್ಲ!

ಪ್ಯಾರಿಸಿನ ನ್ಯಾಯಸ್ಥಾನದ ಮುಂದೆ ೪೫ ವರುಷ ಪ್ರಾಯದ ದಪ್ಪ ದೇಹದ ಸ್ತ್ರೀಯೊಬ್ಬಳು ಬಂದಳು. ನ್ಯಾಯಾಧೀಶರು ಪ್ರಾರಂಭದಲ್ಲಿ ತಬ್ಬಿಬ್ಬಾದರೂ ವಿವರ ತಿಳಿದೊಡನೆ ಶಾಂತಮನಸ್ಕರಾದರು.

ಇಪ್ಪತ್ತು ವರುಷಗಳ ಹಿಂದೆ ಪಾವುಲ್ ಹರ್ಪಿನ್ ಎಂಬೀ ಸ್ತ್ರೀಯೊಬ್ಬ ಪುರುಷನಾಗಿದ್ದನೆಂದು ನೂರಾರು ದಾಖಲೆಗಳು ಬೆಟ್ಟು ಮಾಡಿ ತೋರಿಸುವುದಿದ್ದರೂ ಪಾವುಲ್ ಹರ್ಪಿನ್‌ನನ್ನು ಸ್ತ್ರೀಯಲ್ಲವೆಂದು ಈಗ ನೋಡುವವರಿಗೆ ಹೇಳುವುದು ಅಸಾಧ್ಯವಾಗಿತ್ತು.

ಈ "ಸ್ತ್ರೀ-ಪುರುಷನು" "ತನಗೆ" ಅನುಕೂಲವಾದೋರ್ವ ಸ್ತ್ರೀಯನ್ನು ಮದುವೆಯಾಗಬೇಕೆಂದು ಸರಕಾರಕ್ಕೆ ಅರ್ಜಿಮಾಡಿಕೊಂಡಿದ್ದನು.

ಕೆಲವೇ ತಿಂಗಳುಗಳ ಹಿಂದೆ ಹರ್ಪಿನನ ಮಡದಿ ಎಮಿಲ್ ಹಾಸ್ಕಿನ್ಸಳಿಗೆ ಹುಟ್ಟಿದ ಒಂದು ಗಂಡು ಮಗುವಿನ ತಂದೆಯಾರೆಂಬುದನ್ನು ಕೋರ್ಟು ಹೇಳಬೇಕಾಗಿತ್ತು. ಇಪ್ಪತ್ತು ವರುಷಗಳ ಹಿಂದೆ ಪುರುಷ ರೂಪದಲ್ಲಿದ್ದ ಸೈನಿಕ ಹರ್ಪಿನ್ ಇದೇ ಸ್ತ್ರೀಯೊಡನೆ ವಿಹರಿಸಿದ್ದನು.

ಎಮಿಲ್ ಹಾಸ್ಕಿನ್ಸ್ ತನ್ನ ಪ್ರಿಯನಿಲ್ಲದ ಬೇಸರದಿಂದ ಫ್ರಾನ್ಸಿನಲ್ಲಿ ವಾಸಿಸಿದಳು. ಕೂಡಿದ ಯತ್ನಗಳನ್ನೆಲ್ಲಾ ಮಾಡಿ ಮಗುವಿನ ತಂದೆಯನ್ನರಸಲೆತ್ನಿಸಿದಳು.

ಕಟ್ಟ ಕಡೆಗೆ "ತಂದೆ"ಯ ಪತ್ತೆಯಾಯಿತು. ತಾಯಿಗೆ ಸರಕಾರಿ ನೌಕರಿಯು ಬೇಕಾಗಿದ್ದಿತು. ವಕೀಲರಿಗೆ ತನ್ನ "ಗಂಡ"ನ ಸುದ್ದಿಯನ್ನು ಹೇಳಲು ಅವರು ಬೆರಗಾದರು. ಹೆಂಗಸು "ತಂದೆ"ಯೆನ್ನುವಾಗ ಯಾರಿಗೆ ಬೆರಗಾಗದು? ಮಗುವಿನ ತಂದೆಯು ತಾನಾದರೂ ಸ್ತ್ರೀರೂಪದಲ್ಲಿದ್ದುದರಿಂದ ಪುನಃ ವಿವಾಹವಾಗುವುದು ಅಶಕ್ಯವೆಂದನಾ "ಗಂಡ"!

ವೈದ್ಯಕೀಯ ಆಧಾರವು ಈ ನಿಗೂಢ ವ್ಯಕ್ತಿಯ ಗುಟ್ಟನ್ನು ಬಯಲು ಮಾಡಿತು. ಪಾವುಲ್ ಹರ್ಪಿನ್ ತನ್ನ ಅಂಗವನ್ನೇ ವ್ಯತ್ಯಾಸಗೊಳಿಸಿಕೊಂಡಿದ್ದನು.

ಯುದ್ಧದ ಕೊನೆಯ ಭಾಗದಲ್ಲಿ ಅವನನ್ನು ಹೂಣಿಟ್ಟರು. ಅವನು ಹೇಗಾದರೂ ಬದುಕಿಕೊಂಡನು. ಅವನ ಶಸ್ತ್ರಕ್ರಿಯೆಯಿಂದಾಗಿ ಜೀವವುಳಿಯಿತು. ಸೈನ್ಯಾಧಿಕಾರಿಗಳ ಪಾಲಿಗೆ ಅವನು ಈಗಲ್ಲೂ ಒಬ್ಬ ಗಂಡನೇ ಆಗಿದ್ದಾನೆ. ಎಮಿಲಿ ಹಾಸ್ಕಿನ್ಸಳ ದೃಷ್ಟಿಯಲ್ಲಿ ಅವನೊಬ್ಬ "ಗಂಡ". ಅವನ ಸ್ವಂತ ದೃಷ್ಟಿಯಲ್ಲಿ ಅವನೊಬ್ಬ "ಹೆಂಗಸು" ಎಂದು ಪೀಪ್ಲ್ ಪತ್ರಿಕೆಯು ಬರೆಯುತ್ತದೆ.

---

### ವಚನಾಮೃತ

'ಸ್ತ್ರೀಯು ಕಾಮಪುರುಷನ ಕೊಲೆಹಗ್ಗವು'

......

'ದೇಶಕಾರ್ಯಗಳೆಲ್ಲ ಧನಿಕರ ಕಾರ್ಯಗಳೆಂದು ತಿಳಿ'

........

'ಪರಮಾತ್ಮನು ಎಲ್ಲಿದ್ದಾನೆಂದು ಯಾರಿಗೂ ಗೊತ್ತಿಲ್ಲ'

.......

'ಆದರೆ ಪರಮಾತ್ಮನು ಎಲ್ಲಿಯೂ ಇಲ್ಲ'

.......

'ಸಂಪತ್ತಿನಲ್ಲಿ ಗರ್ವವೂ ದರ್ಪವೂ ಇರಬೇಕು. ಆಪತ್ತಿನಲ್ಲಿ ಮೋಸವೂ ಕುಯುಕ್ತಿಯೂ ಇರಬೇಕು'

*For beautiful Printing* - ***Manipal Power Press.***

# ಬಸ್ಸು ಪ್ರಯಾಣ

ಊರಿಂದೂರಿಗೆ ಪ್ರಯಾಣ ಬೆಳೆಯಿಸುವುದಕ್ಕೆ ಈಗ ಬಸ್ಸಿನ ಅನುಕೂಲತೆಗಳಿರುವುದು ದೊಡ್ಡ ಉಪಕಾರವೆಂಬುದರಲ್ಲಿ ಸಂದೇಹವಿಲ್ಲ. ಆದರೂ ಈ ಬಸ್ಸು ಕಂಪೆನಿಗಳಿಂದ ನಮ್ಮೂರಿನ ಹಣವು ಎಷ್ಟರ ಮಟ್ಟಿಗೆ ನಷ್ಟವಾಗುತ್ತಿದೆ ಎಂದು ನೀನು ಯೋಚಿಸಿರುವೆಯಾ? ಬಸ್ಸಿನಲ್ಲಿ ಪ್ರಯಾಣ ಮಾಡಬಾರದೆಂದು ನಾನು ನಿನಗೆ ಹೇಳುವುದಲ್ಲ. ಅಗತ್ಯವಿದ್ದಾಗ ಬಸ್ಸಿನಲ್ಲಿ ಹೋಗಲೇಬೇಕು. ಆದರೆ ಬಸ್ಸಿನ ಪ್ರಯಾಣವನ್ನು ಆದಷ್ಟು ಕಡಿಮೆ ಮಾಡಬೇಕು. ಬಸ್ಸು ಉಂಟೆಂಬ ಕಾರಣದಿಂದ ಅನವಶ್ಯಕವಾಗಿ ಪ್ರಯಾಣ ಮಾಡುವವರಿದ್ದಾರೆ. ಉತ್ಸವಗಳಿಗೆ, ಯಕ್ಷಗಾನಗಳಿಗೆ, ದಶಾವತಾರ ಆಟಗಳಿಗೆ, ಕೋಳಿ ಅಂಕಗಳಿಗೆ ಬಸ್ಸಿನಲ್ಲಿ ಹೋಗಿ ಬರುವವರಿದ್ದಾರೆ. ಎಷ್ಟು ದೂರದ ನೆಂಟರಿಷ್ಟರಲ್ಲಾದರೂ ಮದುವೆ ಉಪನಯನ ಇತ್ಯಾದಿಗಳಿಗೆ ಮನೆಯವರೆಲ್ಲರೂ ಹೊರಡಲಿಕ್ಕೆ ಸಿದ್ಧರಿದ್ದಾರೆ. ಅನವಶ್ಯಕದ ಪ್ರಯಾಣಗಳಿಗಾಗಿ ಹಣವನ್ನು ಹಾಳುಮಾಡುವವರು ಎಷ್ಟೋ ಜನರಿದ್ದಾರೆ.

ಇನ್ನು ಅನೇಕ ಕೆಲಸಗಳು ಸ್ವತಃ ಹೋಗದೆಯೂ ಆಗುವಂಥವುಗಳಿವೆ. ಒಂದು ಪೋಸ್ಟು ಕಾರ್ಡಿನಲ್ಲಿ ಆಗುವ ಕೆಲಸಕ್ಕಾಗಿ ಬಸ್ಸಿನಲ್ಲಿ ಹೋಗಿ ಬರುವವರಿದ್ದಾರೆ. ಒಂದು ಕಡೆಗೆ ಹೊರಡುವ ಮೊದಲು ಈ ಕೆಲಸವು ಪತ್ರವ್ಯವಹಾರದಿಂದ ಪೂರೈಸಲು ಸಾಧ್ಯವೇ ಎಂದು ವಿಚಾರಿಸಿ ಸ್ವತಃ ಹೋಗುವುದು ಅಗತ್ಯವೆಂದಾದರೆ ಮಾತ್ರ ಹೊರಡಬೇಕು. ಇಲ್ಲವಾದರೆ ಬಸ್ಸಿನಲ್ಲಿ ಹೋಗಬಾರದು.

ಪುಣ್ಯಕ್ಷೇತ್ರಗಳಿಗೆ ನಡೆದುಕೊಂಡು ಹೋಗಲಿಕ್ಕೆ ಸಾಧ್ಯವಿದ್ದರೆ ಮಾತ್ರ ಹೋಗಬೇಕು. ಬಸ್ಸಿನಲ್ಲಿ ತೀರ್ಥಯಾತ್ರೆ ಮಾಡಿ ಯಾವ ಪುಣ್ಯವೂ ಸಿಕ್ಕುವುದಿಲ್ಲ. ಮಾತ್ರವಲ್ಲದೆ ವಾಹನಗಳಲ್ಲಿ ಪುಣ್ಯಕ್ಷೇತ್ರಗಳಿಗೆ ಹೋಗುವುದು ಮಹಾ ಪಾಪಕರವೆಂದು ಶಾಸ್ತ್ರವಿಧಿಯಿದೆ. ಜನರ ಹಣವನ್ನು ಅಪಹರಿಸುವುದಕ್ಕಾಗಿ ಬಸ್ಸು ಕಂಪೆನಿಯವರು ಧರ್ಮಸ್ಥಳ ದೀಪಕ್ಕೆ ಬನ್ನಿರಿ, ಸುಬ್ರಹ್ಮಣ್ಯ ಜಾತ್ರೆಗೆ ಬನ್ನಿರಿ, ಕೊಲ್ಲೂರಿನ ಉತ್ಸವಕ್ಕೆ ಬನ್ನಿರಿ, ಉಡುಪಿಯ ಪರ್ಯಾಯಕ್ಕೆ ಬನ್ನಿರಿ ಎಂದು ಉದ್ದವಾದ ಜಾಹೀರಾತುಗಳನ್ನು ಪೇಪರುಗಳಲ್ಲಿ ಕೊಡುತ್ತಿದ್ದಾರೆ. ಆದರೂ ಬಸ್ಸುಗಳಲ್ಲಿ ಹೋಗಿ ಪುಣ್ಯಕ್ಷೇತ್ರಗಳಿಗೆ ಹೋಗುವಷ್ಟು ಅವಿವೇಕ ಇನ್ನೊಂದಿಲ್ಲ.

ಬಸ್ಸುಗಳಲ್ಲಿ ಆಗಾಗ್ಗೆ ತಿರುಗಾಡುವವರು ಕ್ರಮೇಣ ಬೀಡಿ, ಬೀಡಾ, ಸೋಡಾ, ಕಾಫಿ ಈ ದುರಭ್ಯಾಸಗಳಿಗೆ ಬಲಿಬೀಳುತ್ತಾರೆ. ಇವುಗಳೆಲ್ಲಾ ಬಸ್ಸು ಸ್ಟೇಶನುಗಳಲ್ಲಿ ಸದಾ ದೊರೆಯುವ ವಸ್ತುಗಳು.

ಆದುದರಿಂದ ಪ್ರಿಯ ವಾಚಕನೇ, ನೀನು ಬಸ್ಸು ಪ್ರಯಾಣವನ್ನು ಸ್ವಲ್ಪ ಕಡಿಮೆಮಾಡು. ಅತೀ ಅವಶ್ಯವಾಗಿದ್ದರೆ ಮಾತ್ರ ಬಸ್ಸಿನಲ್ಲಿ ಹೋಗು. ತೀರ್ಥ ಯಾತ್ರೆಗಳಿಗೆ, ಉತ್ಸವಾದಿಗಳಿಗೆ, ತಮಾಷೆಗಳಿಗೆ ಬಸ್ಸಿನಲ್ಲಿ ಹೋಗಬೇಡ. ಏಳೆಂಟು ಮೈಲು ದೂರದ ವರೆಗೆ ಸಾಧ್ಯವಿದ್ದಷ್ಟರ ಮಟ್ಟಿಗೆ ನಡೆದುಕೊಂಡೇ ಹೋಗಲೆತ್ನಿಸು. ಹಣವನ್ನು ಖರ್ಚುಮಾಡುವಷ್ಟು ಸುಲಭದಲ್ಲಿ ಸಂಪಾದನೆ ಮಾಡಲು ಸಾಧ್ಯವಿಲ್ಲ. ಆದುದರಿಂದ ಖರ್ಚು ಮಾಡುವಾಗ ಬಹಳ ಜಾಗ್ರತೆ ಮಾಡಬೇಕು ತಿಳಿಯಿತೇ?

ಇತಿ

**ನಿನ್ನ ಗೆಳೆಯ.**

---

**ಬರುವ ಸಂಚಿಕೆಯಲ್ಲಿ**
**ಕಾಫಿ ಹೊಟೆಲುಗಳ ವಿಷಯ**

**ಒಂದೇ ತಿಂಗಳಲ್ಲಿ ಇಂಗ್ಲಿಷ್ ಕ್ರಯ 0-8-0 ತುಳುನಾಡ್ ಪ್ರೆಸ್.**

# ಈ ವಾರದ ಪಂಚಾಂಗ

ಬಹುಧಾನ್ಯ ಸಂ।ರದ ಆಶ್ವಿನ ಶುಕ್ಲ ಕೃಷ್ಣಪಕ್ಷ ದಕ್ಷಿಣಾಯನಂ ಶರದೃತುಃ

ಕನ್ಯಾ (ನಿರ್ನಾಲ) ೨೩ರಿಂದ ೨೯ರ ವರೆಗೆ. ಮಹಾನಕ್ಷತ್ರ ಹಸ್ತಾ—ಚಿತ್ರಾ

## ಆರ್ಯಭಟ ವಾಕ್ಯಕರಣರೀತ್ಯಾ ನಿತ್ಯಪಂಚಾಂಗಂ

| ತಾ. | ತಿಥಿ | ವಾರ | ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ವಿಶೇಷಾಂಶ |
|---|---|---|---|---|---|---|---|---|
| 9 | ೧೫ | ರ೨೫। | ರೇ೬೦ | ಧ್ರು೬॥ | ಬ೨೫। | ೩೦। | ೫೪||| | ಆಗ್ರಾಯಣಂ ಸರ್ವಾನ್ನಂ ○ ಪೂ. |
| 10 | ೧ | ಚ೨೪ | ರೇ||| | ವ್ಯಾ೩ ಉಪ೫೫॥ | ಕೌ೨೪ | ೫೦॥ | ೪೨॥ | ಚಿತ್ರಾರ್ಕ ೮೩೨ಚಿ೧ಬು೨೫ಮಾ. * |
| 11 | ೨ | ಕು೨೧॥ | ಅ್ವಾ॥ಉಪ೫೮॥ | ವ೫೩ | ಗ೨೧॥ | ೨೩॥ | ೪೭। | ಅ್ನ೧ಶುಂ [* ನಿ. ದಾಮೋ. |
| 12 | ೩ | ಬು೧೮ | ಕೃ೫೬॥ | ಸಿ೪೭ | ಭ೧೮ | ೨೭||| | ೫೦||| | ವೃಷೆಚ೧೩।ಚಿ೨ಬು೨೪ಸಂಕಷ್ಟ೪ † [† ಪ್ರದೋಷಃ |
| 13 | ೪ | ಗು೧೩||| | ರೋ೫೩||| | ವ್ಯ೪೭। | ಜ೧೩||| | ೩೪॥ | ೪೫||| | ಚಿ೨ರ೫೩ ನಾಶಯೋ. ರೋಹಿಣಿ |
| 14 | ೫ | ಶು೮||| ಶ೩। | ಮೃ೫೦ | ವ೩೩ | ತೈ೮||| | ೬||| | ೨೯। | ಮಿಥುನೆಚ೨೨ ಉ್ತ೨ಕನ್ಯಾಕು೩ ‡ |
| 15 | ೬ | ಉಪ೫೪ | ಆರ್೪೬। | ಪ೨೫॥ | ವ೩। | ೯॥ | ೨೨||| | ಪ್ರದೋಷಃ [‡ ಚಿ೩ತುಲಾಬು೨೨ |

## ಕೇತಕೀ ದೃಕ್ಸಿದ್ಧರೀತ್ಯಾ ನಿತ್ಯಪಂಚಾಂಗಂ

| ತಾ. | ತಿಥಿ | ವಾರ | ನಕ್ಷತ್ರ | ಯೋಗ | ಕರಣ | ವಿಷ | ಅಮೃತ | ವಿಶೇಷಾಂಶ |
|---|---|---|---|---|---|---|---|---|
| 9 | ೧೫ | ರ೨೧||| | ರೇ೫೫||| | ಧ್ರು೧। | ಬ೨೭॥ | ೨೫॥ | ೪೯||| | ಮೇಷೇಚ೫೫॥ ಆಗ್ರಯಣಂ * [* ○ ಪೂರ್ಣಿಮಾ |
| 10 | ೧ | ಚ೧೯॥ | ಅ್ವ೫೫ | ಉಪ೫೬ ಹರ್೫೩ | ಕೌ೧೯॥ | ೪೫। | ೩೭। | ಚಿತ್ರಾರ್ಕ೯೧೫॥ |
| 11 | ೨ | ಕು೧೭ | ಭ೫೩॥ | ವ್ಯ೪೭ | ಗ೧೭ | ೧೮॥ | ೪೧||| | |
| 12 | ೩ | ಬು೧೩॥ | ಕೃ೫೧। | ಸಿ೪೦||| | ಭ೧೩॥ | ೨೨। | ೪೫। | ವೃಷೆಚ೮ ಚಿ೨ಬು೧೭ ಸಂಕಷ್ಟ೪ |
| 13 | ೪ | ಗು೯। | ರೋ೪೮। | ವ್ಯ೩೪॥ | ಬ೯। | ೨೯। | ೪೦॥ | ಚಿ೨ರ೩೯ ಅ್ನ೨ಶು೮ |
| 14 | ೫ | ಶು೪॥ ಉಪ೫೫ | ಮೃ೪೫। | ವರಿ೨೭||| | ತೈ೪॥ | ೧||| ವಿ ೫೫॥ | ೨೪। | ಮಿಥುನೆಚ೧೬॥ಕನ್ಯಾಕ೬ತುಲಾ |
| 15 | ೬ | ಶ೫೪ | ಆರ್೪೧||| | ಪ೨೦॥ | ಭ೨೬||| | ೦ | ೧೮। | ಬುಧ೧೫ |

# ಈ ವಾರದಲ್ಲಿ ನಿಮ್ಮ ಭವಿಷ್ಯ ಹೇಗಿದೆ?

✻ **ತಾರೀಕು ೯–೧೦–೧೯೩೮ರಿಂದ ತಾರೀಕು ೧೫–೧೦–೧೯೩೮ರ ವರೆಗೆ.** ✻

**ಮೇಷ:** –

ಜನರನ್ನು ವಶೀಕರಿಸುವ ಅಪೂರ್ವ ಗುಣವೊಂದು ನಿಮ್ಮಲ್ಲಿರುವುದರಿಂದ ನಾನಾ ವಿಧದ ಜನರನ್ನು ಅವರವರಿಗೆ ಅನುಕೂಲವಾದ ರೀತಿಯಲ್ಲಿದ್ದು ಎಲ್ಲರನ್ನೂ ನಿಮ್ಮವರನ್ನಾಗಿ ಮಾಡಿಕೊಳ್ಳುವಿರಿ. ಆದಕಾರಣ ಶತ್ರುಗಳಿಗೂ ಕೂಡ ನಿಮ್ಮಲ್ಲಿರತಕ್ಕ ವೈರಭಾವವು ಶಿಥಿಲವಾಗುವದು. ಆರಂಭಿಸಿದ ಕಾರ್ಯವನ್ನು ಕೊನೆಗೊಳಿಸುವ ಚೈತನ್ಯವು ನಿಮಗಿದೆ. ಉದ್ಯೋಗದಲ್ಲಿ ಭಡತಿಯು ಸಂಭವವಿದೆ. ಆರ್ಥಿಕ ಪರಿಸ್ಥಿತಿಯು ಹೆಚ್ಚಿನಂಶ ಸುಧಾರಣೆ ಹೊಂದುವುದು. ಆದರೂ ಸಂಪಾದಿಸಿದ ಹಣವೆಲ್ಲವೂ ಖರ್ಚಿಗೆ ಸಾಕಾಗುವುದು ಕಷ್ಟಸಾಧ್ಯವೆನ್ನಬಹುದು. ಕಾರಣ ಖರ್ಚಿನ ಹಾದಿ ಅನೇಕವಿದೆ. ನಿಮಗೆ ಸಂಭವಿಸತಕ್ಕ ಚಿಂತೆಗೆ ಮುಖ್ಯವಾಗಿ ನಿಮ್ಮ ಪುತ್ರರೇ ಕಾರಣರು. ತಾ. ೯, ೧೨, ೧೩ ಈ ದಿನಗಳಲ್ಲಿ ಹೆಚ್ಚಿನ ಖರ್ಚೂ ದೇಹಾಲಸ್ಯವೂ ಕಂಡುಬರುವುದು.

**ವೃಷಭ:** –

ನಿಮಗೆ ಈ ವಾರದಲ್ಲಿ ಕೆಲವು ಭಾಗಗಳ ಮಟ್ಟಿಗೆ ಪರಿಸ್ಥಿತಿಯು ಅನುಕೂಲವಾಗಿರುವುದು. ಧನದ ಭಾಗದಲ್ಲಿ ಯಾವತ್ತೂ ಚಿಂತಿಸಬೇಕಾದ್ದಿಲ್ಲವು. ನಾನಾ ರೀತಿಯಿಂದ ಧನಲಾಭವಾದರೂ ಅದಕ್ಕೆ ಯಾವ ತರದ ಹೆಚ್ಚಿನ ಖರ್ಚೂ ಕಂಡುಬರುವುದಿಲ್ಲ. ಗೃಹದಲ್ಲಿ ಧಾನ್ಯ ಸಮೃದ್ಧಿಯಾಗುವದು. ನಿಮ್ಮ ಸ್ವಭಾವವು ತೀಕ್ಷ್ಣವಾಗಿದ್ದಂತೆಯೇ ಬುದ್ಧಿಯೂ ತೀಕ್ಷ್ಣವಾಗಿರುವುದು. ಆರೋಗ್ಯ ಭಾಗ್ಯವು ಚೆನ್ನಾಗಿಲ್ಲದಿರುವುದರಿಂದ ಹಲ್ಲು ನೋವು ಹೊಟ್ಟೆ ನೋವು ಇತ್ಯಾದಿಗಳು ಹೆಚ್ಚಾಗುವವು. ಶತ್ರುಗಳ ಉಪದ್ರವಕ್ಕೂ ಕೂಡ ಕೊರತೆಯಿಲ್ಲವು. ಆದರೂ ಕಷ್ಟ ಸಹಿಷ್ಣುಗಳಾದ ನೀವು ಇನ್ನೊಂದು ವಿಷಯಗಳಿಗಾಗಿ ಚಿಂತಿಸಲಾರಿರಿ. ಸ್ತ್ರೀ ನಿಮಿತ್ತದಿಂದ ಪೀಡೆಯೂ ಅನಿಷ್ಟವೂ ಸಂಭವಿಸುವದು. ತಾ. ೯, ೧೨, ೧೩ ಈ ದಿನಗಳ ಮಟ್ಟಿಗೆ ಸಂತೋಷ, ಮಿತ್ರಸಮಾಗಮ.

**ಮಿಥುನ:**—

ತೃತೀಯದಲ್ಲಿನ ಅಂಗಾರಕನ ಹೊರತು ಇತರ ಎಲ್ಲಾ ಗ್ರಹರು ಅಶುಭ ಸ್ಥಾನಗತರಿರುವುದರಿಂದ ಈ ವಾರದಲ್ಲಿ ನಿಮಗೆ ಹೆಚ್ಚಾಗಿ ಕಷ್ಟನಷ್ಟಗಳೇ ಸಂಭವಿಸುವವು. ಆರ್ಥಿಕ ಮುಗ್ಗಟ್ಟಿನಿಂದಾಗಿ ಮಾನವನ್ನು ಕಾಯ್ದುಕೊಳ್ಳುವದೇ ಬಹಳ ಕಷ್ಟವಾಗುವದು. ಶತ್ರುಗಳ ಪೀಡೆಯಿಂದ ಕಾರ್ಯಗಳಲ್ಲಿ ಅನೇಕ ವಿಘ್ನಗಳೊದಗಿ ಹೆಚ್ಚಾಗಿ ಧನವ್ಯಯವಾಗುವುದು. ವಿದ್ಯಾಭಿಲಾಷಿಗಳಿಗೆ ತೊಂದರೆಗಳು ಹೆಚ್ಚಾಗುವವು. ಶರೀರ ಪ್ರಕೃತಿಯು ಕೆಡುವುದು. ದುರ್ಜನರಿಂದಾಗಿ ಗೌರವಕ್ಕೆ ಹಾನಿಯಿರುವುದು. ಅಂತೂ ಯಾವ ಭಾಗದಲ್ಲೂ ಹಿತವಿಲ್ಲವು. ತಾ. ೧೨, ೧೩, ೧೪ ಈ ದಿನಗಳು ಬಹಳ ಪ್ರತಿಕೂಲವಿರುವುದರಿಂದ ಅಧಿಕ ಖರ್ಚು, ದೇಹಾಲಸ್ಯ.

**ಕರ್ಕಾಟಕ:**—

ಶುಕ್ಲ ಕೃಷ್ಣಗಳೆಂಬ ಪಕ್ಷ ದ್ವಯಗಳಲ್ಲಿ ಹೇಗೆ ಚಂದ್ರನು ವೃದ್ಧಿ ಮತ್ತು ಕ್ಷೀಣದೆಸೆಯನ್ನು ಹೊಂದುವನೋ ಅಂತೆಯೇ ಆರ್ಥಿಕ ಭಾಗದಲ್ಲಿ ಈ ರಾಶಿಯವರ ಸ್ಥಿತಿಯು. ಎಂದಿಗೂ ಸ್ಥಿರವಾಗಿ ನಿಮ್ಮಲ್ಲಿ ಧನವು ನಿಲ್ಲಲಾರದು. ಕೆಲವೊಂದು ವೇಳೆ ನಿರ್ಧನರಾಗಿಯೂ ಆಗುವಿರಿ. ಇದಕ್ಕೆ ಸರಿಯಾಗಿಯೇ ಈ ವಾರವಿದೆ. ಒಂದು ಕಡೆಯಿಂದ ಸಂಪಾದಿಸುವಿರಿ, ಇನ್ನೊಂದು ಮಾರ್ಗದಿಂದ ಅದು ವ್ಯಯವಾಗುವದು. ಉದರ ರೋಗ, ತಾಪಜ್ವರ, ಇತ್ಯಾದಿಗಳಿಂದ ದೇಹವು ಕ್ಷೀಣದೆಸೆಯನ್ನು ಹೊಂದುವದು. ಬಂಧುಮಿತ್ರರಿಂದ ಯಾವಾಗಲೂ ಕೂಡಿಕೊಂಡಿರತಕ್ಕ ನಿಮ್ಮ ಮನಸ್ಸಿಗೆ ತುಂಬಾ ಆನಂದವಿರುವದು. ತಾ. ೧೦ ರಿಂದ ೧೪ರ ವರೆಗಿನ ದಿನಗಳು ಸಂತೋಷ ಮತ್ತು ಇಷ್ಟಸಿದ್ಧಿದಾಯಕಗಳು.

**ಸಿಂಹ:**—

ನಿಮ್ಮ ಪತ್ನೀ ಪುತ್ರರಿಂದ ಬೇರೆಯಾದ ನೀವು ಬಹಳ ದೀನರಾಗಿರುವಿರಿ. ಶತ್ರುಗಳ ನಿಗ್ರಹಕ್ಕೂ, ಕಾರ್ಯ ನಿರ್ವಾಹಕ್ಕೂ ಬೇಕಾದ ಧನ ಜನ ಬೆಂಬಲವೂ ಸ್ವಸಾಮರ್ಥ್ಯವೂ ಕೂಡ ನಿಮ್ಮಲ್ಲಿದ್ದರೂ "ಊಟಕ್ಕಿಲ್ಲದ ಉಪ್ಪಿನಕಾಯಿ"ಯಂತೆ ಸಮಯಕ್ಕಿಲ್ಲವು. ಆಯ ವ್ಯಯಗಳು ಒಂದನ್ನೊಂದು ಬಿಟ್ಟಿಲ್ಲವು. ಶತ್ರುಗಳ ಉಪದ್ರದಿಂದಲೂ ಇತರ ವಿಘ್ನಗಳಿಂದಲೂ ಕೈಗೊಂಡ ಕಾರ್ಯಗಳನ್ನು ಕೈಬಿಡುವಿರಿ. ಈ ಎಲ್ಲಾ ಕಾರ್ಯಗಳ ಸಲುವಾಗಿ ಮನೋವ್ಯಥೆಯು ನಿಮ್ಮಲ್ಲಿ ಹೆಚ್ಚಿ ಆರೋಗ್ಯವು ಕೆಟ್ಟು ಹೋಗುವುದು. ಪ್ರಯಾಣಕ್ಕೆ ಈ ವಾರವು ಅನುಕೂಲವಿಲ್ಲವು. ತಾ. ೯, ೧೦, ೧೧ ಈ ದಿನಗಳು ಬಹಳ ಹಾನಿಕರಗಳಾಗಿವೆ.

**ಕನ್ಯಾ:**—

ಇಷ್ಟಾನಿಷ್ಟಗಳು ಸಮಾನವಾಗಿರುವ ಪ್ರಯುಕ್ತ, ನಿಮಗೆ ಈ ವಾರದಲ್ಲಿ ಚಿಂತೆಗಾಗಲಿ ಹೆಚ್ಚಾದ ಸಂತೋಷಕ್ಕಾಗಲಿ ಅವಕಾಶವಿಲ್ಲವು. ಖರ್ಚಿಗೆ ಏನೂ ತೊಂದರೆ ಇಲ್ಲವು. ಬೇಕಾದಷ್ಟು ಉತ್ಪತ್ತಿ ಇದ್ದೇ ಇದೆ. ಕೇವಲ ಮಾತಿನಿಂದಾಗಿಯೇ ಕಲಹವುಂಟಾಗುವುದು. ಅಕಸ್ಮಾತ್ತಾಗಿ ಪ್ರವಾಸವು ಸಂಭವಿಸುವದು. ಪಶು ಸಂಪತ್ತು ಮತ್ತು ಪತ್ನೀ ಪುತ್ರ ಮಿತ್ರ ಬಂಧುಬಳಗದವರ ಭಾಗದಲ್ಲೂ ಕೂಡ ಏನೂ ಕೊರತೆ ಇಲ್ಲದುದರಿಂದ ಸಂಸಾರಿಕ ಸುಖವು ಚೆನ್ನಾಗಿರುವುದು. ಆದರೇನು? ಆರೋಗ್ಯ ಭಾಗ್ಯ ಹೀನರಾದ ನಿಮಗೆ ಇವುಗಳೆಲ್ಲವೂ ವ್ಯರ್ಥಗಳೆಂದು ತೋರಬಹುದು. ತಾ. ೧೦ ರಿಂದ ೧೩ರ ವರೆಗಿನ ದಿನಗಳಲ್ಲಿ ಆಯಾಸ ಮತ್ತು ರಾಜಭಯ ಅನಿಷ್ಟಾದಿಗಳು ತೋರಬಹುದು.

**ತುಲಾ:—**

ದೇವರು, ಬ್ರಾಹ್ಮಣರು, ಸಾಧುಗಳು, ಸಂತರು ಇವರುಗಳಲ್ಲಿ ನಿಮಗೆ ತುಂಬಾ ಪೂಜ್ಯ ಬುದ್ಧಿ ಇರುವುದು. ಮತ್ತು ಬಂಧು ಜನರಿಗೆ ಕುಟುಂಬಿಕರಿಗೆ ಹೆಚ್ಚಾಗಿ ಹಿತವನ್ನು ಮಾಡಬೇಕೆಂಬ ಬುದ್ಧಿಯು ನಿಮ್ಮದಾಗಿರುವದು. ಆದರೆ ಕಾಲಗತಿಯಿಂದಾಗಿ ಅವರು ನಿಮ್ಮನ್ನು ತ್ಯಜಿಸುವರಲ್ಲದೆ ನಿಮಗೆ ಸಂಪೂರ್ಣ ಕೆಟ್ಟದ್ದನ್ನು ಮಾಡುವರು.

ನೀವು ಮಾತ್ರ ಯಾರ ಹಂಗು ಆಶ್ರಯಕ್ಕೆ ಒಳಗಾಗದೆ ನಿಮ್ಮ ಕಾರ್ಯವನ್ನು ಮುಂದರಿಸುವರೆ ಸ್ವಯಂಸಮರ್ಥರಾಗಿರುವಿರಿ. ಎಲ್ಲರೂ ನಿಮ್ಮನ್ನು ಗೌರವದಿಂದ ಕಾಣುವರು. ಏನೊಂದೂ ಆಯಾಸವಿಲ್ಲದೇನೇ ಮಿತ್ರರು ಸೇರುವರು. ಧನಲಾಭವಾಗುವದು. ಸಾಂಸಾರಿಕ ಭಾಗದಲ್ಲಿ ಮತ್ತು ವ್ಯವಹಾರಿಕ ಭಾಗದಲ್ಲೂ ಏನೂ ತೊಡಕುಗಳಿಲ್ಲದಿರುವುದರಿಂದ ಬಾಹ್ಯಾಂತರಿಕ ಸುಖಗಳಿಗೆ ಏನೂ ತಡೆಯಿಲ್ಲವು. ಅಂತು ಎಲ್ಲಾ ಭಾಗಗಳಲ್ಲೂ ಈ ವಾರವು ಅತ್ಯುತ್ತಮವಿದೆ. ತಾ. ೯ರಿಂದ ೧೨ರ ತನಕದ ದಿನಗಳು ಬಹಳ ಉತ್ತಮವಿರುವವು—

**ವೃಶ್ಚಿಕ:—**

ನಿಮ್ಮ ಭಾಗ್ಯಚಕ್ರವು ಪೂರ್ವ ರಾಶಿಯವರಿಗಿಂತ ಒಂದು ಮೆಟ್ಟಲು ಮಾತ್ರ ಕೆಳಗಿರುವುದು. ಕೇವಲ ಆರೋಗ್ಯದ ಮಟ್ಟಿಗೆ ಈ ವಾರವು ನಿಮಗೆ ಅಷ್ಟೊಂದು ಚೆನ್ನಾಗಿಲ್ಲದಿದ್ದರೂ ಇತರ ಭಾಗಗಳಲ್ಲಿ ಬಹಳ ಅನುಕೂಲವಿರುವುದು. ಎಂತಹ ಕಠಿಣಸಾಧ್ಯವಾದ ಕಾರ್ಯವನ್ನಾದರೂ ಅದಕ್ಕೆ ಬೇಕಾದ ಜನರನ್ನು ಹಿಡಿದು ಆ ಕಾರ್ಯವನ್ನು ನಿಮ್ಮಂತೆಯೇ ಮಾಡಿಕೊಳ್ಳುವುದರಲ್ಲಿ ಬಹಳ ಕುಶಲರಿರುವಿರಿ. ವ್ಯಾಪಾರದಲ್ಲಾಗಲಿ, ಯಾವ ಉದ್ಯೋಗದಲ್ಲೇ ಆಗಲಿ ವ್ಯಯಕ್ಕಿಂತಲೂ ಆಯವು ಅಧಿಕವಾಗಿಯೇ ಸಿಗುವದು ನಿಮ್ಮ ಅದೃಷ್ಟಬಲದಿಂದ. ಕಾಮುಕ ಜನರ ಅಭಿಲಾಷೆಯು ನಿರ್ವಿಘ್ನದಿಂದ ಪೂರ್ತಿಗೊಳ್ಳುವದು. ಸಮಾಜದಲ್ಲಿ ಗೌರವಾದರಗಳಿಗೆ ಪಾತ್ರರಾಗುವಿರಿ. ಪುತ್ರ ಭೃತ್ಯರ ವಿಷಯವಾದೊಂದು ಚಿಂತೆಯ ಹೊರತು ಇನ್ನಾವ ಭಾಗದಲ್ಲೂ ನಿಮಗೆ ಚಿಂತಿಸುವ ಕಾರಣವಿಲ್ಲ. ವಾರದ ಆದ್ಯಂತ ದಿನಗಳ ಮಟ್ಟಿಗೆ ಉತ್ತಮ ಸ್ಥಿತಿಯು ಇಲ್ಲದಿರುವುದರಿಂದ ಕಾರ್ಯದಲ್ಲಿ ಸ್ವಲ್ಪ ಜಾಗರೂಕರಾಗಿರತಕ್ಕದ್ದು.

**ಧನು:—**

ನಿಮ್ಮ ಮನಸ್ಸೆಂಬ ಕುದುರೆಗೆ ಬುದ್ಧಿಯೆಂಬ ಕಡಿವಾಣವನ್ನು ಹಾಕಿ ಬಿಗಿ ಹಿಡಿಯಿರಿ. ಅದು ದಾರಿ ತಪ್ಪಿ ಅಡ್ಡ ಮಾರ್ಗವನ್ನು ಅನುಸರಿಸಲು ಬಲವಾಗಿ ಸೆಳೆಯುತ್ತಿದೆ. ಕಡಿವಾಣದ ಹಿಡಿತವು ಸಡಿಲಾದಲ್ಲಿ ದೇಹವೆಂಬ ರಥಕ್ಕೆ ಕೆಡುಕು ನಿಶ್ಚಯ. ಸ್ವಭಾವತಃ ನೀವು ವ್ಯವಹಾರಕುಶಲರೂ ಕಾರ್ಯದಕ್ಷರೂ ಆಗಿರುವಿರಿ. ಆದ ಕಾರಣದಿಂದಲೇ ನಿಮ್ಮ ವೃತ್ತಿಯು ನಿಷ್ಫಲವಾಗುವಂತಿಲ್ಲವು. ನಿಮ್ಮ ಶಕ್ತಿಯನ್ನನುಸರಿಸಿ ಲಾಭ ಹೊಂದಿದ ದುಡಿದ ಹಣವೂ ಕೂಡ ಅಲ್ಪ ಕಾಲದಲ್ಲೇ ಸತ್ಕ್ರಿಯಾ ರೂಪವಾಗಿ ವ್ಯಯವಾಗುವುದು. ಭಾರ್ಯಾ ವಿಯೋಗವು ನಿಮಗೆ ಹೆಚ್ಚಿನ ವ್ಯಸನವನ್ನುಂಟು ಮಾಡುವದು. ದೇಹಪೀಡೆಗೆ ಕಾರಣ ಮನೋವ್ಯಥೆಯಿಂದಾಗಿ ಗಾತ್ರವು ಬಹಳ ಕೃಶವಾಗುವುದು. ಈ ವಾರಾದಿಯ ಮೂರು ದಿನಗಳಲ್ಲಿ ಅನಿಷ್ಟಗಳೇ ಹೆಚ್ಚಾಗಿ ಫಲಿಸುವವು—

**ಮಕರ:—**

ಹೆಚ್ಚಿನಂಶ ನಿಮಗೀ ವಾರವು ಅನುಕೂಲವಾಗಿಲ್ಲವು. ಇಷ್ಟ ಸ್ಥಾನಗತರಾದ ಕೇವಲ ಶುಕ್ರಶನಿಗಳಿಂದ ಲಭಿಸತಕ್ಕ ಅನುಕೂಲ ಪರಿಸ್ಥಿತಿಯೂ ಕೂಡ ಇತರ ಗ್ರಹಗಳಿಂದಾಗಿ ನಿಷ್ಫಲವಾಗುವುದು. 'ಶ್ರೇಯಾಂಸಿ ಬಹು ವಿಘ್ನಾನಿ' ಎಂದಂತೆ ನೀವು ಮಾಡತಕ್ಕ ಶುಭಕಾರ್ಯಗಳಿಗೆ ಹೆಚ್ಚೆಚ್ಚು ವಿಘ್ನಗಳೇ ಮುಂಬರುವವು. ಸಾಲಗಾರರಲ್ಲಿ ಕಲಹ ಬಂದು ಕೋರ್ಟು ಕಛೇರಿಗಳಿಗೆ ತಿರುಗುವ ಪ್ರಸಂಗ ಬರುವುದು. ಅನಾರೋಗ್ಯದಿಂದಾಗಿ ಕಜ್ಜಿ ಹುಣ್ಣುಗಳು ಉಂಟಾಗುವವು. ಆಯಕ್ಕೆ ತಕ್ಕ ವ್ಯಯವಿದ್ದೇ ಇದೆ. ಮಿತ್ರರ ಅನುಕೂಲ್ಯವಿದ್ದರೂ, ಸ್ವಯಂಶಕ್ತನಾಗಿದ್ದರೂ ಶತ್ರುಗಳ ಕುಟಿಲನೀತಿಗೆ ಸಿಕ್ಕಿ ಬೀಳದಿರಲಾರಿರಿ. ಬುದ್ಧಿಹ್ರಾಸದಿಂದಾಗಿ ಸ್ಥಾನಭ್ರಂಶರೂ ಆಗುವಿರಿ. ವಾರದ ಆದ್ಯಂತ ದಿನಗಳಲ್ಲಿ ಕಾರ್ಯಜಯ, ಮಾನಸಿಕ ಸುಖ, ಸ್ತ್ರೀ ಸುಖಗಳು ಪ್ರಾಪ್ತವಾಗಲಿವೆ—

**ಕುಂಭ:—**

'ನಾರದೋ ಕಲಹ ಪ್ರಿಯಃ' ಎಂದು ನಾರದನಿಗೆ ಒಂದು ಬಿರುದು ಇರುವುದು. ಅಂತೆಯೇ ನಿಮ್ಮನ್ನೂ ಕೂಡ ನಾರದನ ಅಪರಾವತಾರಿಗಳೆಂದು ಹೇಳಬಹುದು. ಆದರದಾಲ್ಲೊಂದು ವಿಶೇಷ, ನಾರದನು ಲೋಕಹಿತಕ್ಕೋಸ್ಕರವಾಗಿ ಈ ಬಿರುದನ್ನು ಧರಿಸಿರುವನು. ನೀವಾದರೋ ತದ್ವಿಪರೀತ. ಅಂತೂ ನಿಮಗೂ ನಾರದನಿಗೂ ಪೂರ್ವ ಪಶ್ಚಿಮಗಳಿಗಿರುವ ಸಂಬಂಧವಿದೆಯಷ್ಟೆ. ನೀವು ನಿಮ್ಮ ವಿದ್ಯಾಬಲದಿಂದ ನಿಮ್ಮ ಕಾರ್ಯವನ್ನು ಜಯಶೀಲವಾಗಿ ಕೊನೆಗೊಳಿಸುವಿರಿ. ಮಾತ್ರವಲ್ಲ, ಸಾಕಷ್ಟು ಧನಸಂಗ್ರಹವನ್ನೂ ಮಾಡುವಿರಿ. ದೇಹದಲ್ಲಿ ಕಣ್ಣು ನೋವು ಹೊಟ್ಟೆ ನೋವು ಇತ್ಯಾದಿ ರೋಗೋಪದ್ರವಗಳು ಹೆಚ್ಚುವವು. ಎಷ್ಟೊಂದು ನಿಯತವಾಗಿ ಜಾಗ್ರತೆಯಿಂದ ವ್ಯವಹರಿಸಿದರೂ ಅದರ ಫಲವು ಕಲಹ, ಅವಮಾನ ಇತ್ಯಾದಿಗಳೇ, ಮನೆಯಲ್ಲೂ ಕೂಡ ಇದೇ ಗತಿ. ಅಂತೂ ಮನಸ್ಸಿಗೆ ಸುಖವಿಲ್ಲವು. ತಾ. ೧೦, ೧೧ರ ಮಟ್ಟಿಗೆ, ಸ್ವಲ್ಪ ಸುಖ, ವಸ್ತ್ರ ಲಾಭ—

**ಮೀನ:—**

ಸುರಾಸುರ ಗುರುಗಳಾದ ಗುರುಶುಕ್ರರ ಶುಭ ದೃಷ್ಟಿಯು ನಿಮ್ಮ ಮೇಲೆ ಪೂರ್ಣವಿರುವುದರಿಂದ ಇತರ ಗ್ರಹರ ವಕ್ರ ದೃಷ್ಟಿಯು ನಿಮ್ಮಲ್ಲೇನೂ ಫಲಕಾರಿಯಾಗುವಂತಿಲ್ಲ. ಧರ್ಮಕ್ಕೆ ಜಯವೇ ಫಲವಾಗಿರುವುದರಿಂದ ಧರ್ಮಾಸಕ್ತರಾದ ನಿಮಗೆ ಕಾರ್ಯದಲ್ಲಿ ಜಯವಾಗುವುದು. ಸ್ಥಾನಮಾನಗಳನ್ನೂ ಹೊಂದುವಿರಿ. ಆದಗೂ ನಿಮ್ಮ ಭಾಗದ ಶನಿಯು ನಿಮ್ಮನ್ನು ನಿಂತಲ್ಲಿ ನಿಲ್ಲಲು ಬಿಡನು. ಆದಕಾರಣದಿಂದಲೇ ವ್ಯರ್ಥವಾಗಿ ಅಲೆದಾಡುವಿರಿ. ಅನೇಕ ಅನಿಷ್ಟಗಳೂ ಜನರೊಡನೆ ಕಲಹವೂ ಒಂದರ ಮೇಲೊಂದು ಸಂಭವಿಸುವವು. ಸ್ವಜನ ವಿಯೋಗ, ಶರೀರ ಪೀಡೆ, [illegible] ದೇಶಾಟನ ಇತ್ಯಾದಿಗಳಿಂದ ಚಿಂತಾಕುಲರಾದ ನಿಮಗೆ ವಾರವು ಯುಗವಾಗಿ ತೋರಿ ಬರುವುದು ಸ್ವಾಭಾವಿಕ. ತಾ. ೯, ೧೦, ೧೩, ೧೪ ಈ ದಿನಗಳು ಕೆಲವಂಶ ಉತ್ತಮವಿವೆ. ಮೃಷ್ಟಾನ್ನ ಭೋಜನ, ಧನಲಾಭ, ಭೋಗ.

—ಬಾಲಭಾಸ್ಕರ

# THE LAKSHMI INSURANCE COMPANY, LTD.

*Head Office:* LAHORE.

(ESTD. 1924.)

## AVOID ERROR IN JUDGMENT.

"Slightest error in the selection of a Life Office means no adequate return for your investment.

Such Errors can easily be avoided when a glance is cast towards the Facts and Figures which show you the right way."

**"Lakshmi's Record Even in the History of Life Insurance."**

| | | |
|---|---|---|
| Business completed: .... .... | 1.61 | Crores. |
| Total Business .... .... | 11.77 | ,, |
| Life Fund .... .... .... | 1.02 | ,, |

***BONUS*** PER THOUSAND PER ANNUM:

| | | |
|---|---|---|
| Endowment | Rs. | 16/- |
| Whole Life | ,, | 20/- |

*Agency Particulars can be had of*

THE BRANCH MANAGER,
*334, Tumbuchetty St.*
G. T. MADRAS.

OR

A. B. KRISHNA RAJ.
*Organiser*
*Ramakrishna Bldgs.,*
UDIPI.



# ಭಾರತದ ಅತ್ಯುತ್ತಮ ನಟಿ ಯಾರು?

ಉತ್ತಮ ನಟಿಯಾರೆಂಬ ಪ್ರಶ್ನೆಗೆ ಉತ್ತರವೀಯುವ ಮೊದಲು ಉತ್ತಮ ನಟನೆಯೆಂದರೇನೆಂದು ತಿಳಿಯುವುದುತ್ತಮ.

. . .

ಅನುಕರಣೆಯೂ ಪ್ರತಿವ್ಯಕ್ತೀಕರಣವೂ ಉತ್ತಮ ನಟನೆಯೆಂದು ಪರಿಗಣಿಸಲ್ಪಡುವುದಿಲ್ಲ. ಪ್ರತಿರೂಪೀಕರಣವೇ ಉತ್ತಮ ನಟನೆ.

. . .

ದರ್ಪಣವು ಹೇಗೆ ಪ್ರತಿಬಿಂಬವನ್ನು ಇದ್ದಕ್ಕಿದ್ದಂತೆ ತೋರಿಸುತ್ತದೋ ಹಾಗೆಯೇ ಉತ್ತಮ ನಟನು ಅಭಿನಯ ಕಾಲದಲ್ಲಿ ತನ್ನನ್ನು ಪೂರ್ಣವಾಗಿ ಮರೆತು ಪ್ರತ್ಯೇಕ ವ್ಯಕ್ತಿತ್ವವನ್ನೇ ನಿರ್ಮಿಸಲು ಶಕ್ತನಾಗಿರಬೇಕು.

. . .

ಈ ವ್ಯಕ್ತಿತ್ವದ ನಿರ್ಮಾಣಕ್ಕೆ ಬಾಹ್ಯಾಂತರ್ಯಗಳ ಪೂರ್ಣ ಬದಲಾವಣೆಯಾಗಬೇಕು. ಇವೆರಡು ಮೂಲ ವಿಚಾರಗಳನ್ನು ನಮ್ಮ ನಿರ್ದೇಶಕರು ಕಡೆಗಣಿಸಿರುವುದರಿಂದ ಉತ್ತಮ ನಟನಟಿಯರ ಕ್ಷಾಮವು ತಲೆದೋರಿದೆ.

. . .

ಈ ದೃಷ್ಟಿಯಿಂದ ಭಾರತೀಯ ಚಲಚಿತ್ರ ರಂಗದಲ್ಲಿ ಉತ್ತಮ ನಟಿ ಯಾರೆಂದು ನಾವು ನಿಶ್ಚೈಸಲೆತ್ನಿಸೋಣ.

. . .

ಚಲನಚಿತ್ರ ನಭೋಮಂಡಲದಲ್ಲಿ ಅರಸಿ ಅರಿಸಿದರೆ ಸಾಮಾನ್ಯ ಮಟ್ಟಿಗೆ ತಮ್ಮ ಸ್ವಂತ ಬೆಳಕಿನಿಂದ ಮಿನುಗುತ್ತಿರುವ ಈ ಕೆಳಗಿನ ತಾರೆಗಳು ಸಿಗುತ್ತವೆ.

. . .

ಕನಾನ್ ಬಾಲ, ದೇವಿಕಾರಾಣಿ, ಶಾಂತಾ ಆಪ್ಟೆ, ಉಮಾಶಶಿ, ಜಮುನಾ ದೇವಿ, ಕುಮಾರಿ ಸಬಿತಾ· ಈ ಆರು ಜನರಲ್ಲಿ ಉತ್ತಮ ನಟಿಯನ್ನು ಹುಡುಕಬೇಕಾಗಿದೆ.

. . .

ರಜತಪರದೆಯ ಮೇಲೆ ಕಾಣುವ ಶರೀರಸೌಂದರ್ಯ, ಕಂಠ, ಒನಪು, ಮತ್ತು ಕಲಾಚಾತುರ್ಯ—ಈ ನಾಲ್ಕು ಮೂಲವಿಷಯಗಳು ಉತ್ತಮ ನಟಿಯಲ್ಲಿ ಸಮ್ಮಿಲನವಾಗಿರಬೇಕು. ಈ ನಾಲ್ಕು ಮೂಲ ಗುಣಗಳು ಒಂದೇ ಪ್ರಮಾಣದಲ್ಲಿ ಬೆರೆತಿರುವ ನಟ-ನಟಿಯರು ಅತ್ಯಂತ ಅಪರೂಪ.

. . .

ಈಗ ನಮ್ಮ ಉಮೇದ್ವಾರರು ಮೇಲಿನ ಪರೀಕ್ಷಾರಂಗವನ್ನು ಪ್ರವೇಶಿಸಲಿ.

. . .

**ದೇವಿಕಾರಾಣಿ!** ಈಕೆಯು ಸುಂದರಿ. ಪ್ರಭಾಲೇಖನವನ್ನು ಲಕ್ಷಿಸದೆ ಇದ್ದಕ್ಕಿದ್ದಂತೆ ನಿಷ್ಕಲ್ಮಷ ಮುಖಭಾವವನ್ನು ತೋರುವ ಶಕ್ತಿಯು ಈಕೆಯಲ್ಲಿದೆ. ಈ ಸುಂದರಿಯು ದೇವಿಕಾರಾಣಿಯಾಗಿ ಮಾತ್ರ ನಟಿಸಬಲ್ಲಳಲ್ಲದೆ ಪ್ರತಿರೂಪೀಕರಣ ಶಕ್ತಿಯು ಈಕೆಗಿಲ್ಲ

ಲ್ಲಿಲ್ಲ. ಬದಲಾಯಿಸಲಾಗದ ಗ್ರಾಮೀಣತೆ, ಇವಳಲ್ಲಿ ಬೆರೆತುಕೊಂಡಿದೆ. ಮುಗುಳುನಗೆಯು ಮಧುರವಾಗಿದ್ದರೂ ಅರ್ಥರಹಿತವಾಗಿದೆ. ಆವೇಗಗಳು ಇವಳ ಪರಿಶುದ್ಧತೆಯನ್ನು ಕೆಡಿಸಲಿಲ್ಲ. ಆದುದರಿಂದ ಈಕೆಯು ಆವೇಗವಿಹೀನೆ. ಆಕೆಯಲ್ಲಿರುವ ಕೊಂಚ ಒನಪು ಅವಳ ಪುಷ್ಪಮಾಧುರ್ಯದಲ್ಲಿ ಲೀನವಾಗಿದೆ. ಅವಳು ಹಾಡಲಾರಳು. ಕೂಗಬಲ್ಲಳು

. . .

**ಸಬಿತಾ!** ನಿರ್ದೇಶಕರು ಈಕೆಯನ್ನು ಸುಂದರಿಯೆಂದು ಪ್ರಶಂಸಿಸುತ್ತಾರೆ. ಆದರೆ ಇವಳಲ್ಲಿ ಗಂಡುಬೀರಿತನ ಹೆಚ್ಚು. ಸಾಗರ ಕಂಪೆನಿಯು ಈ ನಟಿಗೆ ಕಲಾಚಾತುರ್ಯದ ಅರಿವಿದೆ. ಒನಪಿದೆ. ಈಕೆಯು ಹಾಡಲೆತ್ನಿಸಿ ತನ್ನ ಮಾಧುರ್ಯವನ್ನು ಕೆಡಿಸಿಕೊಳ್ಳುತ್ತಾಳೆ. ಪಾಶ್ಚಾತ್ಯ ವಾತಾವರಣದ ಪ್ರಭಾವವು ಇನ್ನೂ ಈಕೆಯಲ್ಲಿರುವುದರಿಂದ ಭಾರತೀಯ ಭಾವಾವೇಗಗಳನ್ನು ಪ್ರತಿರೂಪೀಕರಿಸುವುದು ಇವಳಿಗೆ ಅಶಕ್ಯವಾಗಿದೆ. ಪ್ರೇಮ ವೈಷಮ್ಯಗಳನ್ನು ಒಡಮೂಡಿಸಲು ಈಕೆಯು ಮಾಡುವ ಯತ್ನವು ವಿಫಲವಾಗುತ್ತದೆ. ಅಂತರ್ಯವನ್ನು ಅಲಕ್ಷಿಸಿ, ಕೇವಲ ಬಾಹ್ಯಾನುಕರಣವು ನಟಿಯಲ್ಲಿರಬಾರದ ಗುಣ.

. . .

**ಶಾಂತಾ ಆಪ್ಟೆ!** ಮಾಧುರ್ಯದ ಕೋಮಲ ಕಂಠದೊಡನೆ ಬೆರೆದಿದೆ. ನಡೆನುಡಿಗಳಲ್ಲಿ ಸ್ವಾಭಾವಿಕತೆಯಿದೆ. ಸ್ತ್ರೀಸೊಬಗಿನೊಡನೆ ಸ್ವಾಭಾವಿಕ ವಿನಯವು ಕೂಡಿಕೊಂಡಿದೆ. ತೃಪ್ತಿಯೊಡನಿರುವ ಆನಂದವು ತೋರಿಕೆಯನ್ನು ಸುಧಾರಿಸುತ್ತದೆ. ಹೃದಯವನ್ನು ಸೂರೆಗೊಳ್ಳುವ ನಗು. ಎಲ್ಲಾ ಆವೇಗಗಳನ್ನು ಸುಲಭವಾಗಿ ಪ್ರದರ್ಶಿಸಬಲ್ಲಳು. ಅತ್ಯಂತ ದಯೆಯನ್ನು ತೋರಬಲ್ಲಳು, ಅಂತರ್ಯದಲ್ಲಿಯೇ ರಹಸ್ಯವನ್ನಿಟ್ಟುಕೊಂಡು



ಸಬಿತಾದೇವಿ.

ಆದರ ಪ್ರಭಾವವು ಬಾಹ್ಯದಲ್ಲಿ ಒಂದಿಷ್ಟೂ ಕಾಣದಂತೆ ಮುಖಭಾವವನ್ನು ಮಾರ್ಪಾಟುಗೊಳಿಸುವ ಶಕ್ತಿ ಈಕೆಯಲ್ಲಿದೆ. ಅವಳ ಕಣ್ಣುಗಳು ಎಳೆವಯಸ್ಸಿನ ಪವಿತ್ರಾನಂದವನ್ನು ತೋರಬಲ್ಲವು. ನವೀನತೆಯು ಅವಳಲ್ಲಿಲ್ಲ. ಮಧ್ಯಕಾಲೀನ ವ್ಯಕ್ತಿತ್ವ. ಪೊಚ್ಚ ಪೊಸ ನೀರೆಯರ ನಾವೀನ್ಯತೆಯು ಇವಳ ಬಳಿ ಸಾರಲಾರದು. ಭಾರತೀಯತೆಯು ಅವಳಲ್ಲಿ ಬಲವಾಗಿದೆ.

. . .

**ಜಮುನಾ!** ಶಾಶ್ವತ ಕೀರ್ತಿಯನ್ನು ಗಳಿಸಿದ "ದೇವದಾಸ್" ನಾಯಕಿಯಾದಿವಳು ನಟಿಯೆಂಬ ಶಬ್ದದ ವಿಶೇಷಣಗಳಿಗೆ ಪಾತ್ರಳಾದವಳಲ್ಲ. ಸುಂದರಿಯೆಂದಿವಳನ್ನು ಕರೆದರೆ ಪ್ರಶಂಸೆಯಾಗಬಹುದು. ಸೊಬಗಿನ ಕಿರಿಯಂಶವೊಂದು ಎಲ್ಲೆಡೆಗಳಲ್ಲಿಯೂ ಹಬ್ಬಿ ಇವಳಲ್ಲೊಂದು ಗುಪ್ತ ಮಾಧುರ್ಯವನ್ನುಂಟುಮಾಡಿದೆ. ಹಾಡಬಲ್ಲಳಾದರೂ ಅತಿ ವಿರಳ. ನಮ್ಮ ಸಹಾನುಭೂತಿಗ

ಕನ್ನು ಕಡೆಗಣಿಸಿ ನಡೆಯುವುದೇ ಈಕೆಯ ಕೀರ್ತಿಯ ಪ್ರಥಮ ಸೋಪಾನ. ಶಾಶ್ವತ ಅನ್ಯಾಯದ ದವಡೆಗೆ ಸಿಲುಕಿದ ಕೊಳ್ಳೆಯಾದ ನಿರ್ಮಲಮನಸ್ಸಿನ "ಪಾರು"ವನ್ನು ಮರೆಯಲಸಾಧ್ಯ. ನಟನಾ ಸಾಮ್ರಾಜ್ಯದ ಕದವು ಸಹಾನುಭೂತಿಯಿಂದಲೇ ಈಕೆಗಾಗಿ ತೆರೆಯಲ್ಪಡಬಹುದು!

. . .

**ಉಮಾಶಶಿ!** "ಚಂಡಿದಾಸ್" ಮತ್ತು "ಭಾಗ್ಯ ಚಕ್ರ"ಗಳಲ್ಲಿ ಈಕೆಯು ಹಾಡಿದ ಹಾಡುಗಳು ಸಾವಿರಾರು ಹೃದಯಗಳನ್ನು ಪ್ರವೇಶಿಸಿ ಅಲ್ಲಿ ಈಗಲೂ ಪ್ರತಿಧ್ವನಿಸುತ್ತಿವೆ. ಸರಳ ಜೀವನದ ಸ್ವಾಭಾವಿಕ ಸೌಂದರ್ಯವೇ ಇವಳ ಸೊಬಗಿನ ರಹಸ್ಯ. ವಿಶೇಷ ಪ್ರಯಾಸವಿಲ್ಲದೆ ಕಠಿನ ಪಾತ್ರಗಳಲ್ಲಿ ಅಭಿಯಿಸುವ ಕಲೆಯನ್ನರಿತಿರುವುದಕ್ಕಾಗಿ ನಟನೆಯಲ್ಲಿ ಈಕೆಗೆ ಉಚ್ಚಸ್ಥಾನವು ಸಿಗಲೇ ಬೇಕಾಗಿದೆ. ಉಚ್ಚಶ್ರೇಣಿಯಲ್ಲಿರಬಲ್ಲ ನಟಿಯೆಂದು ಹೇಳುವುದರಲ್ಲಿ ನಿರ್ವಿವಾದ.

. . .

**ಕನಾನ್ ಬಾಲಾ!** ಸುಂದರಿಯಾದರೂ ಅತಿ ಸುಂದರಿಯಲ್ಲ. ಉಚ್ಚತರಗತಿಯ ಮುಖಭಾವ. ಗಾಂಭೀರ್ಯವಿದ್ದರೂ ಪರಿಪೂರ್ಣ ಮಾಧುರ್ಯವಿಲ್ಲ. ಸಂಗೀತಕಲೆಯ ಅರಿವಿನಷ್ಟೇ ಕೋಮಲತೆಯು ಸ್ವರದಲ್ಲಿ ಅವಿತುಕೊಂಡಿದೆ. ಕಠಿನ ಸ್ವರಗಳನ್ನು ಸುಲಭವಾಗಿ ಹಾಡಿ ಸಂಗೀತ ಸುಖವನ್ನೀಯಬಲ್ಲ ನಟಿಯಿವಳು. ಸೈಗಲನ ಹಾಡಿನಂತೆ ಉಮಾಶಶಿಯ ಸಂಗೀತವು ಶ್ರಾವಕರನ್ನು ತೂಗುಯ್ಯಾಲೆಯಲ್ಲಿರಿಸಿ ಬಿಡುತ್ತದೆ. ಕನಾನ್‌ಬಾಲಳ ಕಂಠವು ಹೃದಯದ ಅಂತರಾಳಕ್ಕೆ ಮಧುರ ಬಾಣದಂತೆ ನಾಟುತ್ತದೆ. ಹಾಡುಗಾರಿಕೆಯಲ್ಲಿ ಈಕೆಗೆ ಪ್ರಥಮ ಸ್ಥಾನ. ಅಭಿನಯದೃಷ್ಟಿಯಲ್ಲಿ ನೋಡುವುದಿದ್ದರೆ ಹೂಮಾಲೆಯು ಇವಳ ಕೊರಳನ್ನಲಂಕರಿಸಬೇಕು. ಇಲ್ಲಿ ಅತಿಶಯೋಕ್ತಿಯು ಅಸಾಧ್ಯ, ಹೋಲಿಕೆಯು ನಿಂದಾಸ್ಪದ. ಪ್ರತಿರೂಪೀಕರಣದ ಕಲಾಮಂದಿರದ ಹೊಸ್ತಿಲಲ್ಲಿ ಇಷ್ಟರತನಕ ಬಲಹೆಜ್ಜೆಯನ್ನಿಟ್ಟವಳು ಕನಾನ್ ಒಬ್ಬಳೇ ಎಂದರೆ ಅತಿಶಯೋಕ್ತಿಯಾಗದು. ಪ್ರಭಾಲೇಖನದ ಯಂತ್ರದೆದುರು ಕನಾನ್ ಬಂದೊಡನೆಯೇ "ಆಕೆಯು" ಮಾಯವಾಗುತ್ತಾಳೆ. ಉಳಿಯುವುದು ಅಭಿನಯಿಸಬೇಕಾದ ಪಾತ್ರ. ಪರಿಪೂರ್ಣ ಮಾರ್ಪಾಟ ಬಾಹ್ಯಾಂತರ್ಯಗಳು ಒಮ್ಮೆಯೇ ಬದಲಾಗುತ್ತವೆ. ಮಾತು ಹೃದಯದ ಅಂತರಾಳದಿಂದ ಹೊರಹೊಮ್ಮುತ್ತದೆ. ಮಾತಿನ ಸರಣಿಯೊಡನೆ ಮುಖಭಾವವು ಬದಲಾಗುತ್ತದೆ. ನಿರ್ಜೀವವಾಗಿರುವುದಕ್ಕೆ ಜೀವಕಳೆ ಬರುತ್ತದೆ. ಸಾಹಿತಿಯ ಭಾವನೆಯು ರೂಪಗೊಳ್ಳುತ್ತದೆ. ಇದಕ್ಕಾಗಿ ಆಕೆಯು ಮಹತ್ವದ ತ್ಯಾಗ ಮಾಡುತ್ತಾಳೆ. ಆಗ ವ್ಯಕ್ತಿತ್ವವಿಲ್ಲದ ವ್ಯಕ್ತಿಯಾಗುತ್ತಾಳೆ– ಕನಾನ್ ಬಾಲ.

ಶಾಂತಾ ಆಪ್ಟೆಯ ಮಧ್ಯಕಾಲೀನತೆಯು ಆಕೆಯ ಬಳಿ ಸಾರುವುದಿಲ್ಲ. "ವಿದ್ಯಾಪತಿ"ಯಲ್ಲಿ ಆಕೆಯು ಮಧ್ಯಕಾಲೀನೆಯಾದರೆ "ಮುಕ್ತಿ"ಯಲ್ಲಿ ನವಕಾಲೀನೆಯಾಗುತ್ತಾಳೆ. ಕಾಲಭೇದದ ಚಿಹ್ನೆಯು ಎಲ್ಲಿಯೂ ಕಾಣಿಸದಂತೆ ಅಭಿನಯಿಸುವುದು ಅವಳಿಗೆ ಪ್ರಕೃತಿದತ್ತವಾಗಿದೆ. ಎಲ್ಲಾ ಮಾನವ ಮನೋಭಾವಗಳ ಪ್ರತಿಬಿಂಬವನ್ನು ಆಕೆಯ ಮುಖದರ್ಪಣವು ತೋರಿಸಬಲ್ಲುದು. ಚಂದ್ರನಂತೆ ಪ್ರಶಾಂತವಾಗಿರಲು ಆಕೆಗರಿತಿದೆ. "ವಿದ್ಯಾಪತಿ"ಯಲ್ಲಿ ಪತಂಗದಂತೆ ಹಾರುತ್ತಾಳೆ ಕನಾನ್. ಆನಂದದಿಂದ ತುಂಬಿದ ಕಣ್ಣಿನ ಹೊಳಪು, ಹುಬ್ಬಿನ ಸೀಮೆಗಳೆಡೆಯಿಂದ ಕಾಣಿಸುವ ಮಿನುಗು, ಆ ಚೆಂದುಟಗಳ ಎರಡೂ ಮೂಲೆಗಳಲ್ಲಿ ನಲಿದಾಡುವ ಅಧರಹಾಸ್, ವೈಯಕ್ತಿಕ ಮಾಧುರ್ಯ, ಹೃದಯವನ್ನು ಸೂರೆಗೊಳ್ಳುವ ಹಾಡು, ಇವೆಲ್ಲವುಗಳೂ ಒಂದಾಗಿ "ಕವಿ"ಯನ್ನು ಸೋಲಿಸಿ "ಅನುರಾಧೆ"ಯನ್ನು ಆಸ್ಥಾನಕ್ಕೆ ಕೊಂಡೊಯ್ಯುವಂತೆ ಮಾಡುತ್ತವೆ.

**ಕನಾನ್ ಬಾಲಾ**- ನಟಿಯು ನಾಲ್ಕು ಲಕ್ಷಣಗಳಿಂದ ಕೂಡಿದ್ದಾಳೆ. ಒಂದೇ ಮಾತಿನಲ್ಲಿ ಹೇಳುವುದಿದ್ದರೆ ಸಬಿತಾ ಓರ್ವ ನಟಿ, ಜಮುನಾ ಉತ್ತಮ ನಟಿ, ಉಮಾ ಮತ್ತು ದೇವಿಕಾ ಮತ್ತಷ್ಟು ಉತ್ತಮ, ಕನಾನ್ ಅತ್ಯುತ್ತಮ ನಟಿ. ಈಗಿನ ನಟನಾ ಸಾಮ್ರಾಜ್ಯದ ರಾಣಿ, ಮಾಯಾವಿನಿ!

Printed and published by P. Venkataramanacharya for and on behalf of SUPPLY AGENCY LTD., at Manipal Power Press, Udipi.

# PLAN YOUR FAMILY'S FUTURE

EVERY INDEPENDENT STATE HAS ITS OWN FIVE OR SEVEN YEAR'S PLANS FOR THE ECONOMIC BETTERMENT OF ITS PEOPLE; EVEN SO HAS EVERY THOUGHTFUL INDIVIDUAL IN EVERY WALK OF LIFE A WELL THOUGHT OUT PLAN OF HIS OWN FOR THE FUTURE WELFARE OF HIS FAMILY.

## PLAN YOUR FAMILY'S FUTURE NOW

If you are a Businessman our Pigmy Deposit Scheme should appeal to you most since it is a Daily Deposit collected at your door. These Daily Deposits grow even as Children do and are therefore well suited for being earmarked for your **Daughter's Marriage** or **Son's Education.**

# The Canara Industrial & Banking Syndicate, Limited.

[INCORPORATED IN BRITISH INDIA]

Estd. Head Office: **UDIPI**, S. INDIA. 1925

MEMBER:

RESERVE BANK OF INDIA. BANKERS' CLEARING HOUSE, BOMBAY.

| | | |
|---|---|---|
| Authorised Capital | Rs. | 10,00,000 |
| Issued Capital | ,, | 8,00,000 |
| Subscribed Capital | ,, | 7,74,500 |
| Paid up Capital | ,, | 3,86,880 |
| Reserves | ,, | 2,16,700 |

**TOTAL RESOURCES EXCEED 51 LAKHS**

# SUPPLY AGENCY LIMITED UDIPI

| | | |
|---|---|---|
| AUTHORISED CAPITAL | Rs. | 1,00,000/- |
| SUBSCRIBED & PAID-UP | „ | 30,320/- |
| RESERVE | „ | 1,078/- |

**RATES OF INTEREST FOR FIXED DEPOSITS**

| | |
|---|---|
| 3 TO 6 MONTHS | 4% |
| 7 „ 11 „ | 5% |
| 12 „ 18 „ | 6% |

**Rate for Fixed Deposits above 2 Years will be quoted on Application.**

*Apply to:*
The
Managing Director.

***Wanted***

RESPECTABLE AGENTS TO CANVASS THE SHARES OF THE COMPANY ON SALARY OR COMMISSION.